ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 45-46 ನವೆಂಬರ್ 13, 2005 ಬೆಲೆ ರೂ. 3.00



ಬೆಂಗಳೂರು : ನೀರು ಕುಡಿಸಲು ಬರುತ್ತಿವೆ ಬ.ಕ.ಗಳು!!



ಸುವರ್ಣ ರಾಜ್ಯೋತ್ಸವದ ಹೊಸ್ತಿಲಲ್ಲಿ ಕರ್ನಾಟಕ

AIFAWH

ಅಂಗನವಾಡಿ 5ನೇ ಅ.ಭಾ. ಸಮ್ಮೇಳನದತ್ತ

'ವೋಲ್ಕರ್ ಸಮಿತಿ'ಯ ಸುತ್ತ : ಸಂಶಯಗಳ ಹುತ್ತ

- ಪಶ್ಚಿಮ ಬಂಗಾಳ : ಶಿಕ್ಷಣ ಸಚಿವರ ಸಂದರ್ಶನ



- ಮಳೆರಾಯನ ಆರ್ಭಟವೂ-ಆಳುವವರ ಹೊಣೆಗೇಡಿತನವೂ

"ಕ್ರೂರಿಯಾದ ಮಾನವ- ಅವನು ತನ್ನನ್ನು ಮುಸ್ಲಿಂ ಎಂದು ಹೇಳಿಕೊಳ್ಳಲಿ ಅಥವಾ ಹಿಂದೂ ಎಂದು ಹೇಳಿಕೊಳ್ಳಲಿ - "ಕಣ್ಣೀರ ಕಾಲುವೆ"ಯಿಂದ ಒಯ್ದುಬಿಡು ಸಂಹಾರಕ್ರಿಯೆಗಿಳಿದಿರುವುದನ್ನು ನಿಸ್ಸಹಾಯಕನಾಗಿ ನಿಂತು ನೋಡುವ ಬದಲು ನನ್ನನ್ನು ಈ ಎಂದು ಸರ್ವವ್ಯಾಪಿ ಶಕ್ತಿಯನ್ನು ಕೇಳಿಕೊಳ್ಳುತ್ತೇನೆ" - ಇದು 58 ವರ್ಷಗಳ ಹಿಂದೆ ಗಾಂಧೀಜಿಯ ಉದ್ಗಾರ. ಅವರ ಜನ್ಮದಿನದ ಸಂದರ್ಭದಲ್ಲಿ ನಿಮ್ಮ ಸಂದೇಶವೇನು ಎಂಬ ಪತ್ರಕರ್ತನೊಬ್ಬನ ಪ್ರಶ್ನೆಗೆ ಉತ್ತರವಾಗಿ ಬಂದ ಉದ್ಗಾರ. ಆಗಷ್ಟೇ ಅವರ ನೇತೃತ್ವದ ಹೋರಾಟದ ಫಲವಾಗಿಯೇ ದೇಶ ಸ್ವತಂತ್ರಗೊಂಡಿತ್ತು. ಆದರೆ ಸ್ವಾತಂತ್ರ್ಯದೊಂದಿಗೇ ಬಂದ ದೇಶವಿಭಜನೆ, ಅದರೊಂದಿಗೇ ವ್ಯಾಪಿಸಿದ ಕೋಮುಹಿಂಸಾಚಾರ ಅವರನ್ನು ಖಿನ್ನವಾಗಿಸಿತ್ತು. "ಈ ರಂಗದಲ್ಲಿ ಗಾಂಧೀಜಿಯ ಪಾತ್ರ ಉಜ್ವಲವಾಗಿದ್ದರೂ ಅವರು ಭಾಗಶಃ ಯಶಸ್ಸು ಪಡೆದರಷ್ಟೇ. ಇದು ಅವರ ಪ್ರಧಾನ ರಾಜಕೀಯ ವಿಫಲತೆಯಾಗಿತ್ತು. ಜಾತ್ಯಾತೀತತೆಗೆ, ನಿರ್ದಿಷ್ಟವಾಗಿ ಹಿಂದೂ-ಮುಸ್ಲಿಂ ಐಕ್ಯತೆಗೆ ಸಂಪೂರ್ಣವಾಗಿ ಕಟಿಬದ್ಧವಾಗಿದ್ದರೂ ಅವರಿಗೆ ಕೋಮುವಾದಿ ದ್ವೇಷ ಹಾಗೂ ಕೋಮುವಾದೀ ವಿಭಜನೆ ಮಾಡುವವರನ್ನು ಯಶಸ್ವಿಯಾಗಿ ಎದುರಿಸಲಾಗಲಿಲ್ಲ" ಎನ್ನುತ್ತಾರೆ ಪ್ರಸಿದ್ಧ ಇತಿಹಾಸಜ್ಞ ಡಾ. ಬಿಪಿನ್‌ಚಂದ್ರ ಅವರ ದೀರ್ಘ ಪ್ರಬಂಧದ ಆಯ್ದ ಅಂಶಗಳನ್ನು ನಮ್ಮ ಓದುಗರಿಗಾಗಿ ಕಳೆದ ವಾರ ಪ್ರಕಟಿಸಿದ್ದೆವು, ಅದರ ಮುಂದಿನ ಭಾಗ.....

ಕೃಪೆ : 'ಸಹಮತ್'ರವರ ಪ್ರಕಟಣೆ "ಗಾಂಧಿ ರೀಕಂನ್ಸಿಡರ್ಡ್"(Gandhi Reconsidered).

ಗಾಂಧೀಜಿ ಜಾತ್ಯತೀತತೆ ಮತ್ತು ಕೋಮುವಾದ

ಅಕ್ಟೋಬರ್ 1946 : "ಕೇಂದ್ರ ಹಾಗೂ ಪ್ರಾಂತ ಸರ್ಕಾರಗಳಲ್ಲಿ ಹಿಂದೂ, ಮುಸ್ಲಿಂ ಅಥವಾ ಬೇರೆ ಯಾವುದೇ ಕೋಮು ವ್ಯತ್ಯಾಸ ಇರಬಾರದು. ಎಲ್ಲರೂ ಭಾರತೀಯರು. ಧರ್ಮ ಒಂದು ವೈಯಕ್ತಿಕ ವಿಷಯ".

ಮತ್ತೆ ಫೆಬ್ರವರಿ 1947 ರಲ್ಲಿ ಇದನ್ನೇ ಹೇಳಿದರು. "ಧರ್ಮ ಒಂದು ವೈಯಕ್ತಿಕ ವಿಷಯ, ಅದನ್ನು ವೈಯಕ್ತಿಕ ವ್ಯಾಪ್ತಿಯೊಳಗೆ ಇಡುವಲ್ಲಿ ನಾವು ಯಶಸ್ವಿಯಾದರೆ ನಮ್ಮ ರಾಜಕೀಯ ಜೀವನದಲ್ಲಿ ಎಲ್ಲವೂ ಸರಿಯಾಗುತ್ತದೆ" ಎಂದರು.

ಏಪ್ರಿಲ್ 1947 ರಲ್ಲಿ ಡಾ. ಝಾಕಿರ್ ಹುಸೇನ್‌ರೊಂದಿಗೆ ಮಾತನಾಡುತ್ತಾ "ಸರ್ಕಾರ ಧಾರ್ಮಿಕ ಶಿಕ್ಷಣವನ್ನು ನೀಡಬೇಕು ಎಂಬುದನ್ನು ನಾನು ಒಪ್ಪುವುದಿಲ್ಲ....... ಹಾಗೆ ಮಾಡಲು ಪ್ರಯತ್ನಿಸಿದರೆ, ಫಲಿತಾಂಶ ಇನ್ನೂ ಕೆಟ್ಟದಾಗುತ್ತದೆ. ಧಾರ್ಮಿಕ ಶಿಕ್ಷಣ ಕೊಡಬಯಸುವವರು, ಅದು ಕಾನೂನು ವ್ಯವಸ್ಥೆ ಮತ್ತು ನೈತಿಕತೆಯನ್ನು ಬುಡಮೇಲು ಮಾಡದವರೆಗೆ, ತಾವೇ ಮಾಡಬಹುದು. ಸರ್ಕಾರ ಎಲ್ಲಾ ಧರ್ಮಗಳಿಗೆ ಸಾಮಾನ್ಯವಾದ ಹಾಗೂ ಎಲ್ಲರೂ ಒಪ್ಪಿದ ಮುಖ್ಯ ಅಂಶಗಳನ್ನು ಆಧರಿಸಿದ ನೀತಿ ಶಿಕ್ಷಣ ನೀಡಬಹುದಷ್ಟೇ. ನಮ್ಮದು ಒಂದು ಜಾತ್ಯತೀತ ಪ್ರಭುತ್ವ' ಎಂದಿದ್ದರು.

.....

ಕೋಮುವಾದ ಮತ್ತು ಜಾತ್ಯತೀತತೆಯ ಬಗ್ಗೆ ಗಾಂಧೀಜಿಯ ವಿಚಾರಗಳ ಇತರ ಕೆಲವು ಅಂಶಗಳನ್ನೂ ಗಮನಿಸಬಹುದು. ಎಲ್ಲಾ ಕೋಮುವಾದಗಳೂ ಕೆಟ್ಟವು ಎಂದು ಪರಿಗಣಿಸ ುತ್ತಲೇ ಅವರು ಧಾರ್ಮಿಕ ಬಹುಸಂಖ್ಯಾತರ ಕೋಮುವಾದ 'ಅಧಿಕಾರದ ಮದವೇರಿರುವುದರಿಂದ' ಇನ್ನೂ ಕೆಟ್ಟದು ಎಂದಿದ್ದರು. ಅಲ್ಲದೆ ಅವರು ಅಲ್ಪಸಂಖ್ಯಾತ ಕೋಮುವಾದ ವನ್ನು ಎಡೆಬಿಡದೆ ಟೀಕಿಸುತ್ತಿದ್ದರೂ, ಅಲ್ಪಸಂಖ್ಯಾತರ ಬಗ್ಗೆ ಅವರ ಅಲ್ಪಸಂಖ್ಯಾತ ಸ್ಥಾನಮಾನದಿಂದಾಗಿ ಬೆಂಬಲದ, ರಕ್ಷಣಾತ್ಮಕವಾದ ನಿಲುವು ಅಂಗೀಕರಿಸಿ ದ್ದರು. ಉದಾಹರಣೆಗೆ ಆಗಸ್ಟ್ 1947 ರಲ್ಲಿ ಅವರು ಹೀಗಂದಿದ್ದರು - 'ಭಾರತದಲ್ಲಿ ಅಲ್ಪಸಂಖ್ಯಾತರು, ಧಾರ್ಮಿಕ ಆಚರಣೆಯಿಂದಾಗಿ ಅಲ್ಪಸಂಖ್ಯಾತ ರಾದವರು, ಆ ಕಾರಣಕ್ಕೆ ತಾವು ಸಣ್ಣವರು ಎಂದು ಭಾವಿಸುವಂತೆ ಮಾಡಿದರೆ, ಆ ಭಾರತ ನನ್ನ ಕನಸಿನ ಭಾರತ ಎಂದು ಹೇಳಲಾರೆ'. ಅಲ್ಪಸಂಖ್ಯಾತರ ಆತಂಕಗಳನ್ನು ಅರಿಯಲು, ನಿವಾರಿಸಲು ಅವರು ಸರ್ವ ಪ್ರಯತ್ನ ನಡೆಸುತ್ತಿದ್ದರು. ನಿರ್ದಿಷ್ಟವಾಗಿ, ಅವರ ನೋವುಗಳು, ಭಾವನೆಗಳು ಹಾಗೂ ಒಟ್ಟಾರೆ ಮಾನಸಿಕತೆಗೆ, ವಿಶೇಷವಾಗಿ ವಿಭಜನೆಯ ನಂತರ ಅವರು ಸ್ಪಂದಿಸುತ್ತಿದ್ದರು. 1947 ರ ನಂತರ ಮುಸ್ಲಿಂ ಲೀಗ್ ಕೈ ಬಿಟ್ಟ ಭಾರತದ ಮುಸ್ಲಿಮರ ನೋವು, ಆತಂಕಗಳನ್ನು ಅವರು ಅರಿತಿದ್ದರು.

......

ಹಿಂದೂ ಧರ್ಮಗ್ರಂಥಗಳ, ಪುರಾಣಗಳ ಪದಪುಂಜಗಳನ್ನು ತಮ್ಮ ಭಾಷಣಗಳಲ್ಲಿ, ಲೇಖನಗಳಲ್ಲಿ ಬಳಸುವ ಮೂಲಕ ಗಾಂಧೀಜಿ ಹಿಂದೂ ಮತೀಯ ಭಾವನೆಗಳಿಗೆ ಇಂಬು ಕೊಡುತ್ತಿದ್ದರು ಎಂದು ವಾದಿಸಲಾಗಿದೆ. ಮುಖ್ಯವಾಗಿ 'ರಾಮರಾಜ್ಯ' ಎಂಬ ಪದ ಬಳಕೆಯ ಬಗ್ಗೆ ಅವರು ಆ ಪದ ಬಳಸುತ್ತಿದ್ದು ಹಿಂದೂ ಪುರಾಣಗಳಲ್ಲಿ ರಾಮ ಉತ್ತಮಿಕೆಯ ಸಂಕೇತ, ರಾಮರಾಜ್ಯ ಉತ್ತಮ ಆಡಳಿತೆಯ ಸಂಕೇತ ಎಂಬ ಕಾರಣಕ್ಕೆ. ಧರ್ಮ ಮತ್ತು ತತ್ವಶಾಸ್ತ್ರದಲ್ಲಿ ಆಳವಾದ ಬೇರುಗಳನ್ನು ಹೊಂದಿದ್ದ ಗಾಂಧೀಜಿ ದೇಶದಲ್ಲಿ ಜನಸಾಮಾನ್ಯರನ್ನು ಮುಖ್ಯವಾಗಿ ರೈತರನ್ನು ಹಿಂದೂ ಮುಸ್ಲಿಂ ಇಬ್ಬರನ್ನೂ ತಲುಪಲು ಇದನ್ನು ಬಳಸಿದರು. 'ರಾಮರಾಜ್ಯ'ದ ಮಾತಾಡುವ ಮೂಲಕ ತಾವು ಹಿಂದೂ ರಾಜ್ಯ ತರಲು ಬಯಸುತ್ತಿದ್ದೇವೆ ಎಂಬ ವಾದವನ್ನು ತಿರಸ್ಕರಿಸುತ್ತಾ ಅವರು ತನ್ನ ಮಟ್ಟಿಗೆ 'ರಾಮರಾಜ್ಯ'ವೆಂದರೆ ದೇವರ ರಾಜ್ಯ, ತನಗೆ ಸತ್ಯವೇ ದೇವರು, ಬೇರಾವ ದೇವರಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಈ ಪದವನ್ನು ಬಿಟ್ಟು ಬೇರಾವ ಪದವೂ ಅಂತಹ ಭಾವನೆಯನ್ನು ಕೋಟ್ಯಾಂತರ ಜನರಿಗೆ ತಲುಪಿಸಲಾರದು ಎಂದವರು ಹೇಳುತ್ತಿದ್ದರು. "ಪ್ರಸಕ್ತ ಅಸಮಾನತೆಯ ಪರಿಸ್ಥಿತಿಗಳಲ್ಲಿ, ಕೆಲವರು ಶ್ರೀಮಂತಿಕೆಯಲ್ಲಿ ಓಲಾಡುತ್ತಿದ್ದು, ಜನಸಾಮಾನ್ಯರಿಗೆ ಸಾಕಷ್ಟು ತಿನ್ನಲು ಇರದ ಪರಿಸ್ಥಿತಿಗಳಲ್ಲಿ ರಾಮರಾಜ್ಯ ಸಾಧ್ಯವಿಲ್ಲ" ಎಂದೂ ಅವರು ಮೇ 1947ರಲ್ಲಿ ಹೇಳಿದ್ದರು. 1920ರ ದಶಕದಲ್ಲಿ ಗಾಂಧೀಜಿಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳು ಧಾರ್ಮಿಕ ಭಾಷೆಯಲ್ಲಿದ್ದರೂ ಅವು ಎಂದೂ ಧಾರ್ಮಿಕ ಆಧಾರದಲ್ಲಿ ಇರಲಿಲ್ಲ. ಆಧುನಿಕ, ಜಾತ್ಯಾತೀತ, ಆರ್ಥಿಕ, ರಾಜಕೀಯ, ನೈತಿಕ ಹಾಗೂ ಸಾಮಾಜಿಕ ನೀತಿಗಳನ್ನು ಆಧರಿಸಿದ್ದವು. ಸ್ವಾತಂತ್ರ್ಯ ಹೋರಾಟ ಒಂದು ಧಾರ್ಮಿಕ ಕರ್ತವ್ಯವೆಂದು ಅವರೆಂದೂ ಹೇಳಲಿಲ್ಲ. ರಾಷ್ಟ್ರೀಯವಾದದ ಸೈದ್ಧಾಂತಿಕ ನಿರ್ವಚನೆ ಯಲ್ಲಾಗಲೀ, ಅದರ ಕಾರ್ಯಕ್ರಮದಲ್ಲಾ ಗಲೀ ಅವರು ಧರ್ಮವನ್ನು ಬಳಸಲಿಲ್ಲ ಅಥವಾ ಆಗಿನ ಆಳರಸರ ಧರ್ಮವನ್ನು ಟೀಕಿಸಲಿಲ್ಲ.

ಗಾಂಧೀಜಿ ಕೋಮುವಾದವನ್ನು ಸಂಪೂರ್ಣವಾಗಿ ವಿರೋಧಿಸಿದ್ದರಿಂದ ಹಾಗೂ ಜಾತ್ಯಾತೀತತೆಗೆ ಬಲವಾಗಿ ಬದ್ಧರಾಗಿದ್ದುದರಿಂದ ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳಿಬ್ಬರೂ ಅವರನ್ನು ದ್ವೇಷಿಸುತ್ತಿದ್ದರು, ಅವರ ವಿರುದ್ಧ ವಿಷಮಯ ಪ್ರಚಾರ ನಡೆಸಿದರು. ಇದರಿಂದ ಅಂತಿಮವಾಗಿ ಅವರು ಒಬ್ಬ ಮತಾಂಧನಿಂದ ಕೊಲೆಯಾದರು.

ಹಿಂದೂ ಕೋಮುವಾದಿಗಳು ಅವರು ಮುಸ್ಲಿಂ-ಪರ ಹಾಗೂ ತಮ್ಮ 'ಹಿಂದೂ ರಾಷ್ಟ್ರ'ಕ್ಕೆ ವಿಶ್ವಾಸಘಾತ ಮಾಡುವವರು ಎಂದು ಜರೆದರೆ, ಮುಸ್ಲಿಂ ಕೋಮುವಾದಿಗಳು ಅವರು ಮುಸ್ಲಿಂಮರನ್ನು ಅಡಿಯಾಳಾಗಿಸಲು, ಅವರ ಸಂಸತಿಯನ್ನು ದಮನ ಮಾಡಲು ಮತ್ತು ಹಿಂದೂ ರಾಷ್ಟ್ರವನ್ನು ಸ್ಥಾಪಿಸಲು ಹೊರಟವರು ಎಂದು ಜರೆದರು.

ಒಂದು ಅಹಿಂಸಾತ್ಮಕ ಆಂದೋಲನಕ್ಕೆ ನೇತೃತ್ವ ನೀಡಿ ವಸಾಹತುಶಾಹಿ ಆಳ್ವಿಕೆಯನ್ನು ಕಿತ್ತೊಗೆದು, ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಸ್ಥಾಪಿಸಿದ್ದು ಗಾಂಧೀಜಿಯ ಒಂದು ಮಹಾನ್ ಯಶಸ್ಸು ಆಗಿದ್ದರೆ, ಅವರ ಅತಿದೊಡ್ಡ ವಿಫಲತೆ, ವೈಯಕ್ತಿಕ ನೋವು ಹತಾಶೆಯೆಂದರೆ ಕೋಮುವಾದದ ಬೆಳವಣಿಗೆಯನ್ನು ತಡೆಯಲಾಗದ್ದು ಹಾಗೂ ದೇಶದ ವಿಭಜನೆಯನ್ನು ತಡೆಯಲಾಗದ್ದು. ನಿಜ, 1947ರ ನಂತರದ ಭಾರತದಲ್ಲಿ ಕೊನೆಗೂ ಜಾತ್ಯಾತೀತತೆ ಗೆದ್ದಿತು.

ಆದರೆ ಇತರ ರಾಷ್ಟ್ರೀಯವಾದಿ ಮುಖಂಡರಂತೆ ಅವರು ಕೋಮುವಾದದ ಅಪಾಯವನ್ನು ಕಡೆಗಣಿಸಲಿಲ್ಲ. ಆದರೆ ಈ ಸಮಸ್ಯೆಯನ್ನು 'ಪರಿಹರಿಸುವುದು' ಹೇಗೆ ಎಂಬುದು ಅವರಿಗೆ ತಿಳಿದಿರಲಿಲ್ಲ. "ಸ್ವಾತಂತ್ರ್ಯ ಮತ್ತು ಹಿಂದೂ ಮುಸ್ಲಿಂ ಐಕ್ಯತೆ ಸಾಧಿಸಲು ತನ್ನಲ್ಲಿರುವ ಏಕೈಕ ದಾರಿಯೆಂದರೆ ಸತ್ಯಾಗ್ರಹ" ಎಂದ ಗಾಂಧೀಜಿಗೆ ವಸಾಹತುಶಾಹಿ ಆಳರಸರ ವಿರುದ್ಧ 'ಸತ್ಯಾಗ್ರಹ'ದ ಆಯುಧವನ್ನು ಬಳಸಲು ತಿಳಿದಿತ್ತು ಅಥವಾ ಕೋಮುವಾದದ ವಿರುದ್ಧ ಹೇಗೆ ಬಳಸುವುದೆಂದು ತಿಳಿದಿರಲಿಲ್ಲ. 'ಸತ್ಯಾಗ್ರಹ'ದ ಒಂದು ಭಾಗವಾದ ಉಪವಾಸವನ್ನು ಅವರು ತೀವ್ರ, ಹಿಂಸಾತ್ಮಕ ಪರಿಸ್ಥಿತಿಗಳಲ್ಲಿ ಬಳಸಿದರು. ಅಂದು ಉಪವಾಸಗಳು ಪರಿಸ್ಥಿತಿಯನ್ನು ತಿಳಿಗೊಳಿಸಿದವು ಕೂಡಾ. ಆದರೆ ಅದು ತಾತ್ಕಾಲಿಕವಾಗಿರುತ್ತಿತ್ತು. ಅವರ ಉಪವಾಸಗಳು ಕೋಮುವಾದದ ಸಮಸ್ಯೆಯನ್ನು ಪರಿಹರಿಸಲಿಲ್ಲ, ಅವು ಮತ್ತೆ-ಮತ್ತೆ ಸಂಭವಿಸುವುದನ್ನು ತಡೆಯಲಿಲ್ಲ.

ಈ ವಿಫಲತೆಯೇನೇ ಇದ್ದರೂ ಹಿಂದೂ - ಮುಸ್ಲಿಂ ಐಕ್ಯತೆಗಾಗಿ, ಎಷ್ಟೇ ಅಸಮರ್ಪಕವಾಗಿ ಯಾದರೂ ವೈಯಕ್ತಿಕವಾಗಿ ಜೀವನಪರ್ಯಂತ ಹೋರಾಡಿದವರು ಗಾಂಧೀಜಿ ಮಾತ್ರ.

ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ - ಸಿಪಿಐ(ಎಂ) ಸ್ಪರ್ಧೆ



ಜೂನ್ 2006ರಲ್ಲಿ ರಾಜ್ಯ ವಿಧಾನಪರಿಷತ್ತಿಗೆ ಪದವೀಧರರ ಕ್ಷೇತ್ರದಿಂದ ಚುನಾವಣೆಗಳು ನಡೆಯಲಿವೆ. ಈ ಚುನಾವಣೆಯಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯ 'ಬೆಂಗಳೂರು ಪದವೀಧರ ಕ್ಷೇತ್ರ'ದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಕೆ.ಎಸ್. ಲಕ್ಷ್ಮಿಯವರನ್ನು ಕಣಕ್ಕಿಳಿಸಲು ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಪದವೀಧರರ ನೋಂದಾವಣೆಯು ಉತ್ಸಾಹದಿಂದ ನಡೆಯುತ್ತಿದೆ. ಈಗ ಇನ್ನಷ್ಟು ತೀವ್ರಗೊಳ್ಳಬೇಕಿದೆ.

ಪ್ರಸ್ತುತ ಜನವಾದಿ ಮಹಿಳೆ ಸಂಘಟನೆಯ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಎಸ್ಎಫ್ಐ ಕರ್ನಾಟಕ ರಾಜ್ಯ ಸಮಿತಿಯ ಮಾಜಿ ಅಧ್ಯಕ್ಷರೂ ಆದ ಕೆ.ಎಸ್.ಲಕ್ಷ್ಮಿಯವರು, ಬೆಂಗಳೂರು ವಿಶ್ವವಿದ್ಯಾಲಯದ ಪದವೀಧರರ ಕ್ಷೇತ್ರದಿಂದ ಎರಡು ಬಾರಿ ಚುನಾಯಿತಗೊಂಡ ಸೆನೆಟ್ ಸದಸ್ಯರಾಗಿ ಜವಾಬ್ದಾರಿ ನಿರ್ವಹಿಸಿದ್ದಾರೆ. ಅದಕ್ಕೂ ಹಿಂದೆ ಅವರು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ವಿದ್ಯಾರ್ಥಿ ಸಂಘದ ಜಂಟಿ ಕಾರ್ಯದರ್ಶಿಯಾಗಿಯೂ ಜವಾಬ್ದಾರಿ ನಿರ್ವಹಿಸಿದ್ದಾರೆ.

ಕಮ್ಯೂನಿಸ್ಟ್ ನಾಯಕ ಸಿಂಪ್ಸನ್ ಸೋನ್ಸ್‌ರವರ ನಿಧನಕ್ಕೆ ಸಿಪಿಐ(ಎಂ) ಸಂತಾಪ

ಸಿಪಿಐನ ರಾಜ್ಯ ಕಾರ್ಯದರ್ಶಿಯಾಗಿ, ಎಐಟಿಯುಸಿ ನೇತಾರನಾಗಿ ಜನರ, ಕಾರ್ಮಿಕರ ಏಳಿಗೆಗಾಗಿ ದುಡಿದ ಸಿಂಪ್ಸನ್ ಸೋನ್ಸ್ ಅವರ ನಿಧನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿದ್ದ ಸೋನ್ಸ್‌ರವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಅವಿಭಜಿತ ದ.ಕ. ಜಿಲ್ಲೆಯಲ್ಲಿ ನೇಯ್ಗೆ, ಹೆಂಚು, ಮುದ್ರಣ ಮತ್ತಿತರ ಕಾರ್ಮಿಕರನ್ನು ಅವರು ಸಂಘಟಿಸಿದ್ದರು. ಅವರ ನಿಧನದಿಂದ ಕಾರ್ಮಿಕ ಚಳುವಳಿಗೆ ನಷ್ಟವುಂಟಾಗಿದೆ.

ಸಿಂಪ್ಸನ್ ಸೋನ್ಸ್ ಅವರ ಪತ್ನಿ, ಮಕ್ಕಳು ಹಾಗೂ ಕುಟುಂಬ ವರ್ಗದವರಿಗೆ, ಸಿಪಿಐ(ಎಂ) ತನ್ನ ತೀವ್ರ ಸಂತಾಪವನ್ನು ಸೂಚಿಸುತ್ತದೆ.

ಮೃತರ ಅಂತಿಮ ಯಾತ್ರೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಬಿ.ಮಾಧವ, ಪಕ್ಷದ ಉಡುಪಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಡೇವಿಡ್ ಕರ್ಕಡ, ಸಿಐಟಿಯು ದ.ಕ. ಜಿಲ್ಲಾ ಮುಖಂಡ ಸುಕುಮಾರ್ ಭಾಗವಹಿಸಿದ್ದರು.

ಕರ್ನಾಟಕ: ಸುವರ್ಣ ರಾಜ್ಯೋತ್ಸವದ ಹೊಸ್ತಿಲಲ್ಲಿ

ನವೆಂಬರ್ 1, 2005 ಕ್ಕೆ ಕರ್ನಾಟಕ ಏಕೀಕರಣದ 50ನೇ ವರ್ಷಾಚರಣೆಯು ಆರಂಭಗೊಂಡಿದೆ. ಕರ್ನಾಟಕ ಏಕೀಕರಣದ ನೈಜ ಆಶಯಗಳು ಸಾಕಾರಗೊಂಡದ್ದೆಷ್ಟು. ಈ ನಿಟ್ಟಿನಲ್ಲಿ ಇರುವ ಅಡ್ಡಿಗಳೇನು? ಈ ಅವಧಿಯಲ್ಲಿ ನಾಡು ಸಾಗಿ ಬಂದ ದಾರಿ ಎಂಥದ್ದು, ವೈಫಲ್ಯಗಳಿಗೆ ಹೊಣೆ ಯಾರದ್ದು? ಈ ವಿಚಾರಗಳನ್ನು ವಿಮರ್ಶಿಸಲು ಅಗತ್ಯವಾದ ದೃಷ್ಟಿಯಾವುದು ಎಂದು ವಿವರಿಸಿದ್ದಾರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್. ಮುಂದಿನ ದಿನಗಳಲ್ಲಿ ಪತ್ರಿಕೆ ಪ್ರಕಟಿಸಲಿರುವ ಕಳೆದ ಐವತ್ತು ವರ್ಷಗಳ ನಾಡಿನ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಜೀವನದ ಕುರಿತ ವಿಮರ್ಶಾತ್ಮಕ ಚಿಕಿತ್ಸಕ ದೃಷ್ಟಿಯ ಹಾಗೂ ಭವಿಷ್ಯದ ದಾರಿಯ ಕುರಿತ ಚಿಂತನಶೀಲ ಲೇಖನಮಾಲೆಯ ಮೊದಲ ಲೇಖನ ಇದು.

ಕರ್ನಾಟಕದ ಏಕೀಕರಣ ರಾಜಕೀಯವಾಗಿ ಸಾಕಾರಗೊಂಡು 50ನೇ ವರ್ಷಕ್ಕೆ ಹೆಜ್ಜೆಯಿಟ್ಟಿದೆ. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಗೀತೆ ಕರ್ನಾಟಕದಾದ್ಯಂತ ಅನುರಣನಗೊಂಡು ಕನ್ನಡ ಭಾಷೆ ಜನರನ್ನು ಬೆಸೆಯುವ ಐಕ್ಯತೆಯ ಸಾಧನವಾಗಿ ರೂಪುಗೊಂಡು 8-9 ದಶಕಗಳೇ ಸಂದಿವೆ. 50 ರ ಹೊಸ್ತಿಲಲ್ಲಿ ಕರ್ನಾಟಕ ನಿಂತಿರುವಾಗ ಒಂದೆಡೆ ಕರ್ನಾಟಕದಲ್ಲಿ ಅತಿವೃಷ್ಟಿಯ ಫಲವಾಗಿ ರಾಜ್ಯದಲ್ಲೆಲ್ಲಾ ಆತಂಕ ಮೂಡಿದೆ. ಬೆಂಗಳೂರು ಮುಂತಾದ ನಗರಗಳಲ್ಲಿ ನೀರು ಕೋಡಿವರಿದು ರಸ್ತೆಗಳೇ ಕಾಲುವೆಗಳಾಗಿ ಮನೆಗಳೆಲ್ಲಾ ಕೆರೆಗಳಾಗಿ ಚರಂಡಿಗಳಾಗಿ ನಗರಗಳ ಜನತೆ ಅದರಲ್ಲಿಯೂ ತಗ್ಗಿನಲ್ಲಿ, ಚರಂಡಿಗಳ ಪಕ್ಕದಲ್ಲಿ ವಾಸಿಸುವ ಬಡ ಜನತೆ ಮನೆ, ಮಠ, ಬಟ್ಟೆಬರೆಗಳನ್ನು, ಜೀವವನ್ನು ಕಳೆದುಕೊಂಡು ಧಾವಂತ ಪಡುತ್ತಿದೆ. ಚರಂಡಿಯ ನೀರು ಮನೆಗಳಿಗೆ, ಬಾವಿ, ಬೋರ್‌ವೆಲ್‌ಗಳಿಗೆ ಕುಡಿಯುವ ನೀರಿನ ಕೊಳವೆಗಳಿಗೆ ನುಗ್ಗಿ ಕುಡಿಯುವ ನೀರು ಕೂಡಾ ಇಲ್ಲದೆ ರೋಗಗಳಿಗೆ ತುತ್ತಾಗುವ ಅಪಾಯದಲ್ಲಿದೆ. ಕರ್ನಾಟಕದ ಅಭಿವೃದ್ಧಿಯ ರೀತಿಯನ್ನೇ ಪ್ರಶ್ನಾರ್ಹವಾಗುವಂತೆ ಮಾಡಿದೆ. ಮತ್ತೊಂದೆಡೆ ಈ ಮಳೆಯ ನಡುವೆಯೂ ಐ.ಟಿ. ಮೇಳ ನಡೆದಿದೆ. ಅನೇಕ ವಾದ ವಿವಾದಗಳಿಗೆ, ಪ್ರಶ್ನೆಗಳಿಗೆ ಐಟಿಯನ್ನು ಮಿತಿಯಲ್ಲದೆ ಹೊಗಳುವ ಭಟ್ಟಂಗಿತನಕ್ಕೆ ಕಾರಣವಾಗಿದೆ.

ಪ್ರತ್ಯೇಕತೆ ಅಪಾಯ

ಅದೇ ಸಮಯದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ತುಡಿದ, ದುಡಿದ ಕರ್ನಾಟಕದ ಭಾಗಗಳಲ್ಲಿ ಉತ್ತರಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಕೊಡಗು ಮೊದಲಾದ ಕಡೆ ಕೆಲ ಶಕ್ತಿಗಳು, ವಿವಿಧ ಕಾರಣಗಳನ್ನೊಡ್ಡಿ ಸುವರ್ಣ ಕರ್ನಾಟಕ ರಾಜ್ಯೋತ್ಸವವನ್ನೇ ಬಹಿಷ್ಕರಿಸಿವೆ. ಕನ್ನಡ ನಾಡು ಎಂಬುದು ಸದಭಿಮಾನದ ಗೂಡಾಗುವುದಕ್ಕೆ ಬದಲಾಗಿ ನಿರಭಿಮಾನದ, ದುರಭಿಮಾನದ ಕಾಡಾಗುತ್ತಿದೆ.

ಕರ್ನಾಟಕ ಒಂದಾಗಬೇಕು ಎಂದು ಬಯಸಿದ ಕರ್ನಾಟಕವನ್ನು ಎತ್ತಿಹಿಡಿದ ಜನತೆಯ ಕನಸುಗಳು, ಹಂಬಲಗಳು ಈಡೇರಿದ್ದರೆ ಇಂತಹ ಪರಿಸ್ಥಿತಿ ಬರುತ್ತಿತ್ತೆ? ಕರ್ನಾಟಕ ಏಕೀಕರಣದಿಂದ ಜನತೆಗೆ ಏನೂ ಪ್ರಯೋಜನವಾಗಿಲ್ಲ. ನಾವು ಪ್ರತ್ಯೇಕಗೊಳ್ಳಬೇಕು ಎಂಬ ಕೂಗು ವಾಸ್ತವವಾದುದೆ?

ಮಹತ್ತರ ಸವಾಲು


ಕರ್ನಾಟಕ 50 ವರ್ಷಗಳ ಕಾಲ ಸಾಗಿಬಂದ ದಾರಿಯ ಕಡೆಗೆ ಕಣ್ಣು ಹೊರಳಿಸಿ ಹಾದಿಯ ಅಂಕುಡೊಂಕು, ದಿಕ್ಕುದೆಸೆಗಳನ್ನು ಆಳವಾಗಿ ವಿಮರ್ಶಿಸಿ ಎಲ್ಲಿಗೆ ತಲುಪಬೇಕಾಗಿತ್ತು, ಎಲ್ಲಿ ಬಂದು ನಿಂತಿದ್ದೇವೆ ಎಂಬುದನ್ನು ನಿಖರವಾಗಿ ಮತ್ತು ವಾಸ್ತವವಾಗಿ ಅಳೆದು ಕರ್ನಾಟಕತ್ವ ಬೆಳಗುವಂತೆ ಕರ್ನಾಟಕದ ಜನರ ಬದುಕು ಹಸನಾಗುವಂತೆ ಮುಂದೆ ಸಾಗಬೇಕಾದ ದಾರಿಯನ್ನು ಎಲ್ಲರೂ ಒಟ್ಟಾಗಿ ರೂಪಿಸಿ ಕೊಳ್ಳಬೇಕಾದುದು ಒಂದು ಮಹತ್ತರ ಸವಾಲು.

ಸುವರ್ಣ ಕರ್ನಾಟಕ 'ಹಾಹಾ' 'ಹೋಹೋ' ಎಂಬ ಅಬ್ಬರಗಳಲ್ಲಿ ಅಷ್ಟು ಸಾಧಿಸಿದ್ದೇವೆ, ಇಷ್ಟೊಂದು ಸಾಧಿಸುವ, ಮತ್ತಷ್ಟು ಯೋಜನೆಗಳನ್ನು ಘೋಷಿಸುತ್ತೇವೆ ಎಂಬ ಆರ್ಭಟಗಳಲ್ಲಿ ನಮ್ಮ ತಲೆಯನ್ನು ಸರ್ಕಾರದ ಕೈಗೆ, ಸಾಂಸ್ಕೃತಿಕ ಒಡೆಯರ ಕೈಗೆ, ಮಾಧ್ಯಮಗಳ ಕೈಗೆ ಒಪ್ಪಿಸಿ ನಮ್ಮನ್ನು ನಾವೇ ಕಳೆದುಕೊಂಡು ಬಿಡುವ ಅಪಾಯದಿಂದ ತಪ್ಪಿಸಿಕೊಳ್ಳುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಅದುದರಿಂದಲೇ ಅದೊಂದು ಸವಾಲು. ಮೇಲು ಮೇಲಿನ ತೇಲು ಮಾತುಗಳಲ್ಲಿ ತೃಪ್ತಿ ಪಡೆವ, ಗಹನವಾದದ್ದೆನ್ನನೋ ಕಂಡು ಹಿಡಿದಿದ್ದೇವೆಂಬ ಭ್ರಮೆ ಹುಟ್ಟಿಸುವ ಮಾಯಾಜಾಲದಲ್ಲಿ ಮುಳುಗಿ ಹೋಗದೆ ಈ 50 ವರ್ಷಗಳ ಉದ್ದಕೂ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮೊದಲಾದ ರಂಗಗಳಲ್ಲಿ ಹೊಸೆದ ಅನೇಕ ಸತ್ಯಗಳನ್ನು ಬಗೆದುನೋಡುವ ಎದೆಗಾರಿಕೆಯನ್ನು ಬಯಸುತ್ತದೆ ಈ ಕೆಲಸ.ಆದ್ದರಿಂದಲೇ ಅದು ಒಂದು ಮಹತ್ತರ ಸವಾಲು.

ಜಿ.ಎನ್.ನಾಗರಾಜ್

ರಾಜಭಕ್ತಿ, ಸ್ವಾಮಿಭಕ್ತಿಗಳೆಂಬ ಸಾವಿರಾರು ವರ್ಷಗಳು ಕರ್ನಾಟಕದ ಜನತೆಯನ್ನಾಳಿದ ಸಿದ್ಧಾಂತಗಳನ್ನು ಪಕ್ಕಕ್ಕೆ ಸರಿಸಿ ಮೈಸೂರು ರಾಜರಿಂದ ಸಂಡೂರಿನ ಘೋರ್ಪಡೆಯವರೆಗೆ, ಜತ್ತದ, ಹಿರಿ, ಕಿರಿ ಕುರಂದವಾಡಗಳ ಪಾಳೆಯಗಾರರುಗಳನ್ನು ಇತಿಹಾಸದ ಕಸದಬುಟ್ಟಿಗೆ ಎಸೆದ, ವಿವಿಧ ಜಾತಿಗಳ, ಪ್ರದೇಶಗಳ ವಿವಿಧ ಕನ್ನಡಂಗಳ, ಕನ್ನಡೇತರ ಭಾಷಿಕರ ವಿವಿಧ ಅನುಮಾನ, ಶಂಕೆ ಪೂರ್ವಾಗ್ರಹಗಳನ್ನು ಮೀರಿ ಕರ್ನಾಟಕದ ಏಕೀಕರಣವನ್ನು ಸಾಧಿಸಿದ ಮಹಾ ಪ್ರಯತ್ನದಷ್ಟೇ ಬೃಹತ್ ಪ್ರಮಾಣದ, ಜಟಿಲವಾದ ಸವಾಲು ಇದು.

ಇಂತಹ ಸವಾಲನ್ನು ಎತ್ತಿಕೊಳ್ಳುವುದು ಕರ್ನಾಟಕದ ಸರ್ಕಾರಕ್ಕೆ ಆಳುವ ವರ್ಗದ ಪಕ್ಷಗಳಿಗೆ ಸಾಧ್ಯವಿಲ್ಲ. ಏಕೆಂದರೆ ಅದಕ್ಕೆ ಬೇಕಾದ ಶೋಧಕ ಪ್ರಜ್ಞೆ, ಆಳ ಅವರಿಗಿಲ್ಲ .ಹಾಗೂ ಅಂತಹ ಒಂದು ವಿಶ್ಲೇಷಣೆ ಹಿಂದೆ ಪ್ರಜಾಪ್ರಭುತ್ವದ ಏಕೀಕರಣದ ಸಿದ್ಧಾಂತ ರಾಜ, ಮಹಾರಾಜರ ಬುಡಕ್ಕೆ ಕೊಡಲಿ ಪೆಟ್ಟಾದಂತೆ, ಇಂದಿನ ಆಳುವವರ್ಗದ ಪಕ್ಷಗಳಿಗೆ, ವರ್ಗಗಳಿಗೆ ಮೃತ್ಯುವಾಗುತ್ತದೆ. ಇನ್ನು ಇದು ಕರ್ನಾಟಕದ ಪತ್ರಿಕೆಗಳಿಂದ ಸಾಧ್ಯವೇ? ಕೇವಲ ಸಮಯಕ್ಕೆ ತಕ್ಕ ತತ್ವಗಳನ್ನು ತೂರಿಬಿಡುತ್ತಿರುವ ಈ ಪತ್ರಿಕೆಗಳು ನೂರಾರು ಪುಟಗಳ ಲೇಖನಗಳನ್ನು, ಪುರವಣಿ, ವಿಶೇಷಸಂಚಿಕೆಗಳನ್ನು ಸೃಷ್ಟಿಸಬಹುದು. ಅಂಕಿಅಂಶಗಳು, ವಿಶ್ಲೇಷಣೆಗಳಿಂದ ತುಂಬಬಹುದು. ಇಂತಹ ಒಂದು ಸವಾಲನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಯತ್ನಗಳು ಒಂದೇ ಎರಡೋ ಮಾತ್ರ ನಿರೀಕ್ಷಿಸಬಹುದು. ಏಕೆಂದರೆ ಆಳುವ ವರ್ಗದ ಶೋಷಣೆಯನ್ನು ಸಂರಕ್ಷಿಸ ಲೆಂದೇ, ವಾಸ್ತವವನ್ನು ಜನತೆಯಿಂದ ಮುಚ್ಚಿಡ ಲೆಂದೇ ಅನುದಿನ ಹಲವು 'ಸತ್ಯ'ಗಳನ್ನು ಸೃಷ್ಟಿಸುವ ಈ ಪತ್ರಿಕೆಗಳು ತಮ್ಮ ವಿರುದ್ಧ ತಾವು ತಿರುಗಲಾರವು ಮಾತ್ರವಲ್ಲ ಸ್ವಾತಂತ್ರ್ಯ ಚಳುವಳಿ ಹಾಗೂ ಕರ್ನಾಟಕದ ಏಕೀಕರಣ ಸಂದರ್ಭದಲ್ಲಿದ್ದ ಜನಪರತೆ ಜನತೆಯ ಜೊತೆಗಿನ ಹತ್ತಿರದ ಸಂಬಂಧಗಳನ್ನು ಕಳೆದುಕೊಂಡು, ಹೆಚ್ಚು ಹೆಚ್ಚು ಪ್ರತಿಗಾಮಿಗಳಾಗಿರುವ ಈ ಪತ್ರಿಕೆಗಳಿಂದ ಹೊಸದಾಗಿ ಆರಂಭವಾಗಿರುವ ದೃಶ್ಯ ಮಾಧ್ಯಮಗಳಿಂದ ಅವುಗಳನ್ನು ನಿರೀಕ್ಷಿಸುವುದು ಅರ್ಥಹೀನ.



ಇನ್ನು ಕರ್ನಾಟಕದ ಜನತೆಯ ಗಣನೀಯ ಭಾಗ. ಇಂತಹ ಹೊಣೆಗಾರಿಕೆಯನ್ನು ನಿರ್ವಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿರುವುದು ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಿಂತಕರು, ವಿಜ್ಞಾನಿಗಳ ಬಗ್ಗೆ. ಕರ್ನಾಟಕದ ಏಕೀಕರಣ ಹಾಗೂ ನಂತರ ಬಹಳಷ್ಟು ಸಿದ್ಧಾಂತಗಳನ್ನು ಹೊಸೆದು, ತತ್ವಗಳನ್ನು ಪ್ರತಿಪಾದಿಸಿ, ವಿಶ್ಲೇಷಣೆಗಳನ್ನು ಹೊಸೆದು ಜನತೆಯ ಬೌದ್ಧಿಕ ನಾಯಕರಾಗಿ ರೂಪುಗೊಂಡಿರುವವರು ಇವರು. ಅದೇ ಕಾರಣಕ್ಕಾಗಿಯೇ ಇಂದಿನ ಕರ್ನಾಟಕದ ಸ್ಥಿತಿಗೆ ಒಂದು ಪ್ರಮುಖವಾದ ಹೊಣೆಯನ್ನು ಈ ಬುದ್ಧಿಜೀವಿಗಳೂ ಹೊರಬೇಕಾಗುತ್ತದೆ. ಇವರಲ್ಲಿ ಬಹಳಷ್ಟು ಜನರು ಆಳುವ ವರ್ಗಗಳ ಸಹಚರರಾಗಿ ಜನರನ್ನು ಮರುಳುಗೊಳಿಸುವಲ್ಲಿ ಅವರಿಗೆ ಸಹಾಯಕರಾದವರು. ತಮ್ಮ ಸೈದ್ಧಾಂತಿಕ ಬರಡುತನ ದಿಂದ ಅಥವಾ ಮಿತಿಗಳಿಂದ ಕರ್ನಾಟಕದ ಸಮಸ್ಯೆಗಳನ್ನು ವಿಶ್ಲೇಷಿಸುವುದು - ಪರಿಹಾರದ ದಾರಿಯನ್ನು ರೂಪಿಸುವುದು ಇವರಿಂದ ಸಾಧ್ಯವಾಗಲಿಲ್ಲ. ಕೇವಲ ಕೈಬೆರಳೆಣಿಕೆಯಷ್ಟು ಜನರು ಮಾತ್ರ ಇಂತಹ ಸವಾಲನ್ನು ಎದುರಿಸಬಹುದಾದ ಸಾಮರ್ಥ್ಯ ಅಥವಾ ಎದೆಗಾರಿಕೆಯನ್ನು ಹೊಂದಿರುವವರು.

ಬದುಕಿನ ಪ್ರಧಾನ ಪ್ರಶ್ನೆ

ಒಟ್ಟನಲ್ಲಿ ಇಂದಿನ ಪರಿಸ್ಥಿತಿಯ ವಾಸ್ತವಿಕ ಚಿತ್ರಣ ಸೂಚಿಸುವುದೇನೆಂದರೆ, ಮುಂದಿನ ವರ್ಷಗಳಲ್ಲಿ ಯಾದರೂ ಸಮೃದ್ಧ ಸುವರ್ಣ ಕರ್ನಾಟಕದ ಕನಸು ನನಸಾಗುವ ದಾರಿಯನ್ನು ರೂಪಿಸುವ ಹೊಣೆ ಮಹತ್ತರವಾದುದು. ಆದರೆ ಆ ಹೊಣೆಗಾರಿಕೆಯನ್ನು ಹೊರಬಲ್ಲವರು ಹೆಚ್ಚೇನು ಕಾಣುತ್ತಿಲ್ಲ. ಆದರೆ ಈ ಸವಾಲನ್ನು ಎದುರಿಸುವುದು ದುಡಿಯುವ ವರ್ಗಗಳಿಗೆ, ಕರ್ನಾಟಕ ಇಲ್ಲಿಯವರೆಗೆ ತುಳಿದ ದಾರಿಯಿಂದ ಸಂಕಟಕ್ಕೊಳಗಾಗಿರುವ ಶೋಷಿತ ವರ್ಗಗಳಿಗೆ ಅತ್ಯವಶ್ಯವಾಗಿರುವ, ಅವರ ಬದುಕಿನ ಪ್ರಧಾನ ಪ್ರಶ್ನೆ. ಆದ್ದರಿಂದ ಕರ್ನಾಟಕದ ದುಡಿಯುವ ವರ್ಗಗಳು ಅದರಲ್ಲಿಯೂ ಸಮಾಜವನ್ನು ವಿಶ್ಲೇಷಿಸಲು ಸಮರ್ಥವಾದ ವೈಜ್ಞಾನಿಕ ಸಿದ್ಧಾಂತವನ್ನು ಸ್ವೀಕರಿಸಿರುವ ಕಾರ್ಮಿಕವರ್ಗದ ಪಕ್ಷ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಹೊಣೆಯನ್ನು ಹೊರಬೇಕಾಗಿದೆ. ಅದಕ್ಕೆ ಬೇಕಾದ ಸಾಮರ್ಥ್ಯವನ್ನು - ಮಾರ್ಕ್ಸ್‌ವಾದವನ್ನು ದೇಶದಲ್ಲಿ ಹಾಗೂ ಇತರ ರಾಜ್ಯಗಳಲ್ಲಿ ಪ್ರಯೋಗಿಸಿ ಪಡೆದ ಭಾರತೀಯ ಅನುಭವ ಸಾಮರ್ಥ್ಯವನ್ನು, ಕರ್ನಾಟಕದ ದುಡಿಯುವ ಸಮುದಾಯದ ನಡುವೆ ಅಹರ್ನಿಶಿ ದುಡಿಯುತ್ತಿರುವ ಕ್ರಿಯಾಶೀಲರು ಪಡೆಯಬೇಕು. ಸುವರ್ಣ ಕರ್ನಾಟಕದ ಆಚರಣೆಯ ಈ ವರ್ಷದ ಉದ್ದಕ್ಕೂ ರಾಜ್ಯದ ಉದ್ದಗಲದಲ್ಲಿಯೂ ಈ ಮಹತ್ತರ ಸವಾಲನ್ನು ಎದುರಿಸುವ ಸವಾಲನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳೋಣ ಹಾಗೂ ಈ ಹೊಣೆಗಾರಿಕೆಯನ್ನು ನಿರ್ವಹಿಸುವ ಪ್ರಾಮಾಣಿಕ ಯತ್ನ ಮಾಡೋಣ.

ಎರಡು ಗಜಲುಗಳು

ತಾಜ್ ಇದೇನು? ತಾಜಮಹಲು ಇದೇನು?
ಅಮೃತಗಲ್ಲಿನಲ್ಲಿ ಮುಮತಾಜಳ ಗೋರಿಗಲ್ಲೇನು?
ಯಮುನಾ ನದಿ ಏನು? ಹರಿಯುವವರ ಹರವೇನು?
ಕೂಲಿಗಳ ಕಣ್ಣೀರಿನ ಬೆವರಿನ ಕತೀಜಗಳೇನು?
ಕೆಂಪು ಕೋಟೆ ಏನು? ಕೆಂಪಾನ ಕೆಂಪು ಕೋಟೆ ಏನು?
ರಕ್ತದಲ್ಲದ್ದಿ ತೆಗೆದ ರಕ್ತಗೆಂಪಿನ ಬುರುಜುಗಳೇನು?
ಮಯೂರ ಸಿಂಹಾಸನವೇನು? ಕಣ್ಣಿನ ಬಣ್ಣದ ಕನಸೇನು?
ಕನಕ ಸಿಂಹಾಸನದಿ ಶುನಕ ರಾಜರ ಠೀವಿ ಏನು?
ಬಾದಶಾಹರೇನು? ಅವರ ಕಲೆಯ ಅಭಿರುಚಿ ಏನು?
ಬಡವರನು ದೋಚಿ ಕಟ್ಟಿದ ವೈಭವದ ರಾಜ್ಯವೇನು?

2

ಇದೇನು ಮಾಡುತ್ತಿರುವರು ದೇವಧುರಂಧರರು
ಪ್ರಸಾದದಂತೆ ದ್ವೇಷವನು ಹಂಚುತ್ತಿರುವರು
ಮುಲ್ಲಾನ ಇಚ್ಛೇ, ಪೂಜಾರಿಯ ಇಚ್ಛೆ ಒಂದೇ ಆಗಿದೆ
ಜನರು ಕೂಡದಂತೆ ಮುಳ್ಳು ಚುಚ್ಚುತ್ತಿರುವರು
ಧರ್ಮಗುತ್ತೇದಾರರು ನಿರಂತರ ಚೂರಿಯ ಕಾರ್ಯಮಾಡುವರು
ಮುಗ್ಧ ಜೀವಿಗಳನು ತರಕಾರಿಯಂತೆ ಕೊಚ್ಚುತ್ತಿರುವರು
ಕುಲಕ್ಕೊಬ್ಬ ಗುರು, ಮತಕ್ಕೊಬ್ಬ ದೇವರಿರುವರು
ಆದರೂ ಜನ ಹಿಡಿದು ಮಚ್ಚು ಕಚ್ಚಾಡುತ್ತಿರುವರು

- ಜಂಬಣ್ಣ ಅಮರಚಿಂತ

ವರುಣನ ಆರ್ಭಟಕ್ಕೆ ನಲುಗಿದ ಬೆಂಗಳೂರು

ಐಟಿ ಸಿಟಿ ಬೆಂಗಳೂರು ನಗರ ಇತ್ತೀಚೆಗೆ ಸುರಿದ ಧಾರಾಕಾರ ಮಳೆಗೆ ತತ್ತರಿಸಿಹೋಗಿದೆ. 20-30 ವರ್ಷಗಳ ಹಿಂದೆ ಬೆಂಗಳೂರು ಯಾವ ರೀತಿ ಇತ್ತು. ಉದ್ಯಾನನಗರಿ ಎಂಬ ಹೆಸರು ಹೊಂದಿದ ನಗರ ತಂಪಾದ ಆಹ್ಲಾದಕರ ವಾತಾವರಣಕ್ಕೆ ಅಂದು ಹೆಸರಾಗಿತ್ತು. ಹೊರಗಿನ ಜನರು ಅಸೂಯೆ ಪಡುವಂತಹ ಗಿಡಮರಗಳು, ಮಹಾನಗರವಾದರೂ ತನ್ನ ಹಲವು ಪರಂಪರೆ, ಸಂಸ್ಕೃತಿ ಉಳಿಸಿಕೊಂಡ ಊರಾಗಿತ್ತು. ಆದರೆ ಇತ್ತೀಚಿನ ದಶಕಗಳಲ್ಲಿ ಇಲ್ಲಿನ ಪರಿಸರದಲ್ಲಿ ಅಲ್ಲೋಲ-ಕಲ್ಲೋಲ. ದೊಡ್ಡಮರ, ಕೆರೆಗಳು



ಹಾಗೂ ಕೊಳಗಳು, ಗಗನಚುಂಬಿ ಕಟ್ಟಡ, ಶಾಪಿಂಗ್ ಮಾಲ್, ವಸತಿ ಸಂಕೀರ್ಣಗಳಿಗೆ ಶರಣಾಗಿವೆ. 20-30 ವರ್ಷಗಳ ಹಿಂದೆ ಫ್ಯಾನ್ ಕೂಡ ಬೇಡವಾಗಿದ್ದ ನಗರದ ಜನರಿಗೆ ಈಗ ವಾಯು ಮಾಲಿನ್ಯದಿಂದ ಉಸಿರು ಕಟ್ಟುವಂತಾಗಿದೆ.

ಬೆಂಗಳೂರು ಸುತ್ತಮುತ್ತ ಏಳು ಸಿಎಂಸಿ ಗಳಲ್ಲಿ ಭೂಮಾಫಿಯಾಗಳು, ದೊಡ್ಡ ಕಾಲುವೆ, ಕೆರೆಕುಂಟೆಗಳನ್ನು ಅತಿಕ್ರಮಿಸಿ ಸುಳ್ಳು ದಾಖಲೆ ಸೃಷ್ಟಿಸಿ, ಬಡ ಜನರಿಗೆ ಮತ್ತು ಮಧ್ಯಮ ವರ್ಗದವರಿಗೆ ಮಾರಾಟ ಮಾಡಿರುವುದು, ಇರುವ ಚರಂಡಿಗಳನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದರಿಂದ ಇತ್ತೀಚೆಗೆ ಬಿದ್ದ ಮಳೆಯಿಂದ ನಗರದ ಸುಮಾರು ತಗ್ಗು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿ ಹಲವಾರು ಅನಾಹುತಕ್ಕೆ ಕಾರಣವಾಯಿತು. ಅದೇ ರೀತಿ ರಸ್ತೆಗಳು ನದಿಯಾಗಿ ಮಾರ್ಪಾಟಾಗಿ ಗಾಡಿಗಳು, ತೇಲಾಡುವ ಪರಿಸ್ಥಿತಿ ಬಂತು. ಇವಕ್ಕೆಲ್ಲಾ ಕಾರಣ ಕೇವಲ ಮಳೆಯಲ್ಲ.

ನಮ್ಮ ಸರ್ಕಾರದ ಆಡಳಿತ ವೈಫಲ್ಯವೇ ಕಾರಣ. ಪ್ರದೇಶದ ಲೇಔಟ್ ಪ್ಲಾನ್ ಮಾಡುವಾಗ ಸಂಬಂಧಿಸಿದ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅನುಮತಿ ನೀಡುವುದರ ಬದಲಿಗೆ ತಾವು ಭೂಕಳ್ಳರ ಜೊತೆ ಕೈಜೋಡಿಸಿ ಅನುಮೋದನೆ ನೀಡಿರುವುದರಿಂದ ದೊಡ್ಡ ಕಾಲುವೆ-ಕೆರೆ, ಕುಂಟೆಗಳು ನೀರು ತುಂಬಿ ಹರಿಯಲು ಸ್ಥಳವಿಲ್ಲದೆ ಮನೆಗೆ ನುಗ್ಗಿರುವುದು.

ಇತ್ತೀಚೆಗೆ ಅತಿವೃಷ್ಟಿ ಪ್ರದೇಶಗಳಿಗೆ ಭೇಟಿ ಕೊಟ್ಟಾಗ ಕಂಡ ದೃಶ್ಯಗಳು ಕರುಳು ಕಿತ್ತುಬರುವಂತಹ ರೀತಿಯಾಗಿದ್ದವು. ಇಡೀ ಜನರು ಸರ್ಕಾರಕ್ಕೆ ಶಾಪ ಹಾಕುತ್ತಾ ಮನೆಗೆ ನುಗ್ಗಿದ್ದ ಕೊಳಕು ನೀರನ್ನು ತೆಗೆದು ತೆಗೆದು ಹೊರ ಹಾಕುತ್ತಿದ್ದರು. "ನಾನು ಸ್ವಲ್ಪ ಎಚ್ಚರವಿಲ್ಲದೆ ನಿದ್ದೆ ಹೋಗಿದ್ದರೆ ಮನೆ ಕುಸಿದು ಜೀವಂತ ಸಮಾಧಿಯಾಗುತ್ತಿದ್ದೆ" ಎಂದು ಮಹದೇವಪುರ ಸಿಎಂಸಿಯ ದೊಡ್ಡನೆಕ್ಕುಂದಿಯ ನರಸಿಂಹಪ್ಪ ಹೇಳುತ್ತಾರೆ. 30-40 ವರ್ಷಗಳಿಂದ ವಾಸವಿದ್ದ ಸಣ್ಣ ಮನೆ ಮಳೆಗೆ ಕುಸಿದು ಪೂರ್ತಿಯಾಗಿ ಬಿದ್ದುಹೋಗಿದೆ. ಪಕ್ಕದಲ್ಲಿಯೇ ಇದ್ದ ನಗರ ಸಭೆ ಸದಸ್ಯ ಇತ್ತ ಇಣುಕಿ ಸಹ ನೋಡಿಲ್ಲ. ಯಾರೋ ಅಧಿಕಾರಿಗಳು ಕಾಟಾಚಾರಕ್ಕೆಂದು ನೋಡಿ ಹೋಗಿರುತ್ತಾರೆ. ಈ ಪ್ರದೇಶದಲ್ಲಿ ಹಲವಾರು ಮನೆಗಳು ಬಿರುಕುಬಿಟ್ಟು ಕುಸಿಯಲು ನಿಮಿಷಗಳನ್ನು ಎಣಿಸುತ್ತಿವೆ. ಕಾವೇರಿನಗರದ ಪುಷ್ಪ "ಗಂಡನನ್ನು ಕಳೆದುಕೊಂಡು ಈ ಸಣ್ಣ ಮನೆಯಲ್ಲಿ ವಾಸ ಮಾಡುತ್ತಿದ್ದೆ. ಮಳೆಯಿಂದ ನನ್ನ ಮನೆ ಗೋಡೆ ಪೂರ ಕುಸಿದು ಬಿದ್ದಿದೆ. ನಾನು ಪಕ್ಕದ ಮನೆಯರ ಆಶ್ರಯ ಪಡೆದು ಮಕ್ಕಳಿಗೆ ನನಗೆ ಯಾವ ಅನಾಹುತ ಆಗದಂತೆ ಕಾಪಾಡಿಕೊಂಡೆವು. ಸಿಎಂಸಿಯವರು ಯಾವಾಗ ನಮಗೆ ಮನೆ ಕಟ್ಟಿಕೊಡುತ್ತಾರೋ ಕಾದು ನೋಡಬೇಕು" ಎನ್ನುತ್ತಾ ಅಳಲನ್ನು ತೋಡಿ ಕೊಂಡರು. ನಾವು ಅಲ್ಲಿ ಕಾಲಿಟ್ಟ ಕೂಡಲೇ ಮಹಿಳೆಯರ ಗುಂಪು "ನನ್ನ ಮನೆ ನೋಡಿ" "ನನ್ನ ಮನೆ ನೋಡಿ" ಎಂದು ಕರೆದೊಯ್ಯುತ್ತಿದ್ದರು. ಅಲ್ಲಿ ಸುಮಾರು 60-70 ಮನೆಗಳು ಬಿರುಕುಬಿಟ್ಟು ಕುಸಿಯುವ ಪರಿಸ್ಥಿತಿ ಇದೆ. ಇದೇ ರೀತಿಯಲ್ಲಿ ಮೈಸೂರು ರಸ್ತೆಯ ರಾಜರಾಜೇಶ್ವರಿ ನಗರ ಸಿಎಂಸಿಯ ನಾಯಂಡ ಹಳ್ಳಿ ಕೆರೆ ತುಂಬಿ, ಅಜಾದ್ ನಗರಕ್ಕೆ ನೀರು ನುಗ್ಗಿ ಅವರ ಬದುಕೇ ಅಸ್ತವ್ಯಸ್ತ ಗೊಂಡಿದೆ. ಕೆಂಗೇರಿ ಉಪನಗರದ ಗುಡಿಸಲುಗಳಿಗೆ ಸಹ ನೀರು ನುಗ್ಗಿದೆ. ಕೆ.ಆರ್.ಪುರ ಸಿಎಂಸಿಯ ವಿಜನಾಪುರದ ಗಾಯಿತ್ರಿ "ನಾವು ನಿರಂತರವಾಗಿ ಮಹಿಳಾ ಸಂಘಟನೆ ಮೂಲಕ ಹೋರಾಟ, ಧರಣಿ ನಡೆಸಿದ ಫಲವಾಗಿ ನಮ್ಮ ಸ್ಲಂ ಚರಂಡಿಗಳು ಸ್ವಚ್ಛವಾಗಿಲ್ಲದ ಕಾರಣ ನೀರು ಹರಿಯಲು ಅನುಕೂಲವಾಯಿತು. ಇಲ್ಲದಿದ್ದರೆ ನಮ್ಮಲ್ಲಿ ಹಲವು ಮನೆಗಳು ಬಿದ್ದು ಚರಂಡಿಗಳಲ್ಲಿ ಜನರನ್ನು ಹುಡುಕಬೇಕಾಗುತ್ತಿತ್ತು" ಅನ್ನುತ್ತಾರೆ. ಒಟ್ಟಾರೆ ಸರ್ಕಾರದ ವೈಫಲ್ಯ ಮತ್ತು ಜನ ಪ್ರತಿನಿಧಿಗಳ ಬೇಜಾವಾಬ್ದಾರಿತನದಿಂದ ನಗರದ ಜನರು ಬಿದ್ದ ಮಳೆಯನ್ನು ನಿಭಾಯಿಸಲಾಗದೆ ತತ್ತರಿಸುವಂತಾಯಿತು. ಈಗ ಅತಿವೃಷ್ಟಿ ಪ್ರದೇಶಗಳಿಗೆ ಸರ್ಕಾರದ ಪ್ರತಿನಿಧಿಗಳು ಭೇಟಿಕೊಟ್ಟು ಪರಿಹಾರ ನೀಡುವಂತೆ ಕಣ್ಣು ಒರೆಸುವ ನಾಟಕವನ್ನು ಆಡುತ್ತಿದ್ದಾರೆ. ಜನವಾದಿ ಮಹಿಳಾ ಸಂಘಟನೆ ಮತ್ತು ಸಿಪಿಐ(ಎಂ) ಪಕ್ಷ ತಕ್ಷಣ ಅತಿವೃಷ್ಟಿಗೆ ಬಲಿಯಾದ ಪ್ರದೇಶದಲ್ಲಿ ವಾಸಿಸುವ ಬಡಜನರನ್ನು ಒಕ್ಕಲೆಬ್ಬಿಸುವ ಮುಂಚೆ ಅವರಿಗೆ ಸೂಕ್ತ ಪರಿಹಾರ ನೀಡಿ-ಅವರಿಗೆ ಬದಲಿ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ನಂತರ ತೆರವು ಗೊಳಿಸಬೇಕು. ಮತ್ತು ದೊಡ್ಡ ಕಾಲುವೆಗಳನ್ನು ಗುರುತಿಸಿ ಸಮರ್ಪಕವಾಗಿ ನೀರು ಹರಿಯುವಂತೆ ಮಾಡಬೇಕು, ಕೆರೆಗಳ ರಕ್ಷಣೆ ಮಾಡಬೇಕು. ಬಿದ್ದುಹೋದ ಮನೆಗಳಿಗೆ ಎರಡು ಸಾವಿರದಿಂದ ಐದು ಸಾವಿರ ಹಣ ಕೊಟ್ಟರೆ ಪ್ರಯೋಜನವಿಲ್ಲ. ಸರ್ಕಾರವೇ ಮನೆಗಳನ್ನು ನಿರ್ಮಿಸಿಕೊಡಬೇಕು. ಒಟ್ಟಾರೆ ಅಭಿವೃದ್ಧಿ ಕೆಲಸಕ್ಕೆ ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದವು.

ಕೊಳಕು ನೀರು ನಿಂತಲ್ಲೇ ನಿಂತಿರುವುದರಿಂದ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆಗಳು ಹೆಚ್ಚು ಇರುವುದರಿಂದ ತಕ್ಷಣ ಸರ್ಕಾರ ಈ ಎಲ್ಲಾ




ಪ್ರದೇಶಗಳಲ್ಲಿ ಇತ್ತ ಕಾಯಿಲೆ ಹರಡದಂತೆ ಗಮನ ಹರಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಲಾಯಿತು.

- ಗೌರಮ್ಮ

ಅತಿವೃಷ್ಟಿ : ಸಂತ್ರಸ್ತರ ಪರಿಹಾರಕ್ಕಾಗಿ ಒತ್ತಾಯಿಸಿ ಸಿಪಿಐ(ಎಂ)ನಿಂದ ಮುಖ್ಯಮಂತ್ರಿ ಮನೆ ಮುಂದೆ ಧರಣಿ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಜಿಲ್ಲಾ ಸಮಿತಿಯು ಮಳೆ ಅತಿವೃಷ್ಟಿಯಿಂದಾಗಿ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಪಾದಯಾತ್ರೆ ಮುಖಾಂತರ ಭೇಟಿಕೊಟ್ಟು ಜನ ಜೀವನದ ಕಷ್ಟ ಕಾರ್ಪಣ್ಯಗಳನ್ನು ವೀಕ್ಷಿಸಲಾಯಿತು. ಸಂತ್ರಸ್ತರ ಪರಿಸ್ಥಿತಿಯನ್ನು ಪರಿಶೀಲಿಸಲಾಯಿತು. ನಿಯೋಗದ ನೇತೃತ್ವವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನ ಕುಮಾರ್, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮುಂತಾದ ಜಿಲ್ಲಾ ಮುಖಂಡರು ಹಾಗೂ ಪಕ್ಷದ ಕಾರ್ಯಕರ್ತರ ತಂಡ ಬೆಂಗಳೂರು ಹೊರವಲಯದ ಹೊಸೂರು ರಸ್ತೆಯ ಬೊಮ್ಮನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ಕೊಡಲಾಗಿತ್ತು. ಬೆಂಗಳೂರಿನ ಹಲವಾರು ಬಡಾವಣೆಗಳು ಮಳೆ ಅತಿವೃಷ್ಟಿಯಿಂದ ಹಾನಿಗೊಳಗಾಗಿದ್ದು ಜನ ಜೀವನ ಅಸ್ತವ್ಯಸ್ಥಗೊಂಡಿದೆ, ವಸತಿಗಳ ಒಳಗೆ ಹಾಗೂ ಹೊರಗೆ ಕೊಳಚೆ ನೀರು ನಿಂತು ದುರ್ವಾಸನೆ ಹರಡಿದೆ. ಗೋಡೆಗಳು ಕುಸಿದು ಹೋಗಿವೆ. ಡ್ರೈನೇಜ್ ನೀರು ನಿಂತಿದ್ದು, ಕುಡಿಯುವ ನೀರಿಗೆ, ಆಹಾರಕ್ಕೆ, ಸಂಚಾರಕ್ಕೆ ಸೌಲಭ್ಯಗಳಿಲ್ಲದೆ ಪರಿತಪಿಸುತ್ತಿದ್ದಾರೆ. ಕೂಲಿ ಮತ್ತು ಸಣ್ಣಪುಟ್ಟ ಕೆಲಸ ಮಾಡುವ ಕೆಲಸಗಾರರು, ಹೊಟ್ಟೆಪಾಡಿಗಾಗಿ ದುಡಿಯುವ ಜನ ಅತಿವೃಷ್ಟಿಯಿಂದಾಗಿ ಪಡುತ್ತಿರುವ ಸಂಕಷ್ಟಗಳನ್ನು ರಾಜ್ಯ ಸರ್ಕಾರದ ಪ್ರತಿನಿಧಿಗಳಾಗಲಿ, ಆಡಳಿತ ಮಂಡಳಿಯ ಅಧಿಕಾರಿಗಳಾಗಲಿ, ಸ್ಥಳೀಯ ರಾಜಕಾರಣಿಗಳಾಗಲೀ, ಅಧಿಕಾರಿಗಳಾಗಲೀ ಭೇಟಿ ನೀಡದೆ ಇರುವುದು, ರಾಜ್ಯ ಸರ್ಕಾರದ ನಿರ್ಲಕ್ಷ್ಯದ ಧೋರಣೆ ಎದ್ದುಕಾಣುತ್ತಿದೆ.

ಕೈಮಗ್ಗದ ಸಣ್ಣ ಸಣ್ಣ ಕಾರ್ಖಾನೆಗಳು, ಸ್ಕ್ರೀನ್ ಪ್ರಿಂಟಿಂಗ್ ಕಾರ್ಖಾನೆಗಳು, ಗುಡಿ ಕೈಗಾರಿಕೆಗಳು ನಾಶ ಹೊಂದಿದ್ದು ಲಕ್ಷಾಂತರ ರೂಪಾಯಿಗಳ



ನಷ್ಟವಾಗಿದೆ. ಇಂಥ ಹತ್ತು ಹಲವುಗಳನ್ನು ಪರಿಶೀಲಿಸಿದ ಸಿಪಿಐ(ಎಂ) ನಿಯೋಗವು ತಕ್ಷಣ ಸಂತ್ರಸ್ತರಿಗೆ ಪರಿಹಾರ ಕಾರ್ಯಕ್ರಮಗಳನ್ನು ಸೂಕ್ತ ರೀತಿಯಲ್ಲಿ ಪೂರೈಸಬೇಕೆಂದು ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಲು ತೀರ್ಮಾನಿಸಿತ್ತು.

ಮುಖ್ಯಮಂತ್ರಿ ಮನೆ ಮುಂದೆ ಧರಣಿ

ಅತಿವೃಷ್ಟಿಯಿಂದ ಸಮಸ್ಯೆಗಳಿಗೆ ಒಳಗಾಗಿರುವ ಎಲ್ಲಾ ಜನತೆಗೆ ತಕ್ಷಣ ಶುದ್ಧ ಕುಡಿಯುವ ನೀರು, ಉಚಿತ ಔಷಧಿ, ನಿರಾಶ್ರಿತರಿಗೆ ಶಿಬಿರಗಳು, ಕಷ್ಟಕ್ಕೆ ಒಳಗಾಗಿರುವ ಜನತೆಗೆ ಸಕಾರದಿಂದ ಪರಿಹಾರ, ಸಿಎಂಸಿಗಳ ಒಳಚರಂಡಿ ವ್ಯವಸ್ಥೆ ಸರಿಪಡಿಸಲು ಹಾಗೂ ಸ್ವಾಭಾವಿಕವಾಗಿ ಇರಬೇಕಿದ್ದ ಕೆರೆ-ಕೊಡಿ ನೀರು ಹರಿಯುವ ದೊಡ್ಡ ಕಾಲುವೆಗಳನ್ನು ರಚಿಸುವಂತೆ, ವ್ಯವಸ್ಥಿತವಾಗಿ ಕಾಪಾಡುವಂತೆ ಒತ್ತಾಯಿಸಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಲಕ್ಷ್ಯತನದಿಂದ ಇಂಥ ಪರಿಸ್ಥಿತಿಗೆ ಕಾರಣವಾಗಿರುವುದನ್ನು ವಿರೋಧಿಸಿ, ನಗರ ಬೆಳವಣಿಗೆಯ ಮುಂದಿನ ಯೋಜನೆಗಳು ನೈಸರ್ಗಿಕವಾದ ಇಂತಹ ಆಪತ್ತನ್ನು ಎದುರಿಸಲು ಸಮರ್ಥವಾದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಬೇಕೆಂದು ಒತ್ತಾಯಿಸಿ 28.10.2005ರಂದು ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಲಾಯಿತು. ತಕ್ಷಣದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಸಿಪಿಐ(ಎಂ) ನಿಯೋಗದಲ್ಲಿ ಜಿ.ಎನ್.ನಾಗರಾಜ್, ಕೆ.ಪ್ರಕಾಶ್, ಸುರೇಂದ್ರರಾವ್ ಹಾಗೂ ನಿರಾಶ್ರಿತರು ಇದ್ದರು. ಪ್ರತಿಭಟನೆಯು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆಯಿತು.

- ಬಿ.ರಾಜಶೇಖರಮೂರ್ತಿ

'ವೋಲ್ಕರ್' ಸಮಿತಿಯ ಸುತ್ತ ಸಂಶಯಗಳ ಹುತ್ತ

ವಿಶ್ವ ಸಂಸ್ಥೆಯು ಆಯೋಜಿಸಿದ ಅಮೆರಿಕಾದ ಮಾಜಿ ಅಧಿಕಾರಿ 'ವೋಲ್ಕರ್' ನೇತೃತ್ವದ ವಿಚಾರಣಾ ಸಮಿತಿಯು ಇರಾಕ್ ದೇಶದ 'ಆಹಾರಕ್ಕಾಗಿ ತೈಲ' ಕಾರ್ಯಕ್ರಮದ ಕುರಿತು ಅಂತಿಮ ವರದಿಯನ್ನು ನೀಡಿದೆ. ವಿವಿಧ ದೇಶಗಳು ಹಲವಾರು ಕಂಪನಿಗಳು ಹಾಗೂ ವ್ಯಕ್ತಿಗಳಿಗೆ ಈ ಕಾರ್ಯಕ್ರಮದ ಅಡಿಯಲ್ಲಿ ಇರಾಕ್ ಸರ್ಕಾರ 'ಆಹಾರ ಪೂರೈಕೆ ಹಾಗೂ ತೈಲ ಖರೀದಿ' ಗುತ್ತಿಗೆ ವಿತರಣೆ ಸಂಬಂಧ ಲಂಚ ನೀಡಿದೆ ಎಂದು ವರದಿಯಲ್ಲಿ ಆರೋಪಿಸಲಾಗಿದೆ.

ಈ ಸಂಬಂಧ ಭಾರತದ ಹಲವಾರು ಕಂಪನಿಗಳನ್ನು ಹಲವಾರು ಕಾಂಗ್ರೆಸ್ ರಾಜಕಾರಣಿಗಳ ಹೆಸರನ್ನು ಮತ್ತು ವಿದೇಶಾಂಗ ಮಂತ್ರಿ ಕೆ.ನಟವರ್ ಸಿಂಗ್ ಅವರ ಹೆಸರನ್ನೂ ಪ್ರಸ್ತಾಪಿಸಲಾಗಿದೆ. ಕೇಂದ್ರ ಸರ್ಕಾರ ಈ ವಿಚಾರವಾಗಿ ಸೂಕ್ತ ತನಿಖೆ ನಡೆಸಬೇಕಿದೆ. ಈ ವಿಚಾರಗಳಲ್ಲಿ ಅಂತಿಮ ತೀರ್ಮಾನಗಳಿಗೆ ಬರಲು ಇನ್ನಷ್ಟು ಸಾಕ್ಷ್ಯಾಧಾರ ಮತ್ತು ಮಾಹಿತಿಗಳನ್ನು ಪಡೆದುಕೊಳ್ಳುವುದು ಅಗತ್ಯವಾಗಿದೆ ಎಂದು ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯ ಹೇಳಿಕೆಯಲ್ಲಿ ಅಭಿಪ್ರಾಯ ಪಡಲಾಗಿದೆ. ದಶಕಗಳ ಕಾಲ ಭೀಕರವಾದ ದಿಗ್ಬಂಧನಗಳ ಅಡಿಯಲ್ಲಿ ನಲುಗಿದ್ದ ಇರಾಕ್ ದೇಶ ಹಲವು ವಿಧಾನಗಳಲ್ಲಿ ಸನ್ನಿವೇಶವನ್ನು ಎದುರಿಸಲು ಪ್ರಯತ್ನಿಸಿದೆ. ಅಲ್ಲದೇ ಹನ್ನೊಂದು ವರ್ಷಗಳ ಭಯಾನಕ ದಿಗ್ಬಂಧನ ವಿಧಿಸುವ ವಿಚಾರದಲ್ಲಿ ಪ್ರಮುಖ ಪಾತ್ರ ವಹಿಸಿದ ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳು ಅಂದು ಇರಾಕ್‌ನ ಸರ್ಕಾರದೊಂದಿಗೆ ವ್ಯವಹರಿಸುತ್ತಿದ್ದವರ ಬಗ್ಗೆ ಪೂರ್ವಾಗ್ರಹ ಪೀಡಿತವಾಗಿವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎಂದೂ ಸಿಪಿಐ(ಎಂ) ಹೇಳಿಕೆಯಲ್ಲಿ ತಿಳಿಸಲಾಗಿದೆ. ಸತ್ಯಾಂಶಗಳನ್ನು, ಸಾಕ್ಷಿಗಳನ್ನು ಪರಿಶೀಲಿಸುವಾಗ ಈ ಅಂಶವನ್ನು ಗಮನದಲ್ಲಿರಿಸಿ ಕೊಂಡಿರಬೇಕಾದುದು ಅಗತ್ಯವಾಗಿದೆ.

ಬಿಜೆಪಿ - ನಿಲ್ಲದ ಕಿತ್ತಾಟ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಬಿಜೆಪಿಯೊಳಗಣ ಕಚ್ಚಾಟಕ್ಕೆ ತೆರೆಬಿದ್ದಿದೆಯೆಂದು ಹೇಳಲಾಗಿತ್ತು. ಒಂದುಗೂಡುವುದು, ಒಗ್ಗಟ್ಟು ಪ್ರದರ್ಶನವೆಂದರೆ ಅದಕ್ಕೆ ಒಂದೇ ಬಸ್‌ನಲ್ಲಿಯ ಪ್ರಯಾಣವೇ ಪ್ರಶಸ್ತವೆಂದೂ ಹೇಳಿಕೊಂಡು ವಾಮಸಾದ ನಾಯಕರು ಬಸ್ ಇಳಿದು ಮನೆ ಸೇರಿದ ಬಳಿಕ ಅವರವರ ದಿಕ್ಕು ಹಿಡಿದಿರುವುದು ಇಂದಿನ ಚಿತ್ರಣ. ಹೋದಲ್ಲೆಲ್ಲಾ ಅಲ್ಲಿಯವರು ನೀಡಿದ ಔತಣಕೂಟವೇ ನೆನಪಿನಲ್ಲಿ ಹಚ್ಚಹಸಿರಾಗಿ ಉಳಿದುಬಿಟ್ಟಿದೆಯಂತೆ! ಸಂಘರ್ಷಯಾತ್ರೆಯೆಂಬೋ ಹುಸಿ ಕಸರತ್ತಿನ ಸಭೆಗಳಿಗೆ ಜನ ಸೇರಿದ್ದು ತೀರಾ ಕಡಿಮೆ. ಇದ್ದವರು ಸಂಘಟಿಸಲ್ಪಟ್ಟವರು, ಸಂಘರ್ಷವನ್ನೂ-ಶಾಂತಿಯನ್ನೂ ಹುಟ್ಟುಹಾಕುವಲ್ಲಿ ವಿಫಲವಾಗಿ ಘೋಷಿತ ಉದ್ದೇಶ ಮರೆತ ಕೀರಲು ಧ್ವನಿಯ ಭಾಷಣಗಳಿಗೆ ಸೀಮಿತವಾದದ್ದು ತಿಳಿದೇ ಇದೆ. ಮತ್ತೆ ಆರಂಭಗೊಂಡ ಕಿತ್ತಾಟ ನೋಡಿದರೆ ಬಿಜೆಪಿ ನಾಯಕರಾದ ಅನಂತಕುಮಾರ್, ಯಡಿಯೂರಪ್ಪ ಇತ್ಯಾದಿ ಗುಂಪುಗಳು ಒಂದುಗೂಡುವುದು ಕೇವಲ ಬಸ್‌ನಲ್ಲಿ ಮಾತ್ರ ಎಂಬುದು ದೃಢಪಟ್ಟಿದೆ.

ರಾಜ್ಯದಲ್ಲಿ ಎಲ್ಲರೂ ಮಾಡುತ್ತಿದ್ದಾರೆ, ನಾವೂ ಏನಾದರೂ ಮಾಡದಿದ್ದರೆ ಹೇಗೆಂದು 'ಹಿಂದ' ಪ್ರೀತಿಯನ್ನು ಪ್ರಕಟಿಸಲು 'ದೀನದಲಿತರ ಸಮಾವೇಶ' ನಡೆಸಲು ಬಿಜೆಪಿ ನಿರ್ಧರಿಸಿತ್ತು. ಬೆಂಗಳೂರಿನ ಓಣಿ, ಕಾಲೋನಿಗಳಲ್ಲಿ ಯದ್ವತದ್ವಾ ಬ್ಯಾನರ್‌ಗಳನ್ನು ಹಾಕಿ ಜನರನ್ನು ಕಲೆಹಾಕಲು ತೊಡಗಿತ್ತು. ಪ್ರಕಟಣೆಯಂತೆ ನವೆಂಬರ್ 2 ರಂದೇ ಈ ಸಮಾವೇಶ ಮುಗಿಯಬೇಕಿತ್ತು. ಬದಲಾಗಿ ಮಳೆ ಕಾರಣವೊಡ್ಡಿ ಮುಂದೂಡಲಾಗಿದೆಯಂತೆ. ಆದರೆ ಅದನ್ನು ರದ್ದು ಪಡಿಸಲಾಗಿದೆಯೆಂಬುದು ಅಸಲಿ ಸುದ್ದಿ. ತಮ್ಮನ್ನು ಕೇಳದೇ ಈಸಮಾವೇಶಕ್ಕೆ ಇಳಿಯಲಾಗಿದೆ ಎಂಬುದು ಅನಂತಕುಮಾರ್, ಯಡಿಯೂರಪ್ಪನವರ ತಕರಾರಂತೆ. ರಾಜ್ಯಾಧ್ಯಕ್ಷ ಶೆಟ್ಟರ್ ಕೇವಲ ಮುಖಮುಖ ನೋಡುತ್ತಾ ಕುಳಿತಿದ್ದರಂತೆ. ಬಿಜೆಪಿ ಇರುವುದು ಮೇಲ್ಜಾತಿಗಳ ನಡುವೆ. ಹೀಗಾಗಿ ಹಿಂದುಳಿದವರನ್ನು ಕಟ್ಟಿಕೊಂಡು ಮಾಡಬೇಕಾದುದೇನು ಎಂದು ಖ್ಯಾತೆ ತೆಗೆದಿದ್ದಾರಂತೆ. ಅಂತೂ ಈ ಪ್ರಹಸನಗಳು ಈಶ್ವರಪ್ಪ, ಕಟ್ಟಾ ಸುಬ್ರಹ್ಮಣ್ಯ ನಾಯ್ಡುರಂತಹವರಲ್ಲಿ ಅಸಮಾನದ ಹೊಗೆ ಎಬ್ಬಿಸಿದೆ. ಈ ಮೂಲಕ ಒಂದಾಗಿದ್ದೇವೆ ಎಂದು ಮಂತ್ರ ಹೇಳುತ್ತಿದ್ದ ಬಿಜೆಪಿ ಬಳಿದುಕೊಂಡಿದ್ದ ಬಣ್ಣ ಬಯಲಾಗಿದೆ. ಇದರ ಅಂಚಿನಲ್ಲೇ ವಿಧಾನಪರಿಷತ್ ಸದಸ್ಯ ಡಾ. ತಂಗಾರವರ ನಿಧನದಿಂದ ಪರಿಷತ್‌ನಲ್ಲಿದ್ದ ಬಿಜೆಪಿ ಬಲ 9 ಕ್ಕೆ ಕುಸಿದಿದ್ದು ಶಂಕರಮೂರ್ತಿ ವಿರೋಧ ಪಕ್ಷದ ನಾಯಕ ಸ್ಥಾನ ಕಳೆದುಕೊಳ್ಳುವ ಸಂದರ್ಭ ಬಂದಿದೆ. ಇದು ಇನ್ನೆಂತಹ ಜಗಳಕ್ಕೆ ಎಳೆದೀತು ಎಂದು ಕಾದು ನೋಡಬೇಕಷ್ಟೆ.

ಒಂದೆಡೆ ಜನರ ಸ್ಪಂದನವಿಲ್ಲದೇ, ವಿವಿಧ ಹಂತಗಳಲ್ಲಿ ಜನರಿಂದ ತಿರಸ್ಕಾರಕ್ಕೆ ಒಳಗಾಗುತ್ತಿರುವ ಬಿಜೆಪಿಯೊಳಗಿನ ಆಂತರಿಕ ಕಚ್ಚಾಟ ಇನ್ನೂ ಹೆಚ್ಚಬಹುದು. ಈಗಾಗಲೇ ಹಿರಿಯ ನಾಯಕ, ಸಂಸದ್ ಸದಸ್ಯರಾಗಿರುವ ರಾಜಶೇಖರ ಮೂರ್ತಿಯವರು ಬಿಜೆಪಿಗೆ ರಾಜಿನಾಮೆ ಸಲ್ಲಿಸಲು ಮುಂದಾಗಿರುವುದು ಆಂತರಿಕ ತಳಮಳದ ಸ್ಫೋಟವನ್ನು ತೋರುತ್ತದೆ.

ರಾಜಕೀಯ ನಿಲುಮೆ ಪ್ರಕಟಿಸದ ಬಣ

ತಮ್ಮದೇ ನಿಜವಾದ ಜಾತ್ಯತೀತ ಜನತಾದಳವೆಂದೂ, ಹುಲ್ಲುಹೊತ್ತ ಮಹಿಳೆಯ ಚುನಾವಣಾ ಚಿಹ್ನೆ ತಮಗೆ ಸಿಗಬೇಕೆಂದು ಸಿದ್ದರಾಮಯ್ಯನವರ ಬಣದ ಅರ್ಜಿಯನ್ನು ಕರ್ನಾಟಕ ಚುನಾವಣಾ ಆಯೋಗ ವಜಾ ಮಾಡಿದೆ. ಈ ಬಣ ಈಗ ಮೇಲ್ಮನವಿ ಸಲ್ಲಿಸಿದ್ದು ಜೆಡಿ(ಎಸ್)ನ ನಾಯಕರಿಂದ (ದೇವೇಗೌಡರಿಂದ) ವಿವರಣೆ ಕೇಳಿ ನೋಟಿಸ್ ನೀಡಿದೆ.

ಪಕ್ಷದಿಂದ ಅಮಾನತುಗೊಂಡಿರುವ ಈ ನಾಯಕರು ಅಧಿಕೃತವಾಗಿ ಪಕ್ಷ ತೊರೆದಿಲ್ಲ. ಹೊಸ ಪಕ್ಷವನ್ನು ಕಟ್ಟಿಲ್ಲ. ಆದರೆ 'ಅಹಿಂದ' ಸಮಾವೇಶ-ಯಾತ್ರೆ ಬಿಟ್ಟಿಲ್ಲ. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ಸಿದ್ದರಾಮಯ್ಯನವರ ಬಣ ನಿಖರವಾಗಿ ತನ್ನ ರಾಜಕೀಯ ನಿಲುವೇನೆಂಬುದನ್ನು ಪ್ರಕಟಿಸಲು ಆಗುತ್ತಿಲ್ಲ. ದೇಶದ, ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ತನ್ನ ನಿಲುವೇನು? ಕಾಂಗ್ರೆಸ್ - ಬಿಜೆಪಿ ಪಕ್ಷಗಳ ಬಗ್ಗೆ ಯಾವ ರಾಜಕೀಯ ಧೋರಣೆ ಅನುಸರಿಸುತ್ತದೆ ಎಂಬುದು ಸ್ಪಷ್ಟವಿಲ್ಲ. ಅದರತ್ತ ಗಮನಾರ್ಹ ದೃಷ್ಟಿಯನ್ನೂ ಬೀರಿಲ್ಲ. ತಮ್ಮ ರಾಜಕೀಯ ನಿಲುಮೆ, ಮುಂದಿನ ಹೆಜ್ಜೆಗಳ ಬಗ್ಗೆ 'ಮುಗುಂ' ಆಗಿರುವುದು ಸರಿಯಲ್ಲ. ಕಾಂಗ್ರೆಸ್, ಬಿಜೆಪಿ ಪಕ್ಷಗಳು ರಾಜಕೀಯವಾಗಿ ಚುರುಕಾಗಿ ಪರಿಸ್ಥಿತಿಯ ಲಾಭ ಹೊಡೆಯಲು ನಿರತವಾಗಿರುವಾಗ ತಮ್ಮ ರಾಜಕೀಯ ನಿಲುಮೆ, ಮುಂದಿನ ಹೆಜ್ಜೆಗಳ ಬಗ್ಗೆ 'ಮುಗುಂ' ಆಗಿರುವುದು ಯಾವ ಪರಿಣಾಮ ತರಬಲ್ಲದು ಎಂಬುದನ್ನು ಯೋಚಿಸಬೇಕು.

ಈಗ 'ಅಹಿಂದ' ಜಾಥಾ ಬಸವಕಲ್ಯಾಣದಿಂದ ರಾಜ್ಯಾದ್ಯಂತ ಸಂಚರಿಸುತ್ತಾ ಹೊರಟಿದೆ. ಆಸಕ್ತಿದಾಯಕ ಸಂಗತಿಯೆಂದರೆ ಸಿದ್ದರಾಮಯ್ಯನವರಿಂದಲೂ ದೂರವಿದ್ದ, ಈಗಿನ ವಿಭಜನೆಯ ವಿದ್ಯಮಾನಗಳಲ್ಲಿ ದೇವೇಗೌಡರವರನ್ನು ಬೆಂಬಲಿಸಿದ್ದ ಮಾಜಿ ಕೇಂದ್ರ ಸಚಿವ ಶ್ರೀನಿವಾಸ ಪ್ರಸಾದ್‌ರವರೇ 'ಅಹಿಂದ' ದ ಜಾಥಾವನ್ನು ಉದ್ಘಾಟಿಸಿದ್ದು! ಅಹಿಂದ ಆಶಯಕ್ಕೆ ತಾನು ಬದ್ಧನೆಂದು ಹೇಳಿದ್ದು. ಇದರ ಬಗ್ಗೆ ವಿವರಣೆ ಕೇಳಲಾಗುವುದು ಎಂದ ಜೆಡಿ(ಎಸ್) ಅಧ್ಯಕ್ಷ ತಿಪ್ಪಣ್ಣನವರ ಬಗ್ಗೆ ವ್ಯಂಗ್ಯದ ಮಾತನಾಡಿರುವುದು. ಆದರೆ ಇನ್ನೂ ಪ್ರಸಾದ್ ದಳವನ್ನು ಬಿಟ್ಟಿಲ್ಲ. ದಳವೂ ಇವರನ್ನು ಬಿಟ್ಟಿಲ್ಲ. ಇನ್ನೊಂದು ಆಸಕ್ತಿಕರ ಬೆಳವಣಿಗೆ, ಕೊನೆಗೂ ಬಿಜೆಪಿ ಸಂಸದರಾದ ರಾಜಶೇಖರ ಮೂರ್ತಿ ಬಿಜೆಪಿಗೆ ರಾಜಿನಾಮೆ ನೀಡಲು ನಿರ್ಧರಿಸಿದ್ದಾರೆ. ಜೆಡಿ(ಎಸ್) ಸೇರುವುದಾಗಿ ಘೋಷಿಸಿದ್ದಾರೆ. ಮೂರ್ತಿಯವರ ಆಗಮನದಿಂದ ಹೊಸ ಬೆಳವಣಿಗೆ ಕಾಣಬಹುದೆಂಬುದು ಜೆಡಿ(ಎಸ್) ನಾಯಕರ ನಿರೀಕ್ಷೆ. ಅಹಿಂದ ಕ್ಕೆ ಉತ್ತರವಾಗಿ ಲಿಂಗಾಯತ-ಒಕ್ಕಲಿಗರ ಸಂಯೋಜನೆಯ ಲೆಕ್ಕಾಚಾರದ ಮುಂದುವರಿದ ಬೆಳವಣಿಗೆ ಇದು ಎಂಬ ವ್ಯಾಖ್ಯಾನವಿದೆ.

ಇವುಗಳೇನೇ ಇರಲಿ, ಜೆಡಿ(ಎಸ್) ಒಳಗೊಂಡು ಎಡಪಕ್ಷಗಳನ್ನು ಹೊರತುಪಡಿಸಿ ಉಳಿದ ಪಕ್ಷಗಳು ಜನರ ಬವಣೆಗಳತ್ತ ಗಮನ ಹರಿಸುತ್ತಿಲ್ಲ. ಮೂಲಭೂತ ಪ್ರಶ್ನೆಗಳನ್ನೆತ್ತುತ್ತಿಲ್ಲ. ಆದರೆ ಅಧಿಕಾರದ ಆಸೆ ಮಾತ್ರ ಎಳ್ಳಷ್ಟು ಕುಗ್ಗಿಲ್ಲ.

ಕಳ್ಳರು ಕೊಟ್ಟುಕೊಂಡ ಪ್ರಮಾಣ ಪತ್ರ

ಬಂಡವಾಳ ಹೂಡಿಕೆಗೆ ಅರ್ಹ್ಯವಾಗಿರುವ ಅಂಶಗಳಲ್ಲಿ ಅಧಿಕಾರಸ್ಥ ರಾಜಕಾರಣಿಗಳಿಗೆ ಭ್ರಷ್ಟಾಚಾರವು ಒಂದು ಪ್ರಮುಖ ಅಂಶವೆಂದು ಕರ್ನಾಟಕಕ್ಕೆ ಅಗ್ರಮಾನ್ಯ ಸ್ಥಾನವಿದೆಯೆಂದು ವಿಶ್ವಬ್ಯಾಂಕ್‌ನ ವರದಿ ಬಹಿರಂಗಪಡಿಸಿದ್ದು ಇನ್ನೂ ಯಾರೂ ಮರೆತಿಲ್ಲ, ಆದರೆ ಇದನ್ನು ಅಲ್ಲಗಳೆದು 'ಶುದ್ಧ ಪತ್ರ' ನೀಡುವ ವರೆಗೆ ಅದೇ ವಿಶ್ವಬ್ಯಾಂಕ್ ಮುಂದಾಗಿದೆ. ಈ ಕುತೂಹಲಕರ ಬೆಳವಣಿಗೆಗೆ ಕಾರಣವಾದರೂ ಏನು? ಈ ವರದಿಯಲ್ಲಿನ ಅಂಶಗಳು ನೇರವಾಗಿ ಎಸ್.ಎಂ.ಕೃಷ್ಣರ ಆಡಳಿತಾವಧಿಗೆ ಸಂಬಂಧಿಸಿದ ವ್ಯವಹಾರಗಳು. ಭ್ರಷ್ಟಾತಿಭ್ರಷ್ಟನಾಗಿರುವ ವಿಶ್ವಬ್ಯಾಂಕೇ ತನ್ನ ನಿಷ್ಠ ಸೇವಕನನ್ನು ಹಾಗೆ ಗುರುತಿಸಿ ಅಧಿಕೃತ ಮುದ್ರೆ ಒತ್ತಿತ್ತು.

ಇದು ರಾಜಕೀಯವಾಗಿಯೂ ಚರ್ಚೆಗೆ ಗ್ರಾಸವಾಗಿ ಕೃಷ್ಣ ಸಿಡಿಮಿಡಿಗೊಂಡಿದ್ದರು. ಆ ಬಳಿಕ ಮಹಾರಾಷ್ಟ್ರದ ರಾಜ್ಯಪಾಲ ಕೃಷ್ಣರವರ ಕಾರ್ಯದರ್ಶಿ ಜೈಕರ್ ಜೆರೋಮ್‌ರಿಂದ ವಿಶ್ವಬ್ಯಾಂಕ್‌ನ ಭಾರತದ ನಿರ್ದೇಶಕರಿಗೆ ಪತ್ರ ಬರೆದು ಆಕ್ಷೇಪ ಎತ್ತಿದ್ದರು - ಇದಕ್ಕೆ ಶುದ್ಧಹಸ್ತದ ಪ್ರಮಾಣ ಪತ್ರವನ್ನು ವಿಶ್ವಬ್ಯಾಂಕ್ ದಯಪಾಲಿಸಿದೆ!

ಇಷ್ಟಾದರೂ ವಿಶ್ವಬ್ಯಾಂಕ್ ಹಾಗೂ ಕೃಷ್ಣರಂತಹ ಅದರ ಬಂಟರು ನಡೆಸಿದ, ನಡೆಸುವ ಕಳಂಕಗಳು ತೊಳೆದು ಹೋಗುವುದಿಲ್ಲ. ವಿದೇಶಿ ಹೂಡಿಕೆದಾರರ ಮೋಸ, ಲಾಭ ಸೆಳೆವ ಷಡ್ಯಂತ್ರಗಳೂ ಮರೆಯಾಗುವುದಿಲ್ಲ.



ದಿಲ್ಲಿಯಲ್ಲಿ ಸರಣಿ ಸ್ಫೋಟ : ಭಯೋತ್ಪಾದನೆ ನಿಗ್ರಹಕ್ಕೆ ಶಾಂತಿ ದಾಳಿಯ ಅಗತ್ಯವಿದೆ

ಕಳೆದ ವಾರ ದಿಲ್ಲಿಯಲ್ಲಿನ ಸರಣಿ ಬಾಂಬ್ ಸ್ಫೋಟಗಳು 61 ಮಂದಿಯನ್ನು ಬಲಿತೆಗೆದುಕೊಂಡಿವೆ. ನೂರಾರು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಇವರೆಲ್ಲಾ ದೀಪಾವಳಿ ಮತ್ತು ಈದ್ ಹಬ್ಬದ ಮುನ್ನಾದಿನ ದಿಲ್ಲಿಯ ಮಾರುಕಟ್ಟೆಗಳಿಗೆ ಖರೀದಿಗೆಂದು ಹೋದವರು. ಈ ಕೃತ್ಯವನ್ನು ಎಲ್ಲರೂ ಖಂಡಿಸಿದ್ದಾರೆ. ಆದರೆ ದಿಲ್ಲಿಯ ಜನ ಈ ಭೀಕರ ಕೃತ್ಯಕ್ಕೆ ತಲೆಬಾಗಲಿಲ್ಲ, ಭಯಭೀತರಾಗಲಿಲ್ಲ, ಯಾವುದೇ ಅನಗತ್ಯ ಉದ್ರೇಕಗಳಿಗೆ ಸ್ಪಂದಿಸಲು ನಿರಾಕರಿಸಿದರು ಹಾಗೂ ತಮ್ಮ ಎಂದಿನ ಕೆಲಸ ಕಾರ್ಯಗಳನ್ನು ಸ್ವಲ್ಪ ಬೇಸರದಿಂದಲೇ ಆದರೂ ಸಾಮಾನ್ಯ ರೀತಿಯಲ್ಲೇ ನಡೆಸಿಕೊಂಡು ಹೋಗುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಿರುವುದು, ವಿಶೇಷವಾಗಿ ಈ ದಿಲ್ಲಿ ಸ್ಫೋಟಗಳು ಭಯೋತ್ಪಾದಕ ಗುಂಪುಗಳಲ್ಲಿ ಹೆಚ್ಚುತ್ತಿರುವ ಹತಾಶೆಯ ಸಂಕೇತ. ಭಾರತ ಮತ್ತು ಪಾಕಿಸ್ತಾನದ ಜನಗಳ ನಡುವೆ ಶಾಂತಿಯ ಅಪೇಕ್ಷೆ ಹೆಚ್ಚುತ್ತಿರುವುದನ್ನು ಕಂಡು ಅವರು ಸ್ಥೈರ್ಯಗೆಟ್ಟಿದ್ದಾರೆ. ಕಳೆದ ಅಕ್ಟೋಬರ್ 8ರಂದು ನಿಯಂತ್ರಣ ರೇಖೆಯ ಎರಡೂ ಕಡೆ ತೀವ್ರ ಭೂಕಂಪ ತಂದ ವಿಪತ್ತಿನ ನಂತರ ಭೂಕಂಪ ಪೀಡಿತರಿಗೆ ಗಡಿಗಳನ್ನೂ ಕಡೆಗಣಿಸಿ ಪರಿಹಾರ ಒದಗಿಸಿದ್ದು ಭಯ, ದ್ವೇಷ, ಸಂದೇಹದ ರಾಜಕೀಯವನ್ನು ಎದುರಿಸಲು ಒಂದು ಅವಕಾಶವನ್ನು ಒದಗಿಸಿತು. ಇಂತಹ ಒಂದು ಕ್ಲಿಷ್ಟ ಸನ್ನಿವೇಶದಲ್ಲಿ ನಿರೀಕ್ಷಿಸಬಹುದಾದಂತೆ ಭಾರತ ಮತ್ತು ಪಾಕಿಸ್ತಾನದ ಸರಕಾರಗಳು ನಿಧಾನವಾಗಿಯಾದರೂ ಭೂಕಂಪ ಪೀಡಿತ ಜನಗಳಿಗೆ ಪರಿಹಾರ ಒದಗಿಸುವಲ್ಲಿ ಸಹಕರಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತಿದ್ದಾರೆ. ಭಯೋತ್ಪಾದಕರಿಗೆ ಇಂತಹ ಒಂದು ಬೆಳವಣಿಗೆ ತಮ್ಮನ್ನು ದೂರಕ್ಕೆ ತಳ್ಳುತ್ತದೆ, ಅಸಂಬದ್ಧಗೊಳಿಸುತ್ತದೆ ಎಂದು ಭಯ.

ಇಂತಹ ಸಂದರ್ಭದಲ್ಲಿ ಜಮ್ಮು-ಕಾಶ್ಮೀರ ಜನಗಳು ನಿಯಂತ್ರಣ ರೇಖೆಯ ಐದು ರವಾನೆ ಸ್ಥಳಗಳಲ್ಲಿ ಗಡಿ ದಾಟುವ ಅವಕಾಶ ನೀಡಲು ಎರಡೂ ಸರಕಾರಗಳು ನಿರ್ಧರಿಸಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ. ದಿಲ್ಲಿ ಸ್ಫೋಟಗಳಿಂದ ಉದ್ರೇಕಿತಗೊಂಡು ಈ ಪ್ರಕ್ರಿಯೆ ದಾರಿ ತಪ್ಪದಂತೆ ಭಾರತ ಸರಕಾರ ಪ್ರೌಢತನ ತೋರಿಸಿದೆ. ಈ ಸಂದರ್ಭದಲ್ಲಿ ಪಾಕಿಸ್ತಾನ ವಿರೋಧಿ ಅಬ್ಬರದಲ್ಲಿ ಭಾರತ ಸರ್ಕಾರ ತೊಡಗದ್ದು ಪ್ರಜ್ಞಾವಂತಿಕೆಯನ್ನು ತೋರಿದೆ. ಅದೇ ವೇಳೆಗೆ ಪಾಕಿಸ್ತಾನ ಸರಕಾರವೂ ಭಯೋತ್ಪಾದಕ ಗುಂಪುಗಳು ತಮ್ಮ ನೆಲವನ್ನು ಬಳಸದಂತೆ ನೋಡಿಕೊಳ್ಳುವುದು ಅಗತ್ಯ. ಈ ಮೂಲಕ ಎರಡು ಸರಕಾರಗಳು ಹಾಗೂ ಜನಗಳ ನಡುವೆ ಪರಸ್ಪರ ವಿಶ್ವಾಸದ ಅರ್ಥಪೂರ್ಣ ಬೆಳವಣಿಗೆ ಸಾಧ್ಯ. ಪಾಕಿಸ್ತಾನ ಸರಕಾರ ಈ ಸಂಘಟನೆಗಳ ಚಟುವಟಿಕೆಗಳನ್ನು ನಿಗ್ರಹಿಸಲು ದೃಢ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಲದೆ, ಈಗ ಅಧ್ಯಕ್ಷ ಪರ್ವೇಜ್ ಮುಷರ್ರಫ್ ದಿಲ್ಲಿ ಸ್ಫೋಟಗಳ ವಿಚಾರಣೆಯಲ್ಲಿ ಸಂಪೂರ್ಣ ಸಹಕಾರ ನೀಡುವುದಾಗಿ ವಚನ ನೀಡಿರುವಾಗ ಎರಡೂ ದೇಶಗಳು ಭಯೋತ್ಪಾದಕ ಸಂಘಟನೆಗಳ ಬಗ್ಗೆ ತಮ್ಮಲ್ಲಿರುವ ಮಾಹಿತಿಗಳನ್ನು ಹಂಚಿಕೊಳ್ಳದಿರಲು ಕಾರಣವೇ ಉಳಿದಿಲ್ಲ. ಈ ಮೂಲಕ ಈ ಸವಾಲನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯ.



ದೇಶ-ಜಾಗತೀಕರಣವನ್ನೇ ಉಂಡು, ಜಾಗತೀಕರಣವನ್ನೆ ಕುಡಿದು, ಜಾಗತೀಕರಣವನ್ನೆ ಹಾಸಿ - ಮಲಗಬೇಕೆಂಬ ತತ್ವವು ನಮ್ಮನ್ನು ಆಳುವವರ ತಲೆಗೆ ನಿಶೆಯಂತೆ ಏರಿಕೂತಿರುವಾಗ ಖಾಸಗೀಕ ಶಿಕ್ಷಣ, ಆರೋಗ್ಯ, ಸಾರಿಗೆ, ಸಂಪರ್ಕ ಎಲ್ಲವೂ ಖಾಸಗೀಕರಣಗೊಳ್ಳುತ್ತಿರುವಾಗ ನೀರನ್ನು - ನಿ ಮಾಡಬಾರದೇಕೆ ಎನ್ನುತ್ತವೆ ನಮ್ಮ ಸರ್ಕಾರದ ನೀತಿಗಳು. ಸರ್ಕಾರಿ ಕ್ಷೇತ್ರ-ಸಾರ್ವಜನಿಕ ರಂಗ ಖಾಸಗೀಕರಣದ ವಕ್ತಾರರು ಮುಖಕ್ಕೆ ಸಗಣಿ ಬಡಿದರೂ ನಾಚಿಕೆಯಾಗದ ಸರ್ಕಾರಗಳಿಗೆ, ಇರು ಜನರ ಅವಶ್ಯಕತೆಗಳನ್ನೆಲ್ಲಾ ಖಾಸಗೀಕರಣ ಮಾಡುವುದರಲ್ಲಿ ಏನೋ 'ಸಂಭ್ರಮ'ವಿದೆ. ಇದೀಗ ಬೆಂಗಳೂರಿನ ಒಟ್ಟು 8 ನಗರಸಭೆ- ಪುರಸಭೆಯ ಪ್ರದೇಶಗಳಿಗೆ ಕುಡಿಯಲು ಕಾವೇರಿ ನೀರು ಒ ಎಳ್ಳುನೀರು ಬಿಟ್ಟು ಕೈತೊಳೆದುಕೊಂಡು ಯೋಜನೆಯ ಜಾರಿ - ನಿರ್ವಹಣೆ ಎಲ್ಲವನ್ನೂ ಬಹುರಾ ಮುಂದಾಗಿದೆ. ಜಾಗತೀಕರಣದ ನೀತಿಗಳ ವಿರುದ್ಧ ಜನರ ಪ್ರತಿರೋಧದ ತೂಫಾನು ತಮ್ಮ ಮೇ ವಹಿಸಿದ್ದಾರೆ. ಜನತೆಗೆ ವಿರುದ್ಧವಾಗಿ ಬಹುರಾಷ್ಟ್ರೀಯ ಕಂಪನಿಗಳ ಗುರಾಣಿಯಂತೆ ಕೆಲಸ ಮಾಡ ಸುಲಿಗೆಕೋರ ಬಹುರಾಷ್ಟ್ರೀಯ ಕಂಪನಿಗಳನ್ನು ಮರೆಮಾಚಿಸಿ ಕಾಪಾಡಲು ಈಗ ಹೊಸ ತಂತ್ರಗ ಹುಡುಕಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳ ಕೈಬೆರಳುಗಳು ಜನತೆಯ ಕಣ್ಣುಗಳಿಗೆ ಚುಚ್ಚಿದರೆ ಜ ಕೆರಳಿ ಕೆಂಡವಾಗಬಹುದು. ಆದರೆ ತಮ್ಮ ಕೈಬೆರಳುಗಳೇ ತಮ್ಮ ಕಣ್ಣುಗಳಿಗೆ ಚುಚ್ಚುವಂತಾದರೆ ಜ ಯಾರನ್ನು ದೂರಲು ಸಾಧ್ಯ? ಇದೇ ಇಲ್ಲಿನ ತಂತ್ರ. ಖಾಸಗೀಕರಣ- ಉದಾರೀಕರಣ-ನೀರಿನ ದುಬಾರೀಕರಣ-ವ್ಯಾಪಾರೀಕರಣವನ್ನು 'ಪ್ರಜಾಸತ್ತಾತ್ಮಕ-ಪಾರದರ್ಶಕ' ಚರ್ಚೆ-ಸಂವಾದಗಳ ಮೂಲಕ 'ತರಬೇತಿ'ಗಳ ಮುಖೇನ ಜನರೇ ಒಪ್ಪಿಕೊಳ್ಳುವಂತೆ ಮಾಡಿದರೆ ಆಹಾ! ಎಷ್ಟು ಸೊಗಸಾಗಿರುತ್ತದೆ - ಫ್ರಾನ್ಸ್, ಜರ್ಮನಿ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೆ - ಇದಕ್ಕಾಗಿಯ ಅವತರಿಸಿದೆ 'ಜನಾಗ್ರಹ' ಎಂಬ ಒಂದು ಸಂಸ್ಥೆ. ಜನಕ್ಕೆ ಕುಡಿಯಲು ನೀರು ಬೇಕಾದರೆ ಅದಕ್ಕೆ ತಕ್ಕಂತೆ ದುಡ್ಡು ಕಕ್ಕಬೇಕು ಎಂಬ ದುರಾಗ್ರಹದ ನೀತಿಯನ್ನು - ಬೆಣ್ಣೆಯೊಳಗಿನ ಕೂದಲನ್ನು ತೆಗೆದಂತೆ ನಯವಾಗಿ ಜನಕ್ಕೆ ಒಪ್ಪಿಸಲು ಅದು ತನ್ನನ್ನೆ ಸಮರ್ಪಿಸಿಕೊಂಡಿದೆ. ಈ 'ವಿಶ್ವಬ್ಯಾಂಕ್ ಕೃಪಾಪೋಷಿತ ನಾಟಕ ಮಂಡಳಿ'ಯೊಡನೆ ಕರ್ನಾಟಕ ರಾಜ್ಯ ಸರ್ಕಾರ ಈಗಾಗಲೇ ನೀರು ಪೂ ವ್ಯವಸ್ಥೆಯ ಖಾಸಗೀಕರಣದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿ ಆಗಿದೆ. ನೀರಿನ ಖಾಸಗೀಕರಣದ ಪ್ರಕ್ರಿಯೆಯ ಒಳಸುಳಿಗಳನ್ನು ಕುರಿತು ಓದಿ ಈ ಲೇಖನದಲ್ಲಿ.

ಬೆಂಗಳೂರಿಗರಿಗೆ 'ನೀರು ಕುಡಿಸಲ

ಕೇಂದ್ರ ನಗರಾಭಿವೃದ್ಧಿ ಸಚಿವಾಲಯದಿಂದ ರಾಜ್ಯ ಸರ್ಕಾರಗಳಿಗೆ ಆ ಮೂಲಕ ನಗರ -ಪಟ್ಟಣಗಳ ಸ್ಥಳೀಯ ಸಂಸ್ಥೆಗಳಿಗೆ ಇತ್ತೀಚೆಗೆ ಒಂದು ಸುತ್ತೋಲೆ ಕಳಿಸಲಾಗಿದೆ. ನಗರವಾಸಿಗಳಿಗೆ ಸರ್ಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳು ನೀಡುವ ಮೂಲಭೂತ ಸೌಕರ್ಯಗಳ ಸಂಬಂಧ ಅದು. ಏನದು? ಸ್ಥಳೀಯ ಸಂಸ್ಥೆಗಳ ಹಾಗೂ ಸರ್ಕಾರಗಳ ದಕ್ಷತೆ ಹೆಚ್ಚಬೇಕು-ಸೇವೆಗಳ ಗುಣಮಟ್ಟ ಹೆಚ್ಚಬೇಕು. ಅದಕ್ಕೇನು ಮಾಡಬೇಕು.

ಈ ಸಂಸ್ಥೆಗಳ ಆದಾಯ ಹೆಚ್ಚಬೇಕು. ಬಜೆಟ್ ಕೊರತೆ ತಗ್ಗಿಸಬೇಕು. ಅದಕ್ಕಾಗಿ ಬಳಕೆದಾರರಿಂದ ವೆಚ್ಚ ವಸೂಲಿ (Cost recovery) ಸರಿಯಾಗಿ ಆಗಬೇಕು. ಬಡವರಿಗೆ ನೀಡಲಾಗುತ್ತಿರುವ ಸಹಾಯಧನಗಳ 'ಸಮರ್ಪಕ ವಿಮರ್ಶೆ'ಯಾಗಬೇಕು ಮತ್ತು ಜನರಿಗೆ ಉತ್ತಮಮಟ್ಟದ ಸೇವೆ ಸೌಕರ್ಯ ಒದಗಿಸುವ ಜವಾಬ್ದಾರಿಯನ್ನು ಈ ವಿಚಾರದಲ್ಲಿ ಪರಿಣತಿಯುಳ್ಳ ವೃತ್ತಿಪರರಿಗೆ ವಹಿಸಬೇಕು. ಅಂದರೆ ನೀರು ಪೂರೈಕೆ ಒಳಚರಂಡಿ, ರಸ್ತೆ, ವಸತಿ ಇತ್ಯಾದಿ ಹೊಣೆಗಾರಿಕೆಗಳನ್ನು ಸರ್ಕಾರ - ಸ್ಥಳೀಯ ಸಂಸ್ಥೆಗಳ ಖಾಸಗಿ ಸಂಸ್ಥೆಗಳ ಹೆಗಲಿಗೆ ಹೊತ್ತು ಹಾಕಬೇಕು.

ಕೇಂದ್ರ ಸರ್ಕಾರದ ಈ ಸುತ್ತೋಲೆಯಲ್ಲಿ ಹೊಸದೇನೂ ಇಲ್ಲ. ಜಾಗತೀಕರಣದ ಹಳೇಮಂತ್ರವಿದು. ಈ ಹಿಂದಿನ ಸರ್ಕಾರಗಳೇ ಅದನ್ನು ಹೇಳಿದ್ದವು. ಈಗಿನ ಸರ್ಕಾರ ಅದನ್ನೇ ಮುಂದುವರಿಸುತ್ತಿದೆ ಅಷ್ಟೇ. ಇಂತಹ ನೀತಿಗಳನ್ನು ಜಾರಿಗೆ ತರಲು ಎಸ್.ಎಂ.ಕೃಷ್ಣ ಸರ್ಕಾರ ತೋರಿಸಿದ ಉತ್ಸಾಹ ಎಲ್ಲರಿಗೂ ಗೊತ್ತಿರುವಂಥದ್ದೇ.


ನೀರಿನ ಶುಲ್ಕ ವಸೂಲಿ ವಿರುದ್ಧ ಸಿಪಿಐ(ಎಂ) ಚಳುವಳಿ

ಬಳಕೆದಾರರಿಂದ ಶುಲ್ಕ ವಸೂಲಿ ಎಂಬ ಧೋರಣೆಯನ್ನು ಆಗಲೇ ಜಾರಿ ಮಾಡಲು ಸರ್ಕಾರ ಟೊಂಕ ಕಟ್ಟಿ ನಿಂತಿತ್ತು. ಅದು 2004ನೇ ಇಸವಿ. ಈಗ ಕಾವೇರಿ ನೀರು ಪೂರೈಸುತ್ತೇವೆ ಎನ್ನಲಾಗುತ್ತಿರುವ ಪ್ರದೇಶಗಳಲ್ಲಿ ಜನರು

40 x 60 ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆ ಸೈಟಿಗೆ ತಲಾ 10,000.00 ರೂ

40x60 ಅಡಿಗಿಂತ ದೊಡ್ಡ ನಿವೇಶನಕ್ಕೆ ತಲಾ 15,000 ರೂ

30 x 40 ಅಡಿ ಪ್ಲಾಟಿಗೆ ತಲಾ10,000 ರೂ. ಇದಕ್ಕಿಂತ ದೊಡ್ಡ ಪ್ಲಾಟಿಗೆ 15,000 ರೂ. ಗಳನ್ನು ನೀರಿನ ಶುಲ್ಕವಾಗಿ ಕಟ್ಟಬೇಕು ಎಂದಿತು ಸರ್ಕಾರ. ಈ ನೀರಿನ ನಿರ್ದಯ ವ್ಯಾಪಾರದ ನೀತಿಯ ವಿರುದ್ಧ ಆಗ ನಿಷ್ಠುರ ಹೋರಾಟ ಮಾಡಿದ್ದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮಾತ್ರ. ರಾಜ್ಯದ ಅಧಿಕೃತ ವಿರೋಧ ಪಕ್ಷ ಬಿಜೆಪಿ - ಆ ವಿರೋಧ ಪಕ್ಷದ ವಿರೋಧ ಪಕ್ಷ -ಜನತಾದಳ ಯಾರೂ ಬಾಯ್ಬಿಡಲಿಲ್ಲ. 2004ರಲ್ಲಿ ಶುಲ್ಕ ಪಾವತಿ ನಿರಾಕರಣೆ, ಸಿಎಂಸಿಗಳ ಮುಂದೆ ವ್ಯಾಪಕ ಪ್ರತಿಭಟನೆಗಳು, ಮುಖ್ಯಮಂತ್ರಿಗಳ ಮನೆಯ ಮುಂದೆ ಧರಣಿ, ವ್ಯಾಪಕ ಪ್ರಚಾರಾಂದೋಲನವನ್ನು ನಡೆಸಿದ್ದರಿಂದ ಹಾಗೂ ನೀರಿನ ಶುಲ್ಕವನ್ನು ಪೂರ್ಣವಾಗಿ ರದ್ದುಮಾಡಬೇಕೆಂಬ ತೀವ್ರ ಚಳುವಳಿಯ ಪ್ರತಿಫಲವಾಗಿ ಶುಲ್ಕಗಳು ಪೂರ್ಣವಾಗಿ ಅಲ್ಲದಿದ್ದರೂ ಸಾಕಷ್ಟು ಕಡಿಮೆಯಾಯಿತು. ಸಣ್ಣ ನಿವೇಶನಗಳ ಮಾಲೀಕರು



ಬಡವರೂ ಕನಿಷ್ಠ 10 ಸಾವಿರ ರೂ. ಕೊಡಬೇಕಾಗಿದ್ದ ಕಡೆ ಈ ಕನಿಷ್ಟ ಶುಲ್ಕ 2,500 ರೂಪಾಯಿಗಳಿಗೆ ಇಳಿಯಿತು. ವೆಚ್ಚ ವಸೂಲಿ ಮಾತ್ರವಲ್ಲ ಒಟ್ಟು 658.65 ಕೋಟಿ ರೂಪಾಯಿಗಳ ಯೋಜನೆಗೆ ಜನರಿಂದ 120 ಕೋಟಿ ಮಾತ್ರ ಸಂಗ್ರಹಿಸುವವೆಂದು ಹೇಳುತ್ತಾ ಎಂಟುನೂರು ಕೋಟಿ ರೂಪಾಯಿಗಳನ್ನು ಜನರಿಂದ ಸಂಗ್ರಹಿಸಲು ಸರ್ಕಾರ ಹೊರಟಿತ್ತು. ಜನರ ಪ್ರತಿರೋಧದಿಂದ ಹಿಮ್ಮೆಟ್ಟಬೇಕಾಯಿತು.

ಸಿಪಿಐ(ಎಂ)ನ ಹೋರಾಟದಿಂದಾಗಿ 20 x 30 ಅಳತೆಯ ಅಂದರೆ ಅರ್ಧ ಸೈಟಿಗೂ ಕೂಡಾ ಒಂದು ದರ ನಿಗದಿ ಮಾಡುವಂತಾಗಿ, ಈ ಅಳತೆ ಸೈಟಿಗೆ 2,500 ರೂ. ದರ ನಿಗದಿಯಾಯಿತು. 30 x 40 ಅಡಿ ಅಳತೆ ಸೈಟಿಗೆ ದರ 10,000 ದಿಂದ 5,000 ಕ್ಕೆ ಇಳಿಯಿತು. 40 x 60 ಅಳತೆಯ ಸೈಟಿಗೆ 15,000 ದಿಂದ 10,000 ಕ್ಕೆ ಇಳಿಯಿತು. ವಾಣಿಜ್ಯ ಬಳಕೆ ಉದ್ದೇಶಗಳಿಗೆ ಪ್ರತ್ಯೇಕ ದುಬಾರಿ ದರ ನಿಗದಿಯಾಗಿದ್ದದ್ದು ಚಳುವಳಿಯಿಂದಾಗಿ ಅದಕ್ಕೂ ಸಹ ಈ ಮೇಲೆ ಹೇಳಿರುವ ದರಗಳೇ ಅನ್ವಯವಾಗುವಂತಾಯಿತು.

ಈಗ ಮುಂಚೂಣಿಗೆ ಬಂದಿರುವುದು ಇದೇ ನೀರಿನ ಖಾಸಗೀಕರಣದ ಮತ್ತೊಂದು ಮುಖ.

ಬೊಮ್ಮನಹಳ್ಳಿ, ಬ್ಯಾಟರಾಯನಪುರ, ದಾಸರಹಳ್ಳಿ, ಕೃಷ್ಣರಾಜಪುರ, ಮಹದೇವಪುರ, ರಾಜರಾಜೇಶ್ವರಿ ನಗರ, ಯಲಹಂಕ ನಗರಸಭೆ ಹಾಗೂ ಕೆಂಗೇರಿ ಪುರಸಭೆಗಳೇ ಈ ಯೋಜನೆಯ ವ್ಯಾಪ್ತಿ ಪ್ರದೇಶಗಳು.

ಈ ನಗರಸಭೆ-ಪುರಸಭೆಯ ಪ್ರದೇಶಗಳಲ್ಲಿ ವಾಸಿಸುವುದು ಬಹುಪಾಲು ಕೆಳ ಮಧ್ಯಮ ವರ್ಗದ ಜನ. ಬಡವರು ಇಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ಬಹುಪಾಲು ಅಸಂಘಟಿತ ಕಾರ್ಮಿಕರು-ಕೂಲಿಕಾರರು ಸಣ್ಣ ತೀರಾ ಸಣ್ಣ ವ್ಯಾಪಾರಸ್ಥ ವಿಭಾಗಗಳಿಗೆ ಸೇರಿದವರು.

ಈ ಪ್ರದೇಶಧಲ್ಲಿ ಒಟ್ಟಾರೆ 53 ಗುಡಿಸಲು ಪ್ರದೇಶಗಳಿವೆ ಎಂದು ಬಿಡಬ್ಲ್ಯುಎಸ್‌ಎಸ್‌ಬಿ ಯ ದಾಖಲೆಗಳು ಹೇಳುತ್ತಿವೆ. ಆದರೆ ರಾಷ್ಟ್ರೀಯ ಸಾಕ್ಷರತಾ ಮಿಷನ್‌ನ ಸಮೀಕ್ಷೆಯ ಪ್ರಕಾರ ಈ ಪ್ರದೇಶದಲ್ಲಿ ಘೋಷಿತ ಅಘೋಷಿತ ಎರಡೂ ಪ್ರಕಾರದ 257 ಗುಡಿಸಲುಗಳಿವೆ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದಂತೆ ಬಿಡಬ್ಲ್ಯುಎಸ್‌ಎಸ್‌ಬಿ ಹಾಗೂ ಸರ್ಕಾರಗಳ ಯೋಜನೆಗಳು. ಅಂದರೆ ಅವರು ಬಡವರ ಬಗ್ಗೆ ಕಣ್ಣು ಮುಚ್ಚಿಕೊಂಡು - ಅವರು ಇಲ್ಲವೇ ಇಲ್ಲ ಎಂದುಕೊಂಡು ಯೋಜನೆ ರೂಪಿಸುತ್ತಾರೆ. ನೀರಿನ ಶುಲ್ಕವನ್ನು ತೆರಲಾರದ, ಸಾರ್ವಜನಿಕ ನಲ್ಲಿಗಳನ್ನೇ - ನೀರಿನ ಮೂಲಗಳನ್ನೇ ಅವಲಂಬಿಸಿರುವ ಈ ಬಡವರು ಸರ್ಕಾರದ ದೃಷ್ಟಿಯಲ್ಲಿ ಮನುಷ್ಯರೇ ಅಲ್ಲ. ಜನರು ದುಡ್ಡು ಕೊಟ್ಟು ನೀರು ಕೊಂಡುಕೊಳ್ಳಬೇಕಾದ ಗಿರಾಕಿಗಳು ಅಷ್ಟೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಸಂಸ್ಥೆ ಭವಿಷ್ಯ ಬೆಂಗಳೂರಿಗಾಗಿ 'ಸಮಗ್ರ ಅಭಿವೃದ್ಧಿ ಯೋಜನೆ' ಎಂಬುದೊಂದನ್ನು ರೂಪಿಸಿದೆ. ಫ್ರೆಂಚ್ ದೇಶದ ಸ್ಥಳೀಯ ಸರ್ಕಾರ ಯುರೋಪಿನ ವಿವಿಧ ಸಂಸ್ಥೆಗಳ ಸಹಕಾರ - ಸಹಯೋಗ-ಸಾಲ (ಬಡ್ಡಿಸಾಲ) ದೊಂದಿಗೆ ಈ ಯೋಜನೆ ರೂಪಿಸಲಾಗಿದೆ. ಬೆಂಗಳೂರು ನಗರದ ಭವಿಷ್ಯದ ಮೂಲಭೂತ ಸೌಕರ್ಯಗಳ ಬಗೆಗೆ ರಸ್ತೆ-ಸೇತುವೆ-ನೀರು ಇತ್ಯಾದಿಗಳ ಬಗೆಗೆ ಬಹಳಷ್ಟು ಮಾತುಗಳಿದ್ದರೂ ಬೆಂಗಳೂರಿನ ಲಕ್ಷಾಂತರ ಗುಡಿಸಲು ನಿವಾಸಿಗಳ ಬಗ್ಗೆ ಈ ಬಡವರಿಗೆ ಮನುಷ್ಯತ್ವದ ಘನತೆಗೆ ತಕ್ಕನಾದ ವಸತಿ ವ್ಯವಸ್ಥೆ ರೂಪಿಸುವ ಬಗ್ಗೆ ಇಡೀ ಯೋಜನೆಯಲ್ಲಿ ಯಾವುದೇ ಪ್ರಸ್ತಾಪವಿಲ್ಲ.

ಜನಾಗ್ರಹದ ಜವಾಬ್ದಾರಿ

ಈ ಪ್ರದೇಶಗಳಲ್ಲಿ ಈಗ ಬಹುತೇಕ ಕೊಳವೆ ಬಾವಿಯ ನೀರನ್ನು ಪೂರೈಸಲಾಗುತ್ತಿದೆ. ಅದರಲ್ಲಿ ಸಾರ್ವಜನಿಕ ನಲ್ಲಿಗಳ ಮೂಲಕ ಪೂರೈಸಲಾಗುವ ನೀರು ದೊಡ್ಡ ಪ್ರಮಾಣದಲ್ಲಿದೆ. ಜನಾಗ್ರಹ ಸಂಸ್ಥೆಯ ಹೆಗಲ ಮೇಲಿರುವ ಒಂದು ದೊಡ್ಡ ಕಾರ್ಯಭಾರವೇನೆಂದರೆ ಈ ಪ್ರದೇಶಗಳ ಜನಗಳು



ಬಡವರೇ ಇರಲಿ-ಕೂಲಿಗಳೇ ಇರಲಿ ಬೀದಿ ನಲ್ಲಿಯನ್ನು ಆಶ್ರಯಿಸದೇ ಮನೆಗೆ ನಲ್ಲಿಯನ್ನು ಹಾಕಿಸಿಕೊಳ್ಳುವಂತೆ 'ಮನವೊಲಿ'ಸುವುದು, ತಿಳುವಳಿಕೆ ಮೂಡಿಸುವುದು! ಅಂದರೆ ಅವರು ಮೀಟರ್ ಇಲ್ಲದ - ಶುಲ್ಕವಿಲ್ಲದ ಸಾರ್ವಜನಿಕ ನೀರು ಪೂರೈಕೆ ವ್ಯವಸ್ಥೆ ಬಿಟ್ಟು, ಮೀಟರು - ನೀರಿನ ಶುಲ್ಕ ಇರುವ ವ್ಯವಸ್ಥೆಯತ್ತ ಈಜಬೇಕು. ದುಬಾರಿ ಬೆಂಗಳೂರು ನಗರದ ಜೀವನ ವೆಚ್ಚಗಳ ಜೊತೆಗೆ ಇನ್ನು ಮುಂದೆ ನೀರಿನ ಶುಲ್ಕವಾಗಿ ತಿಂಗಳಿಗೆ ನೂರಾರು ರೂಪಾಯಿಗಳನ್ನು ತೆರಬೇಕು. ಬೆಂಗಳೂರಿನಂತಹ ನಗರಗಳ ನೀರು ಮತ್ತು ಒಳ ಚರಂಡಿ ಮುಂತಾದ ವ್ಯವಸ್ಥೆಗೆ ಸಂಬಂಧಿಸಿದಂತೆ ವಿವಿಧ ಹೊಣೆಗಳನ್ನು ನಿರ್ವಹಿಸಲು ಹಲವಾರು ಸಾರ್ವಜನಿಕ ಸಂಸ್ಥೆಗಳಿವೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ), ಕರ್ನಾಟಕದ ನಗರ ಮೂಲಭೂತ ಸೌಕರ್ಯ ಹಣಕಾಸು ನಿಗಮ (ಕೆ.ಯು.ಐ.ಡಿ.ಎಫ್.ಐ) ಇತ್ಯಾದಿಗಳ ಪ್ರತಿನಿಧಿಗಳು, ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಂತೆ ಯೋಜನೆಗೆ ಸಂಚಾಲನಾ ಸಮಿತಿಯೊಂದನ್ನು ರಚಿಸಲಾಗಿದೆ. ಆದರೆ ಈ ಯೋಜನೆಯ ಮುಖ್ಯಪಾತ್ರ ವಹಿಸುವ ಸಂಸ್ಥೆಗಳು ಬೇರೆಯವೇ ಇವೆ. ಇಂಟರ್‌ನ್ಯಾಷನಲ್ ಫೈನಾನ್ಸ್ ಕಾರ್ಪೊರೇಷನ್ (ಐಎಫ್‌ಸಿ). ಇದು ವಿಶ್ವಬ್ಯಾಂಕಿನ ಒಂದು ಅಂಗಸಂಸ್ಥೆ. ವಿಶ್ವದಾದ್ಯಂತ ಇಂತಹ 'ಖಾಸಗಿ' ಯೋಜನೆಗಳಲ್ಲಿ ಹಣ ತೊಡಗಿಸುವುದರಲ್ಲಿ ಅಷ್ಟೆ ಈ ಸಂಸ್ಥೆಗೆ ಆಸಕ್ತಿ. ಇವರು ಹಣ ಕೊಡುವುದು ಉಚಿತವಾಗೇನಲ್ಲ. ಖಚಿತ ಬಡ್ಡಿ ನಿಗದಿಯಾಗಿರುತ್ತದೆ ಅದಕ್ಕೆ. ಇಂತಹದ್ದೇ ಇನ್ನೊಂದು ಅಮೆರಿಕ ದೇಶದ US-AID ಎಂಬ ಸಂಸ್ಥೆ. ಇದು ಸಹ ಯೋಜನೆ ಅಗತ್ಯವಾದ ಹಣಕಾಸು ಪೂರೈಸುವ 'ಆಸಕ್ತಿ'ಹೊಂದಿದೆ. ಈ ಹಣಕಾಸು ಸಂಸ್ಥೆಯೂ ಸಹ ಖಾಸಗೀ ಯೋಜನೆಗಳಿಗೆ ಮಾತ್ರ ಹಣಕಾಸು ಪೂರೈಸುವಂತಹದ್ದು.

ನೀರು ಮನುಷ್ಯನ ಅತ್ಯಂತ ಮೂಲಭೂತ ಅಗತ್ಯಗಳಲ್ಲಿ ಒಂದು. ನೀರಿಲ್ಲದೆ ಬದುಕಿಲ್ಲ. ಈ ನೈಸರ್ಗಿಕ ಸಂಪನ್ಮೂಲವನ್ನು ವ್ಯಾಪಾರದ ಸರಕನ್ನಾಗಿ ಮಾಡಿ ಹರಾಜು ಮಾಡುವ ವ್ಯವಸ್ಥಿತ ಯೋಜನೆಯು ಈಗ ನಮ್ಮ ಮುಂದೆ ಬಂದಿದೆ. ಈ ಸಂಬಂಧ ಈಗಾಗಲೇ 'ಜನಾಗ್ರಹ' ಎಂಬ ಸಂಸ್ಥೆಯೊಂದಿಗೆ ಸರ್ಕಾರ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದೆ.

ನೀರು ಖಾಸಗೀಕರಣ ಎಂದರೆ ದುಡ್ಡಿದ್ದವರಿಗೆ ಮಾತ್ರವೇ ನೀರು ಎಂದರ್ಥ

ನೀರು ಪೂರೈಕೆ ವ್ಯವಸ್ಥೆ ಖಾಸಗೀಕರಣವಾದ ಜಗತ್ತಿನ ಹಲವಾರು ದೇಶಗಳಲ್ಲಿ ಜನರ ಅನುಭವ ಏನೆಂದರೆ ನೀರಿನ ಶುಲ್ಕಗಳ ಏರಿಕೆ ಶೇ.100, 150 ಮತ್ತು ಅದಕ್ಕೂ ದೊಡ್ಡ ರೀತಿಯಲ್ಲಿ ನೀರಿನ ಶುಲ್ಕಗಳು ಏರಿ ಜನರು ತತ್ತರಿಸಿ ಪ್ರತಿಭಟನೆಗೆ ಇಳಿದಿದ್ದಾರೆ.

ರಣವನ್ನೇ ಹೊದ್ದುಕೊಂಡು
ವಂತಗಳಿಗೆ ಮಿತಿ ಎಂಬುದಿದೆಯೇ.
ರೈಕೆ ವ್ಯವಸ್ಥೆಯನ್ನು ಖಾಸಗೀಕರಣ
- ಭ್ರಷ್ಟ-ಅಸಮರ್ಥ ಎಂದೆಲ್ಲಾ
ಷ-ಕೊರತೆ ಸರಿಪಡಿಸುವ ಬದಲು
ರು 13 ಲಕ್ಷ ಜನರು ವಾಸವಾಗಿರುವ
ಯೋಜಯಲ್ಲಿ ಸರ್ಕಾರದ ಪಾತ್ರಕ್ಕೆ
ಂಪನಿಗಳ ಕೈಗೆ ಒಪ್ಪಿಸಲು
ಲಿ ಎಂಬ ಎಚ್ಚರಿಕೆಯನ್ನೂ ಅವರು



ತೀವ್ರವಾಗಿ ಪ್ರತಿರೋಧಿಸಿದ್ದಾರೆ. ಹಿಮ್ಮೆಟ್ಟಿಸಿದ್ದಾರೆ ಎಂಬುದು ಇವರಿಗೆ ಗೊತ್ತಿದೆ. ಹೀಗಾಗಿ ಹೇಗಾದರೂ ಮಾಡಿ ನೀರು ಪೂರೈಕೆಯ ಖಾಸಗೀಕರಣದ ಬಗೆಗೆ ಜನರ ತಲೆಗೆ ವ್ಯವಸ್ಥಿತವಾಗಿ ತಿಕ್ಕಿ-ತೀಡಿ ಅವರನ್ನು ಒಪ್ಪಿಸಬೇಕೆಂದು ತೀರ್ಮಾನಿಸಿವೆ ಈ ಸಂಸ್ಥೆಗಳು. ಈ ಉದ್ದೇಶಕ್ಕಾಗಿ ಸಾವಿರಾರು ಡಾಲರ್‌ಗಳನ್ನು 'ನೀರಿನಂತೆ' ಚೆಲ್ಲಲೂ ಇವರಿಗೆ ಹಣಕಾಸಿನ ನೆರವಿನ ಪ್ರವಾಹವೇ ಹರಿಯಲಿದೆ.

ಈ ಜನಾಗ್ರಹ ಸಂಸ್ಥೆಯು ನೀರಿನ ಖಾಸಗೀಕರಣದ ಬಗೆಗೆ - ಜನರು ಯಾಕೆ ಈ ಯೋಜನೆಗೆ ಹಣ ಕೊಡಬೇಕು ಎಂಬ ಬಗ್ಗೆ ಮತ್ತು ಈ ಯೋಜನೆಯ ವಿರುದ್ಧ ಯಾಕೆ ತಿರುಗಿ ಬೀಳಬಾರದು - ಸಂಘರ್ಷಕ್ಕೆ ನಿಲ್ಲಬಾರದು ಎಂಬ ಬಗ್ಗೆ ಜನರಿಗೆ ತರಬೇತಿ ನೀಡಲು ವಿವಿಧ ಹಂತಗಳಲ್ಲಿ ನಗರ ಸಭೆಯ ವಾರ್ಡ್ ವ್ಯಾಪ್ತಿಯವರೆಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸಲಿದೆ. ಪ್ರಚಾರ ಸಾಮಗ್ರಿಗಳೊಂದಿಗೆ ಮನೆ ಮನೆಗೆ ದಾಂಗುಡಿ ಇಡುವ ಯೋಜನೆ ರೂಪಿಸಿದೆ. ಇವೆಲ್ಲಾ ಅಂದುಕೊಂಡಂತೆ ನಡೆದರೆ ಈ ನಗರ ಸಭೆಯ ವ್ಯಾಪ್ತಿಯಲ್ಲಿ ಜನರ ಮನಸ್ಸನ್ನು ತಮ್ಮ ವಿಚಾರ ಪ್ರಚಾರಗಳಿಂದ ರಾಹುಕೇತುಗಳಂತೆ ಆವರಿಸಿಕೊಂಡು ನುಂಗಿ ಹಾಕುವ ವ್ಯವಸ್ಥಿತ ಯೋಜನೆಯನ್ನೇ ರೂಪಿಸಲಾಗಿದೆ.

ಹಣ ಕೊಡುವವರು ಯಾರು

ಬರುತ್ತಿವೆ ಬ.ಕ.ಗಳು

ವರಿಗೆ ಉಚಿತ ನೀರು ಪೂರೈಕೆಯ ನೀತಿಯನ್ನೇ ಡಮೇಲು ಮಾಡುವುದು ಈ ಖಾಸಗೀಕರಣದ ತ್ತೊಂದು ಪ್ರಮುಖ ಪರಿಣಾಮ. ಅಂದರೆ ಡ್ಡಿದ್ದವರಿಗೆ ಮಾತ್ರ ನೀರು.

ನಮ್ಮ ದೇಶದ ರಾಜಧಾನಿ ದೆಹಲಿಯಲ್ಲಿ 21 ಯಗಳ ನೀರು ಪೂರೈಕೆ ವ್ಯವಸ್ಥೆಯನ್ನು ಸಗೀಕರಿಸಿ ವಿವಿಧ ಕಂಪನಿಗಳಿಗೆ ನೀಡಲಾಗಿದೆ.

ಆರ್.ರಾಮಕೃಷ್ಣ


ಯೋಜನೆಗೆ ಹಣಕಾಸು ಒದಗಿಸುವುದು ಬ್ಯಾಂಕ್. ಈ ವಿಶ್ವಬ್ಯಾಂಕ್ ಒಪ್ಪಂದದಂತೆ ಲ್ಲಾ ಹಕ್ಕು ನೀಡಲಾಗಿದೆ ಎಂದರೆ, ಸರ್ಕಾರವು ರು ಪೂರೈಸುವ ಅರ್ಹತೆಯುಳ್ಳ ಕಂಪನಿಗಳ ಪಟ್ಟಿ ಮಾರಿಸುವ ಪ್ರಶ್ನೆಯಲ್ಲಿ ವಿಶ್ವಬ್ಯಾಂಕ್ ಯಾವುದೇ ಚನೆ ಕೊಡಬಹುದು. ಸರ್ಕಾರ ಅದಕ್ಕೆ ತಕ್ಕಂತೆ ಯಲ್ಲಿ ಬದಲಾವಣೆ ಮಾಡಬೇಕಾಗುತ್ತದೆ ಮತ್ತು ಖಾಸಗಿ ಕಂಪನಿಗಳು ಮಾಡುವ ಯೋಜನೆಯ ರ್ವಹಣಾ ವೆಚ್ಚಕ್ಕೆ ಹಾಗೂ ತನ್ನ ಅಧಿಕಾರಿ ವರ್ಗಕ್ಕೆ ಡುವ ವೇತನದ ಬಗೆಗೆ ಯಾವುದೇ ಮಿತಿ ಇಲ್ಲ. ಷ್ಟಾದರೂ ಖರ್ಚು ಮಾಡಬಹುದು. ಎಷ್ಟಾದರೂ ತನ ನೀಡಬಹುದು. ನೀರಿನ ದರ ಏರಿದರೆ ನ್ನು ಭರಿಸುವವರು ಜನ ತಾನೆ. ವಿಶ್ವಬ್ಯಾಂಕ್ ಲ್ಲವಲ್ಲ!!

ದು ಈ 'ಜನಾಗ್ರಹ'

ನೀರಿನ ಖಾಸಗೀಕರಣವು ಅಷ್ಟು ಸುಲಭವಾಗಿ ಕೈಸಿಕೊಳ್ಳುವ ವಿಚಾರವಲ್ಲ ಎಂಬುದು ಗತೀಕರಣವಾದಿಗಳಿಗೆ ಮತ್ತು ಜಾಗತೀಕರಣದ ತ್ರ ಹಿಡಿದ ಬಹುರಾಷ್ಟ್ರೀಯ ಕಂಪನಿಗಳು - ಎಂಎಫ್ ವಿಶ್ವಬ್ಯಾಂಕ್‌ಗಳಿಗೆ ಚೆನ್ನಾಗಿ ಗೊತ್ತಿದೆ. ಅರ್ಜೆಂಟೈನಾ, ಬೊಲಿವಿಯಾ, ಬ್ರೆಜಿಲ್, ಡಾ, ಫ್ರಾನ್ಸ್, ಜರ್ಮನಿ, ಹಂಗೇರಿ, ರಿಷಸ್, ಪೋಲೆಂಡ್ ದಕ್ಷಿಣ ಆಫ್ರಿಕಾ, ಲಾಂಡ್ ಕೊನೆಗೆ ಅಮೇರಿಕಾದಲ್ಲಿ ಸಹ ನೀರು ರೈಕೆಯ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸುವ ರ್ಕಾರಗಳ ಯೋಜನೆಯನ್ನು ಅಲ್ಲಿಯ ಜನತೆ

ಈ 'ಜನಾಗ್ರಹ'ಕ್ಕೆ?

ಇಂತಹ ಬ್ರೈನ್ ವಾಷ್ ಯೋಜನೆ ಜಾರಿ ಮಾಡಲು ಜನಾಗ್ರಹಕ್ಕೆ 1 ಲಕ್ಷ ಅಮೇರಿಕನ್ ಡಾಲರ್ ನೆರವನ್ನು ನೀಡಲು ವಿಶ್ವಬ್ಯಾಂಕ್ ಈಗಾಗಲೇ 'ಒಪ್ಪಿಗೆ ನೀಡಿದೆ'. ಇಂಟರ್ ನ್ಯಾಷನಲ್ ಕಾರ್ಪೊರೇಷನ್ (ಐಎಫ್‌ಸಿ)ಯು ಈ ಯೋಜನೆಯ ಸಂವಹನಕ್ಕೆ 3 ಲಕ್ಷ 73 ಸಾವಿರ ಅಮೇರಿಕನ್ ಡಾಲರ್ ನೆರವು ನೀಡಲು ಒಪ್ಪಿದೆ. ಅಗತ್ಯ ಬಂದರೆ ಜನಾಗ್ರಹದಂತಹ ಒಂದು ಸಂಸ್ಥೆಗೆ ಇನ್ನೂ ಒಂದು ಲಕ್ಷ ಡಾಲರ್ ನೆರವು ನೀಡುವ ಇಂಗಿತವನ್ನು ನೀಡಿದೆ. ಗಾಳಕ್ಕೆ ಹುಳುವನ್ನು ಸಿಕ್ಕಿಸಿದರೆ ಅಲ್ಲವೇ ಮೀನುಗಳು ದಕ್ಕುವುದು.



ಈ ಯೋಜನೆಯ ಸಂಬಂಧ ಬಡವರ ಪರವಾಗಿ ಅಧ್ಯಯನ ನಡೆಸುವುದಕ್ಕೆ ಮತ್ತೆ 5 ಲಕ್ಷ ರೂಪಾಯಿ ಸಂಸ್ಥೆಗೆ ಬೇಕಾಗಿದೆಯಂತೆ. ಸಂಸ್ಥೆಯ ಕಛೇರಿ ವ್ಯವಸ್ಥೆಗಳಿಗೆ ಕೆಯುಐಡಿಎಫ್‌ಸಿ ಸುಮಾರು 8-10 ಲಕ್ಷ ರೂ ಮೌಲ್ಯದ ಪೀಠೋಪಕರಣ ನೀಡಲಿದೆ. ಇದೇ ಸಂಸ್ಥೆ ಜನಾಗ್ರಹದ ಪ್ರಯಾಣ ವೆಚ್ಚ ಇತ್ಯಾದಿಯಾಗಿ 18 ಲಕ್ಷ ರೂ. ವೆಚ್ಚ ಮಾಡಲಿದೆ.

ಬರೀ ಪ್ರಚಾರ ಅಲ್ಲ

ಈ ಸಂಸ್ಥೆಯ ಅಧಿಕಾರವೂ ಕೇವಲ ಪ್ರಚಾರ-ತರಬೇತಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಯೋಜನೆಯ ಜಾರಿ, ಪರಿಶೀಲನೆ, ಗುಣಮಟ್ಟ ತನಿಖೆಗೆ ಸಹ ಅಧಿಕಾರವಿದೆ. ಅಂತಿಮವಾಗಿ ಈ ಜನಾಗ್ರಹವು ಒಪ್ಪಿ ಅರ್ಹತಾ ಪತ್ರ ನೀಡದಿದ್ದರೆ ಯೋಜನೆಯ ಗುತ್ತಿಗೆದಾರರಿಗೆ ಹಣ ಮಂಜೂರು ಆಗುವಂತಿಲ್ಲ.

ಜನಜಂಗುಳಿಯ ಜಾತ್ರೆಗಳಲ್ಲಿ - ಬಸ್‌ಗಳಲ್ಲಿ ಪಿಕ್‌ಪಾಕೆಟ್ ಮಾಡುವ ಕಳ್ಳರು - ಸಿಕ್ಕಿಬಿದ್ದಾಗ ಸಾರ್ವಜನಿಕರಂತೆ ನಟಿಸಿ ಕಳ್ಳರಿಗೆ ನಾಲ್ಕು ಬಾರಿಸಿ ಅವರನ್ನು 'ಪೊಲೀಸ್ ಠಾಣೆಗೆ' ಕರೆದೊಯ್ಯುವ ಕಳ್ಳರದ್ದೇ ತಂಡವೂ ಇರುತ್ತದಂತೆ. ಆಹಾ ಹೇಗಿದೆ ಕೂಟ. ಹೇಗಿದೆ ಆಟ.?

ಇಷ್ಟೆಲ್ಲಾ ಅಧಿಕಾರ - ಹಕ್ಕುಗಳನ್ನು ಜವಾಬ್ದಾರಿಗಳನ್ನು (!) ನೀಡುವಂತಹ ಈ ಪ್ರಯತ್ನ ಒಂದು ವಿನೂತನ ಪ್ರಯೋಗ ಎಂದು ಸರ್ಕಾರ ಮತ್ತು ಜನಾಗ್ರಹ ಸಂಸ್ಥೆಗಳೂ ಜಂಟಿಯಾಗಿ ಸಹಿ ಮಾಡಿರುವ ತಿಳುವಳಿಕೆ ಪತ್ರದಲ್ಲಿ ಹೇಳಲಾಗಿದೆ. ಇದು ಇಡೀ ದೇಶಕ್ಕೆ ಇತರ ದೇಶಗಳಿಗೂ ಒಂದು ಮಾದರಿ ಆಗಬಹುದು ಎಂದೂ ಇದೇ ದಾಖಲೆಯಲ್ಲೇ ಹೇಳಲಾಗಿದೆ.

ಆದರೆ 15 ಪುಟಗಳ ಈ ತಿಳುವಳಿಕೆ ಪತ್ರದಲ್ಲಿ (MOU)ದಲ್ಲಿ ಅಪ್ಪಿತಪ್ಪಿಯೂ ಸಹ ಎಲ್ಲಿಯೂ ಇಂತಹ ಗುರುತರ ಜವಾಬ್ದಾರಿ ನಿರ್ವಹಿಸುವ ವಿಚಾರದಲ್ಲಿ ಈ ಜನಾಗ್ರಹ ಸಂಸ್ಥೆಯ ಅನುಭವ ಏನು ಅದರ ಅರ್ಹತೆ ಏನು ಎಂಬ ಬಗ್ಗೆ ಚಕಾರವನ್ನು ಎತ್ತಿಲ್ಲ.

ಈ ತಿಳುವಳಿಕೆ ಪತ್ರವನ್ನು ಓದುವ ಯಾರಿಗೆ ಆಗಲಿ ಇದು ಜನಾಗ್ರಹ ಸಂಸ್ಥೆಯೇ ರಚಿಸಿದ ಪತ್ರ ಎಂಬುದು ಕ್ಷಣಮಾತ್ರದಲ್ಲಿ ತಿಳಿದುಹೋಗುತ್ತದೆ.

ಜನರಿಗೆ ನೀರು ಕೊಡುವುದು-ನೀರು ಕೊಡುವುದನ್ನು ಖಾಸಗೀಯವರಿಗೆ ಒಪ್ಪಿಸುವುದು ಬೇರೆ ವಿಚಾರ.ಇಂತಹ ಸೂಕ್ಷ್ಮವಾದ ಮತ್ತು ಲಕ್ಷಾಂತರ ಜನರ ಬದುಕಿನ ಬಹುಮುಖ್ಯ ಪ್ರಶ್ನೆಯೊಂದಿಗೆ ಸಂಬಂಧಿಸಿದ ನೂರಾರು ಕೋಟಿ ರೂಪಾಯಿಗಳ ಬೃಹತ್ ಯೋಜನೆಯೊಂದನ್ನು ಜಾರಿ ಮಾಡುವಾಗ ಸರ್ಕಾರಗಳು ಕನಿಷ್ಟ 'ತಿಳುವಳಿಕೆ ಪತ್ರ'ವನ್ನು ತಯಾರಿಸಲಾದಷ್ಟು ಹೊಣೆಗೇಡಿಗಳಾಗಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ನಗರ ಸಭೆ - ಪುರಸಭೆ -ರಾಜ್ಯ ಸರ್ಕಾರಗಳು ಎಷ್ಟೇ ಜನ ವಿರೋಧಿ ಎಂದರೂ ಅವು ಚುನಾಯಿತ ಸಂಸ್ಥೆಗಳು, ಮತ್ತೆ ಜನರ ಬೆಂಬಲ ಕೇಳಿಕೊಂಡು ಅವರ ಬಳಿ ಬರಬೇಕಾದ - ಅವರ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ ಬದ್ಧತೆ ಈ ಜನಪ್ರತಿನಿಧಿಗಳಿಗೆ ಇದೇ ಇದೆ. ಆದರೆ ಈ ಜನಾಗ್ರಹ ಎಂಬ ಸಂಸ್ಥೆಗೆ ಅಂತಹ ಉತ್ತರದಾಯಿತ್ವ ಏನಿದೆ. ಅದೂ ತಾನು ಉಸಿರಾಡಲು ವಿಶ್ವಬ್ಯಾಂಕಿನ ಆಮ್ಲಜನಕದ ಮೇಲೆ ಅವಲಂಬಿಸಿರುವಾಗ ಅದು ಯಾರ ಪರವಾಗಿ ಕೆಲಸ ಮಾಡೀತು? ವಿಶ್ವಬ್ಯಾಂಕ್‌ನಂತಹ ಸಾಮ್ರಾಜ್ಯಶಾಹಿ ಸುಲಿಗೆಕೋರ ಸಂಸ್ಥೆಗಳು ಹಿನ್ನೆಲೆಯಲ್ಲಿ ನಿಂತು ಕುಣಿಸುವ ತೊಗಲುಬೊಂಬೆಯಾದ 'ಜನಾಗ್ರಹ' ಸಂಸ್ಥೆಯು ಜನರ ಪಾಲ್ಗೊಳ್ಳುವಿಕೆ ಬಗೆಗೆ ಆಡುತ್ತಿರುವ ಮಾತು ಮಾತಿನಲ್ಲಿಯೂ ಪ್ರಜಾಪ್ರಭುತ್ವ ಪ್ರೇಮ ಜಿನುಗುತ್ತಿದೆ. ಜನ ಕಾಳಜಿಯ 'ತುಪ್ಪ' ಸೋರುತ್ತಿದೆ.

ತತ್‌ಕ್ಷಣಕ್ಕೆ ಖಾಸಗೀಕರಣದ ಹುನ್ನಾರದ ಬಲೆ ಬೆಂಗಳೂರಿನ ಮೇಲೆ ಬಿದ್ದಿದೆ.

ನೀರು ಕುಡಿಸುವವರು ಯಾರು?

ಬೆಂಗಳೂರಿನ ನೀರು ಪೂರೈಕೆ ವ್ಯವಸ್ಥೆಯ ಖಾಸಗೀಕರಣಕ್ಕೇನೋ ರಂಗ ಸಜ್ಜುಗೊಂಡಿದೆ. ಆದರೆ ನೀರು ಪೂರೈಸುವವರು ಯಾರು. 1998-99 ರಲ್ಲಿ ವಿವೆಂಡಿ ಎಂಬ ಫ್ರಾನ್ಸ್ ಮೂಲದ ದೈತ್ಯ ಬಹುರಾಷ್ಟ್ರೀಯ ಕಂಪನಿಯೊಂದಿಗೆ ಬಿಡಬ್ಲ್ಯೂಎಸ್ಎಸ್‌ಬಿ ಯು ನೀರು ಪೂರೈಕೆ ಯೋಜನೆಯ ಸಂಬಂಧ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿತ್ತು. ಆದರೆ ಬಿಡಬ್ಲ್ಯುಎಸ್ಎಸ್‌ಬಿ ನೌಕರರ ತೀವ್ರ ವಿರೋಧದಿಂದಾಗಿ ಈ ಯೋಜನೆಯನ್ನು ಕೈಬಿಡಬೇಕಾಗಿ ಬಂತು.

'ಥೇಮ್ಸ್ ವಾಟರ್' ಎಂಬ ಮತ್ತೊಂದು ಜರ್ಮನಿ ದೇಶದ ದೈತ್ಯ ಬಹುರಾಷ್ಟ್ರೀಯ ಕಂಪನಿ ಬೆಂಗಳೂರಿನ 5 ವಿಭಾಗಗಳಲ್ಲಿ ನೀರು ಸೋರಿಕೆ ನಿವಾರಣೆಯ ಸಂಬಂಧದ ಗುತ್ತಿಗೆಯನ್ನುಸ ಈಗಾಗಲೇ ಪಡೆದುಕೊಂಡಿದೆ. ಅಷ್ಟು ಮಾತ್ರವಲ್ಲ, ಬೆಂಗಳೂರಿನ 8 ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ನೀರು ಸರಬರಾಜು ಯೋಜನೆಯ ಗುತ್ತಿಗೆಯನ್ನು ಪಡೆಯುವ ಆಶಯವನ್ನು ವ್ಯಕ್ತಪಡಿಸಿದೆ.

ಜಾಗತೀಕರಣದ ಬಾಲ -
ಈ ಬಹುರಾಷ್ಟ್ರೀಯ ಕಂಪನಿಗಳ ವಿರಾಟ ನೀರು ಮಾರಾಟದ ಜಾಲ

ಎರಡು ದಶಕಗಳ ಹಿಂದೆ ಜಗತ್ತಿನಲ್ಲಿ ಒಟ್ಟಾರೆ ಏಳು ಸಾವಿರ ಬಹುರಾಷ್ಟ್ರೀಯ ಕಂಪನಿಗಳಿವೆ ಎಂದು ಅಂದಾಜಿಸಲಾಗಿತ್ತು. ಈಗ ಈ ಕಂಪನಿಗಳ ಸಂಖ್ಯೆ ನಲವತ್ತೈದು ಸಾವಿರವನ್ನು ದಾಟಿದೆ ಎಂಬ ಅಂದಾಜಿದೆ. ಅಧ್ಯಯನವೊಂದರ ಪ್ರಕಾರ ಇದರಲ್ಲಿ ಮೊದಲ 200 ಕಂಪನಿಗಳ ವಹಿವಾಟು 191 ದೇಶಗಳ ಆರ್ಥಿಕತೆಯ ಒಟ್ಟು ಮೊತ್ತವನ್ನು ಮೀರಿದೆ. ಜಗತ್ತಿನ ನೂರು ಬೃಹತ್ ಆರ್ಥಿಕತೆಗಳನ್ನು ಪರಿಗಣಿಸಿದರೆ ಅದರಲ್ಲಿ 53 ಬಹುರಾಷ್ಟ್ರೀಯ ಕಂಪನಿಗಳೇ ಬರುತ್ತವೆ. 47 ದೇಶಗಳು ಮಾತ್ರ ಈ ಲೆಕ್ಕದಲ್ಲಿ ಬರುತ್ತವೆ.

ಥೇಮ್ಸ್ ವಾಟರ್ - ವಿವಂಡಿಯಂತಹ ಸಂಸ್ಥೆಗಳ ಬಗೆಗೆ ಹೇಳುವುದಾದರೆ ಇವು ಸುಮಾರು 130 ದೇಶಗಳಲ್ಲಿ ನೀರಿನ ಪೂರೈಕೆ (ವ್ಯಾಪಾರ)ದ ಗುತ್ತಿಗೆ ಹಿಡಿದಿರುವ ದೈತ್ಯ ಕಂಪನಿಗಳು. ಈ ನೀರಿನ ವ್ಯಾಪಾರ ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಉದ್ದಿಮೆಗಳಲ್ಲಿ ಒಂದು. ಮಾತ್ರವಲ್ಲ ಇದರ ಪ್ರಮಾಣ ಈಗಾಗಲೇ ಯಾವ ಘಟ್ಟವನ್ನು ಮುಟ್ಟಿದೆ ಎಂದರೆ ಜಗತ್ತಿನಲ್ಲಿ ಇಂದಿನ ಪೆಟ್ರೋಲಿಯಂ ಉದ್ದಿಮೆಯ ಒಟ್ಟು ವಹಿವಾಟಿನ ಶೇ 40 ರಷ್ಟು ಈಗಾಗಲೇ ನೀರಿನ ಉದ್ದಿಮೆ ತಲುಪಿದೆ. ಜಗತ್ತಿನ ಔಷಧ ಉದ್ದಿಮೆಯನ್ನು ಹಿಂದಕ್ಕೆ ಹಾಕಿರುವ ನೀರಿನ ವ್ಯಾಪಾರ, ಔಷಧ ಉದ್ದಿಮೆಗಿಂತ ಮೂರನೇ ಒಂದರಷ್ಟು ಹೆಚ್ಚು ವಹಿವಾಟು ದಾಖಲಿಸಿದೆ.

ಜಗತ್ತಿನೆಲ್ಲೆಡೆ ತೀವ್ರ ಬೇಡಿಕೆಯನ್ನು ಗಳಿಸಿಕೊಳ್ಳುತ್ತಿರುವ - ಅಗಾಧ ಲಾಭದ ಸಾಧ್ಯತೆಯನ್ನು ತನ್ನೊಳಗೆ ಹುದುಗಿಸಿಕೊಂಡಿರುವ ಈ ನೀಲಿ ಬಂಗಾರವನ್ನು ಬಾಚಿಕೊಳ್ಳಲು ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಕಬಂಧ ಬಾಹುಗಳನ್ನು ಚಾಚಿ ಕಾದು ಕುಳಿತುಕೊಂಡಿವೆ. 21ನೇ ಶತಮಾನದಲ್ಲಿ ಮಹಾಯುದ್ಧವೇನಾದರೂ ನಡೆದರೆ ಅದು ನೀರಿಗಾಗಿ ನಡೆಯಲಿದೆ ಎಂಬ ಮಾತೊಂದಿದೆ. ಜನರಿಗೆ ನೀರು ಕುಡಿಸಲು ಬಹುರಾಷ್ಟ್ರೀಯ ಕಂಪನಿಗಳು ತೋರುತ್ತಿರುವ ಈ ಧಾವಂತವನ್ನು ನೋಡಿದರೆ ಅದು ನಿಜವೇ ಅನಿಸುತ್ತದೆ.

ಊರಿಗೆ ಬಂದವಳು ನೀರಿಗೆ ಬರದಿರುವಳೇ?

ಜನಾಗ್ರಹದ ಮುಖವಾಡದ ಮರೆಯಲ್ಲಿ ಜರ್ಮನಿ ಮೂಲದ ಥೇಮ್ಸ್ ವಾಟರ್, ಫ್ರಾನ್ಸ್‌ನ ವಿಎಂಡಿಯಂತಹ ಬಹುರಾಷ್ಟ್ರೀಯ ಕಂಪನಿಗಳು ಬೆಂಗಳೂರಿಗೆ ಲಗ್ಗೆ ಇಟ್ಟಿವೆ. ಬೆಂಗಳೂರಿನ ನೀರು ಪೂರೈಕೆ ವ್ಯವಸ್ಥೆಯನ್ನು ಕಬಳಿಸಿದ ಮೇಲೆ ಮೈಸೂರೇನು ಮಂಗಳೂರೇನು ಎಲ್ಲವೂ ಬೇಕು. ನಾಡಿನ ನದಿ ಜಲ ಮೂಲವೆಲ್ಲವುಗಳನ್ನು ಖಾಸಗೀಕರಿಸಿ ಈ ಕಂಪನಿಗಳ ಕೈಗಿಡಬೇಕು. ಛತ್ತೀಸ್‌ಗಡದಲ್ಲಿ ನದಿಗೆ ನದಿಯನ್ನೇ ಖಾಸಗೀಕರಣ ಮಾಡಿ ಅಲ್ಲಿನ ಸರ್ಕಾರ ಕೈತೊಳೆದುಕೊಂಡಿಲ್ಲವೆ. ಹೀಗೆ ನದಿ -ಜಲಮೂಲಗಳೆಲ್ಲಾ ದೇಶೀ-ವಿದೇಶೀ ಖಾಸಗೀ ಕಂಪನಿಗಳ ಪಾಲಾಗಿ ಹೋದರೆ ಕುಡಿಯಲು ನೀರು ಸಿಗದ ಜನರ ಕಣ್ಣಿನಲ್ಲಿ ರಕ್ತ ಬರುವಂತಹ ಪರಿಸ್ಥಿತಿ ನಿರ್ಮಾಣವಾಗುವುದರಲ್ಲಿ ಏನೇನೂ ಅನುಮಾನವಿಲ್ಲ. ಎನ್ರಾನ್‌ನಂತಹ ಖಾಸಗಿ ವಿದ್ಯುತ್ ಕಂಪನಿ ಬಂದು ಮಹಾರಾಷ್ಟ್ರವನ್ನು ದಿವಾಳಿ ಮಾಡಿದ್ದು, ಆ ಕಂಪನಿ ವಿದ್ಯುತ್ ದರಗಳನ್ನು ತಾರಾಮಾರಿ ಏರಿಸಿದ್ದು ಇನ್ನು ನಮ್ಮ ಕಣ್ಣೆದುರೇ ಇದೆಯಲ್ಲವೇ.

ಏಳು ಕೆರೆಯ ನೀರಲ್ಲ, ಹತ್ತಾರು ದೇಶಗಳ ಹತ್ತಾರು ನದಿ-ತೊರೆಗಳನ್ನು ನುಂಗಿ ನೊಣೆದಿರುವ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧದ ಹೋರಾಟ ನೀರಿನ ಖಾಸಗೀಕರಣದ ವಿರುದ್ಧದ ಹೋರಾಟ ಅಷ್ಟೇ ತೀವ್ರವಾಗಿ ನಡೆಯಬೇಕಿದೆ. ಈಗ ಬೆಂಗಳೂರಿಗರಿಗೆ 'ನೀರು ಕುಡಿಸಲು' ಬರುತ್ತಿರುವ ಈ ಬ.ಕ.ಗಳನ್ನು ನೀರು ನೆರಳೂ ಇಲ್ಲದ ಮರಳುಗಾಡಿಗೆ ಅಟ್ಟಬೇಕಿದೆ. ಜನಾಗ್ರಹದಂತಹ ವಂಚಕ ತೋಳಗಳ ಮಂಜಿನಂತಹ ಮಾತುಗಳಿಗೆ ಜನತೆ ಕರಗಿ ಹೋಗದಂತೆ ಎಚ್ಚೆತ್ತುಕೊಳ್ಳಬೇಕಿದೆ.

ಡಬ್ಲ್ಯು.ಟಿ.ಓ. ಮಾತುಕತೆ: ರಾಷ್ಟ್ರೀಯ ಒಮ್ಮತ ರೂಪಿಸಬೇಕು ಯುಪಿಎ ಸರ್ಕಾರಕ್ಕೆ ಎಡಪಕ್ಷಗಳ ಆಗ್ರಹ

ವಿಶ್ವ ವ್ಯಾಪಾರ ಸಂಘಟನೆಯ ಮಾತುಕತೆಗಳ ಬಗ್ಗೆ ಭಾರತ ಸರ್ಕಾರ ಎಲ್ಲಾ ಪಕ್ಷಗಳಿಗೆ ಒಂದು ಟಿಪ್ಪಣಿ ಕಳಿಸಿತು. ಅದಕ್ಕೆ ಎಡಪಕ್ಷಗಳು ಒಂದು ದೀರ್ಘವಾದ ಪ್ರತಿಕ್ರಿಯೆ ಕಳಿಸಿ ಕೃಷಿ, ಕೃಷಿಯೇತರ ಮಾರುಕಟ್ಟೆ, ಸೇವೆಗಳು ಹಾಗೂ ಪೇಟೆಂಟ್‌ಗಳ ವಿಷಯದಲ್ಲಿ ಕೆಲವು ನಿರ್ದಿಷ್ಟ ಸಲಹೆ-ಸೂಚನೆಗಳನ್ನು ಕಳಿಸಿವೆ. ಉರುಗ್ವೇ ಸುತ್ತಿನಲ್ಲಿನ ಅಪಾರದರ್ಶಕತೆ ಈ ಬಾರಿ ಕಾಣಿಸಬಾರದು, ಸರ್ಕಾರ ತನ್ನ ನಿಲುವುಗಳ ಬಗ್ಗೆ ಶ್ವೇತಪತ್ರ ಹೊರಡಿಸಿ, ಸಂಸತ್ತಿನಲ್ಲಿ ಆ ಬಗ್ಗೆ ಚರ್ಚೆ ನಡೆದು ಒಂದು ರಾಷ್ಟ್ರೀಯ ಒಮ್ಮತವನ್ನು ರೂಪಿಸಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ. ಆ ಟಿಪ್ಪಣಿಯ ಮುಖ್ಯಾಂಶಗಳನ್ನು ಈ ಮುಂದೆ ಕೊಡಲಾಗಿದೆ. ಇದೇ ಡಿಸೆಂಬರ್‌ನಲ್ಲಿ ಹಾಂಕಾಂಗ್‌ನಲ್ಲಿ ಡಬ್ಲ್ಯುಟಿಓ ದ ಮಂತ್ರಿಮಟ್ಟದ ಸಭೆ ನಡೆಯಲಿದೆ.


ಸರ್ಕಾರ ಒದಗಿಸಿದ ವಿವರವಾದ ಟಿಪ್ಪಣಿ ನೋಡಿದರೆ ಈ ಸರ್ಕಾರ ಹಿಂದಿನ ಸರ್ಕಾರ ಅನುಸರಿಸಿದ ನೀತಿಗಳಿಗಿಂತ ಬಹಳವೇನೂ ಭಿನ್ನವಾಗಿರದ ನೀತಿಗಳನ್ನು ಅನುಸರಿಸುವಂತೆ ಕಾಣುತ್ತದೆ ಎಂದು ಎಡಪಕ್ಷಗಳು ತಮ್ಮ ಟಿಪ್ಪಣಿಯ ಪ್ರಸ್ತಾವನೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿವೆ.

ಬಡರಾಷ್ಟ್ರಗಳ ಸೌಹಾರ್ದ ಅಗತ್ಯ

ಡಬ್ಲ್ಯುಟಿಓ ಒಪ್ಪಂದದಲ್ಲೇ ಅಸಮಾನತೆ, ವಿಷಮತೆ ಅಡಕವಾಗಿದೆ. ಅದು ಅಭಿವೃದ್ಧಿ ಹೊಂದಿದ ದೇಶಗಳ ಪರವಾಗಿದೆ. ಆದ್ದರಿಂದ ಮಾತುಕತೆಗಳಲ್ಲಿ ಅಭಿವೃದ್ಧಿಶೀಲ ದೇಶಗಳ ಜತೆಗೂಡಿ ವರ್ತಿಸುವುದು ನಮ್ಮ ದೇಶದ ದೀರ್ಘಾವಧಿ ಹಿತಾಸಕ್ತಿಗಳ ದೃಷ್ಟಿಯಿಂದ ಒಳ್ಳೆಯದು ಎಂದು ಎಡಪಕ್ಷಗಳು ಸೂಚನೆಯಿತ್ತಿವೆ. ಇತ್ತೀಚಿಗೆ 20 ದೇಶಗಳ ಗುಂಪು - ಜಿ20 ಹಾಗೂ 2003 ರಲ್ಲಿ ಕಾನ್‌ಕುನ್‌ನಲ್ಲಿ ಮಂತ್ರಿಮಟ್ಟದ ಸಭೆಯ ವೇಳೆ 33 ದೇಶಗಳ ಜಿ-33 ಗುಂಪಿನ ರಚನೆ ಈ ದಿಕ್ಕಿನಲ್ಲಿ ಸಕಾರಾತ್ಮಕ ಕ್ರಮಗಳು. ಆದರೆ ಇತ್ತೀಚಿನ ಕೆಲವು ಬೆಳವಣಿಗೆಗಳು ಇದಕ್ಕೆ ಅನುಸಾರವಾಗಿ ಇಲ್ಲ. ಭಾರತ ಐದು ಆಸಕ್ತ ದೇಶಗಳ ಭಾಗವಾದದ್ದು, 2004 ರಲ್ಲಿ 'ಜುಲೈ ಚೌಕಟ್ಟು ಒಪ್ಪಂದ' ಉಂಟಾಗುವಲ್ಲಿ ಭಾರತದ ಪಾತ್ರ, ಇತ್ತೀಚೆಗೆ ಸೇವಾ ವಲಯ ಗುಂಪಿನಲ್ಲಿ ಅಮೆರಿಕಾದ ಜೊತೆಗೂಡಿ ಅಧ್ಯಕ್ಷತೆ ವಹಿಸಿದ್ದ ಹಾಗೂ ಮಾತುಕತೆಯ ಫಲಶೃತಿ ಅಭಿವೃದ್ಧಿಶೀಲ ದೇಶಗಳ ವಿರುದ್ಧವಿರುವಂತೆ ಅಭಿವೃದ್ಧಿ ಹೊಂದಿದ ದೇಶಗಳ ಪ್ರಯತ್ನಗಳ ಬಗ್ಗೆ ಭಾರತದ ಮೌನ ಅಭಿವೃದ್ಧಿಶೀಲ ದೇಶಗಳ ಐಕ್ಯತೆ ಬಗ್ಗೆ ನಮ್ಮ ಬದ್ಧತೆಯ ಮೇಲೆ ಪ್ರಶ್ನೆ ಚಿಹ್ನೆ ಇಟ್ಟಿವೆ.

ಸರ್ಕಾರದ ಟಿಪ್ಪಣಿ 'ನಿರ್ದಿಷ್ಟ ಪ್ರಶ್ನೆಗಳ ಮೇಲೆ ಸಮಾನ ಹಿತಾಸಕ್ತಿ ಇದ್ದಲ್ಲೆಲ್ಲಾ ಭಾರತ ಅಭಿವೃದ್ಧಿ ಹೊಂದಿರುವ ದೇಶಗಳೊಂದಿಗೂ ನಿಕಟವಾಗಿ ಕೆಲಸ ಮಾಡಿದೆ' ಎಂದು ಹೇಳಿರುವುದು ಆತಂಕ ಮೂಡಿಸುವಂತದ್ದು ಎಂದಿರುವ ಎಡಪಕ್ಷಗಳು ದಕ್ಷಿಣದ ಬಡದೇಶಗಳ ಸೌಹಾರ್ದವೇ ಡಬ್ಲ್ಯುಟಿಓ ನಲ್ಲಿ ನಮ್ಮ ಕಾರ್ಯತಂತ್ರದ ಗಟ್ಟಿ ಆಧಾರವಾಗಬೇಕೇ ಹೊರತು ಅಮೆರಿಕಾ ಅಥವಾ ಯುರೋಪಿಯನ್ ಒಕ್ಕೂಟದೊಂದಿಗೆ ಅನುಕೂಲಸಿಂಧು 'ಪ್ರಶ್ನೆ - ಆಧಾರಿತ' ಸಮ್ಮಿಶ್ರ ಕೂಟಗಳಲ್ಲ ಎಂದು ಎಡಪಕ್ಷಗಳು ಹೇಳಿವೆ.

ಕೃಷಿ ಪ್ರಶ್ನೆಗಳು, ಕೃಷಿಯೇತರ ಮಾರುಕಟ್ಟೆ, ಗಾಟ್ಸ್ ಹಾಗೂ ಟ್ರಿಪ್ಸ್‌ನ ಪ್ರಶ್ನೆಗಳ ಮೇಲೆ ಭಾರತದ ಮಾತುಕತೆ ನಿಲುವುಗಳ ಬಗ್ಗೆ ಎಡಪಕ್ಷಗಳ ಆತಂಕ ಹಾಗೂ ಕೆಲವು ಸೂಚನೆಗಳನ್ನು ಎಡಪಕ್ಷಗಳ ಟಿಪ್ಪಣಿಯಲ್ಲಿ ನೀಡಲಾಗಿದೆ.



ಕೃಷಿಯ ಮೇಲೆ ಒಪ್ಪಂದ

1. ಉದಾರೀಕರಣದ ಮುಂದಿನ ಘಟ್ಟವನ್ನು ಅಂತಿಮಗೊಳಿಸುವ ಮೊದಲು ಈ ಹಿಂದೆ ನಡೆದ 'ಕೃಷಿಯ ಮೇಲಿನ ಒಪ್ಪಂದ'ದಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ನೀಡಿರುವ ಭರವಸೆಗಳು ಎಷ್ಟು ಈಡೇರಿವೆ ಎಂಬುದನ್ನು ಪರೀಕ್ಷಿಸಬೇಕು.

2. ರಫ್ತು ಸಾಲ, ರಫ್ತು ಸಾಲ ಗ್ಯಾರಂಟಿ ಹಾಗೂ ರಫ್ತು ವಿಮೆ ಮೊದಲಾದ ಎಲ್ಲಾ ರಫ್ತು ಸಬ್ಸಿಡಿಗಳನ್ನು ತಕ್ಷಣವೇ ನಿರ್ಮೂಲ ಮಾಡಬೇಕು. ದೇಶಗಳು ತಮ್ಮ ದೇಶದ ಸರಕುಗಳಿಗೆ ನೀಡುವ ಬೆಂಬಲ ಕ್ರಮಗಳನ್ನು ಕುರಿತ 'ನೀಲಿ ಪೆಟ್ಟಿಗೆ'ಗಳನ್ನು ಕ್ರಮೇಣ ತೆಗೆದುಹಾಕಲಾಗುವುದು ಎಂದು ಕೃಷಿ ಒಪ್ಪಂದದಲ್ಲಿ ಹೇಳಿದ್ದರೂ ಇತ್ತೀಚಿಗಿನ 'ಜುಲೈ ಚೌಕಟ್ಟು' ನಲ್ಲಿ ಅದನ್ನು ಬದಲಿಸಲಾಯಿತು. ಈಗ ಮತ್ತೆ ಆ ಮೂಲ ಅಂಶವನ್ನು ಒತ್ತಿಹೇಳಬೇಕಾಗಿದೆ. ಸರಕುಗಳಿಗೆ ಆಂತರಿಕ ಬೆಂಬಲದ ಇನ್ನೊಂದು ಪೆಟ್ಟಿಯಾದ 'ಹಸಿರು ಪೆಟ್ಟಿಗೆ'ಯ ಹೆಚ್ಚಿನ ಕ್ರಮಗಳು ವ್ಯಾಪಾರವನ್ನು ವಿರೂಪಗೊಳಿಸುವುದರಿಂದಾಗಿ ಅಭಿವೃದ್ಧಿಶೀಲ ದೇಶಗಳು ನೀಡುವ ಯಾವುದೇ ರಿಯಾಯ್ತಿಗೆ ಪ್ರತಿಯಾಗಿ ಅಮೆರಿಕಾ ಮತ್ತು ಯುರೋಪಿಯನ್ ಒಕ್ಕೂಟದ ದೇಶಗಳಲ್ಲಿ ಕೃಷಿಗೆ ನೀಡಿರುವ ಒಟ್ಟು ಉತ್ಪಾದನಾ ಬೆಂಬಲವನ್ನು ಕಡಿಮೆ ಮಾಡಬೇಕು ಎಂದು ಒತ್ತಾಯಿಸಬೇಕು. ಹೊಸ ಮಾತುಕತೆಗಳು ಆರಂಭವಾದ ಒಂದು ತಿಂಗಳೊಳಗೆ ಈಗ ಕೊಡುತ್ತಿರುವ 'ಹಸಿರು ಪೆಟ್ಟಿಗೆ' ಬೆಂಬಲಗಳ ಅಧಿಸೂಚನೆ ನೀಡಿ ಅದನ್ನು ಸಮಯ-ಸಮಯಕ್ಕೆ ಕಡಿತ ಮಾಡುತ್ತಾ ಹೋಗಬೇಕೆಂದು ಒತ್ತಾಯಿಸಬೇಕು.

3. ಕೃಷಿ ಅಭಿವೃದ್ಧಿಶೀಲ ದೇಶಗಳಲ್ಲಿ ಬಹುಪಾಲು ದುಡಿಮೆಗಾರರಿಗೆ ಜೀವನಾಧಾರ ನೀಡುವಂತದ್ದು. ಅಲ್ಲದೆ ಇಲ್ಲಿನ ಕೃಷಿ ಆರ್ಥಿಕಗಳು ಸಣ್ಣ ಪ್ರಮಾಣದ, ಬಹುಪಾಲು ಮಳೆ ನೀರನ್ನೇ ನಂಬಿರುವ ಸಣ್ಣ ಮತ್ತು ಅಂಚಿನ ರೈತರೇ ಹೆಚ್ಚಾಗಿರುವ ಆರ್ಥಿಕ. ಜೊತೆಗೆ ಈ ಕೃಷಿ ಒಪ್ಪಂದ ಬಂದ ಮೇಲೆ ವಿಶ್ವ ಕೃಷಿ ಬೆಲೆಗಳು ಬಹಳ ಏರುಪೇರಾಗಿದೆ, ತೀವ್ರವಾಗಿ ಇಳಿದಿವೆ ಅತ್ತ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೃಷಿ ಉತ್ಪನ್ನ ಹಾಗೂ ವ್ಯಾಪಾರಕ್ಕೆ ಭಾರೀ ಸಬ್ಸಿಡಿ ನೀಡಲಾಗುತ್ತಿದೆ. ಇವೆಲ್ಲದರಿಂದಾಗಿ ಅಭಿವೃದ್ಧಿಶೀಲ ದೇಶಗಳು 300 ಕೋಟಿ ರೈತಾಪಿ ಜನಗಳ ಜೀವನಾಧಾರವನ್ನು ರಕ್ಷಿಸಲು ಪ್ರಮಾಣಾತ್ಮಕ ಮಿತಿಗಳನ್ನು ಹಾಕುವ ಹಕ್ಕು ಹೊಂದಿರಬೇಕು.

4. ಆಹಾರ ಭದ್ರತೆ ಒದಗಿಸಲಿಕ್ಕಾಗಿ ಆಂತರಿಕ ಬಳಕೆಯ ಆಹಾರ ಉತ್ಪನ್ನಗಳ ದೇಶೀ ಉತ್ಪಾದನೆಗಳಿಗೆ ಸಬ್ಸಿಡಿ ನೀಡುವ ಹಕ್ಕು ಅಭಿವೃದ್ಧಿಶೀಲ ದೇಶಗಳಿಗೆ ಇರಬೇಕು. ರೈತರಿಗೂ ಅವರ ಜೀವನಾಧಾರ ರಕ್ಷಿಸಲು ಸಬ್ಸಿಡಿಗಳನ್ನು ನೀಡುವಂತಿರಬೇಕು.

5. ಇದುವರೆಗೆ 'ವಿಶೇಷ ರಕ್ಷಣಾ ವ್ಯವಸ್ಥೆ' ನಿರಾಕರಿಸಲ್ಪಟ್ಟಿದ್ದರೇ ಅಭಿವೃದ್ಧಿಶೀಲ ದೇಶಗಳಿವೆ, ಅವಕ್ಕೆ ಅವಕಾಶ ಕೊಡಬೇಕು. ಎಲ್ಲಾ ಕೃಷಿ ಸರಕು ಗಳಲ್ಲೂ ಇದನ್ನು ಬಳಸಲು ಅವಕಾಶವಿರಬೇಕು.

6. ಒಂದು ಅಭಿವೃದ್ಧಿಶೀಲ ದೇಶ ಬೆಲೆ ಕುಸಿತದಿಂದ ರಕ್ಷಣೆ ಕೊಡುವಂತಿರಬೇಕು. 'ಜುಲೈ ಚೌಕಟ್ಟು' ನಲ್ಲಿ ಇದು ಇದ್ದಕ್ಕಿದ್ದಂತೆ ಆಮದು ಏರಿದರೆ ಮಾಡಬಹುದು ಎಂದು ಸೂಚಿಸಲಾಗಿತ್ತು. ಆದರೆ ಈ ರಕ್ಷಣಾ ಕ್ರಮ ಅಷ್ಟಕ್ಕೇ ಸೀಮಿತವಾಗಬಾರದು. ಏಕೆಂದರೆ ಆಂತರಿಕ ಬೆಲೆ ಕುಸಿತ ಕೇವಲ ಅದೊಂದೇ ಕಾರಣಕ್ಕೆ ಆಗುವುದಿಲ್ಲ - ಅದಕ್ಕಿಂತ ಹೆಚ್ಚಾಗಿ ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಕೆಂದೇ ಕೃಷಿ ಸರಕುಗಳ ಬೆಲೆ ಕುಸಿತದಿಂದ ಆಗುತ್ತದೆ. ಬೆಲೆಗಳು ಹಿಂದಿನ ವರ್ಷಗಳ ಬೆಲೆಗಳ ಒಂದು ನಿರ್ದಿಷ್ಟ ಶೇಕಡಾಕ್ಕಿಂತ ಕೆಳಗಿಳಿದರೆ ರಕ್ಷಣೆ ನೀಡಲು ಅಭಿವೃದ್ಧಿಶೀಲ ದೇಶಕ್ಕೆ ಅವಕಾಶವಿರಬೇಕು.

7. ಅಭಿವೃದ್ಧಿಶೀಲ ದೇಶಗಳು ಹಾಕುವ ವಿವಿಧ ಸುಂಕೇತರ ತಡೆಗಳನ್ನು ತೆಗೆದುಹಾಕಬೇಕು.

8. ಅಭಿವೃದ್ಧಿಶೀಲ ದೇಶಗಳು ರಫ್ತು ಸಬ್ಸಿಡಿ ಕೊಡಲು, ವಿಶೇಷವಾಗಿ ಉನ್ನತ ತಂತ್ರಜ್ಞಾನವನ್ನು



ಅಳವಡಿಸಲು, ಉತ್ಪನ್ನ ಮತ್ತು ಪ್ರಕ್ರಿಯೆ ಮಟ್ಟಗಳಿಗೆ ಅನುಸಾರವಾಗಿರಲು ಹಾಗೂ ವಿವಿಧ ಕೊರತೆಗಳನ್ನು (ಉದಾ: ಹಣಕಾಸು, ಗ್ಯಾರಂಟಿ, ವಿಮೆ ಇತ್ಯಾದಿ) ತುಂಬಿಕೊಡಲಿಕ್ಕಾಗಿ ರಫ್ತು ಸಬ್ಸಿಡಿ ಕೊಡಲು ಅವಕಾಶವಿರಬೇಕು.

ಕೃಷಿಯೇತರ ಮಾರುಕಟ್ಟೆ ಅವಕಾಶ (NAMA)

1. ಭಾರತ ಸುಂಕ ಕಡಿತಗಳಿಗೆ ಸರಳ ರೇಖಾತ್ಮಕವಲ್ಲದ ಸೂತ್ರಕ್ಕೆ ಒಪ್ಪಿದ್ದು, ಅದರ ಮರುಪರಿಶೀಲನೆ ಮಾಡಬೇಕು.

2. ಪ್ರತಿಯೊಂದು ಉತ್ಪನ್ನಕ್ಕೆ ಪ್ರತ್ಯೇಕ ಸುಂಕ ಕಡಿತದ ಬದಲು ಸರಾಸರಿ ಕಡಿತ, ಪ್ರತಿಯೊಂದರಲ್ಲಿ ಕನಿಷ್ಟ ಕಡಿತದ ನಿಲುವು ನಮ್ಮ ಮಾತುಕತೆಯ ಆಧಾರವಾಗಬೇಕು. ಉರುಗ್ವೇ ಸುತ್ತಿನಲ್ಲಿನ ನಿಲುವು ಇದು.

3. ಯಾವುದೇ ದೇಶ ವಿಧಿಸಬಹುದಾದ ಅತ್ಯುಚ್ಚ ಸುಂಕದರವನ್ನು ಹೇಗೆ ನಿರ್ಧರಿಸುವುದು ಎಂಬ ಪ್ರಶ್ನೆಯನ್ನು ಮಾತುಕತೆಗಳ ಮೂಲಕ ಪರಿಹರಿಸಬಹುದು. ಅದು ಹೊಸದಾಗಿ ಲೆಕ್ಕಹಾಕಿದ ಸರಾಸರಿ ಸುಂಕ ದರಕ್ಕಿಂತ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಹೆಚ್ಚು ಇರಬಹುದು. ಈ ಪ್ರಮಾಣವನ್ನು ಪ್ರತಿಯೊಂದು ದೇಶಕ್ಕೆ ಮಾತುಕತೆಯ ಮೂಲಕ ನಿರ್ದಿಷ್ಟಗೊಳಿಸಬಹುದು. ಇನ್ನೊಂದು ವಿಧಾನವೆಂದರೆ ಸೂಕ್ತ ಗರಿಷ್ಟ ಸುಂಕದರವನ್ನು ನಿಗದಿಗೊಳಿಸುವುದು. ಇದರಲ್ಲಿ ಅಭಿವೃದ್ಧಿಶೀ ದೇಶಗಳು ತಮ್ಮ ಗರಿಷ್ಟ ದರವನ್ನು ಅಭಿವೃ ಹೊಂದಿದ ದೇಶಗಳಿಗಿಂತ ಒಂದು ನಿರ್ದಿಷ್ಟ ಹೆಚ್ಚ ಪ್ರಮಾಣದಲ್ಲಿ ನಿಗದಿಗೊಳಿಸಲ ಅವಕಾಶವಿರಬೇಕು.

4. ಯಾವುದೇ ಬದ್ಧತೆಯಿಲ್ಲದ ಉತ್ಪನ್ನಗಳ ಬದ್ಧವಾಗುವುದಿಲ್ಲ ಎಂಬ ತನ್ನ ಹಿಂದಿನ ನಿಲುವನ ಭಾರತ ಪುನರುಚ್ಛರಿಸಬೇಕು. ಸಮರಸಗೊಳಿಸ ವುದಕ್ಕೆ ವಿರುದ್ಧದ ತನ್ನ ನಿಲುವಿಗೆ ಬಲವಾ ಅಂಟಿಕೊಳ್ಳಬೇಕು.

5. ಸುಂಕ ಇಳಿಕೆಯೊಂದಿಗೆ ಸುಂಕೇತರ ತಡೆಗ ಪ್ರಶ್ನೆಯನ್ನು ಪರಿಶೀಲಿಸಬೇಕು. ಏಕೆಂದರೆ ಅಭಿವೃ ಹೊಂದಿದ ದೇಶಗಳು ತಮ್ಮ ಮಾರುಕಟ್ಟೆಯ ಅವಕಾಶವಿಲ್ಲದಂತೆ ತಡೆಯುವ ಮೂಲ ವಿಧಾನವ ಇದು. ಈ ತಡೆಗಳಿಗೆ ಹೇಗೆ ಕಡಿವಾಣ ಹಾಕುವುದ ಎಂಬ ಬಗ್ಗೆ ಯಾವುದೇ ಒಪ್ಪಿಗೆಯಿಲ್ಲದೆ ಸುಂ ಕಡಿತಗಳ ಬಗ್ಗೆ ಒಪ್ಪಂದ ಸಲ್ಲದು.

6. ಸುಂಕದರಗಳ ಕುರಿತು ನಿಲುವುಗಳನ್ ರೂಪಿಸುವಾಗ ಸಣ್ಣ ಪ್ರಮಾಣದ ಉದ್ದಿಮೆಗಳನ್ ವಿಶೇಷವಾಗಿ ಪರಿಗಣಿಸಬೇಕು.

7. ಯಾವುದೇ ವಲಯವಾರು ಸುಂಕದ ತೆಗೆದುಹಾಕುವ ಬಗ್ಗೆ ಬದ್ಧರಾಗಬಾರದು.

8. ಜೀವನಾಧಾರ ಪ್ರಶ್ನೆಗಳನ್ನು ವ್ಯಾಪಾ ಪ್ರಶ್ನೆಗಳಾಗಿ ಪರಿವರ್ತಿಸುವುದನ್ನು ಭಾರತ ವಿರೋಧಿಸಬೇಕು. ಉದಾ: ಮೀನುಗಾರಿ ವಲಯವನ್ನು ಈ NAMA ದಲ್ಲಿ ಸೇರಿಸುವುದು.

ಸೇವಾ ವಲಯದಲ್ಲಿ ವ್ಯಾಪಾರದ ಬಗ್ಗೆ ಸಾರ್ವತ್ರಿಕ ಒಪ್ಪಂದ (GATS)

1. GATS ನಲ್ಲಿ ಅಡಕವಾಗಿರುವ ಅಭಿವೃದ್ಧಿಶೀಲ ದೇಶಗಳ ಪರವಾದ ವಿಶೇಷ ಮತ್ತು ವಿಭಿನ್ನ ವ್ಯವಹಾರ ಧ್ವಂಸಗೊಳಿಸಲು ಅಭಿವೃದ್ಧಿ ಹೊಂದಿದ ದೇಶಗಳು 'ಬೆಂಚ್ ಮಾರ್ಕಿಂಗ್' (ಸಾಮಾನ್ ಮಟ್ಟ), ಬೇಸ್ ಲೈನ್ (ಕನಿಷ್ಟ ಮಟ್ಟ) ಅಥವಾ 'ಪೂರಕ ನಿಲುವುಗಳು' ಇತ್ಯಾದಿ ಹೊಸ ಪರಿಕಲ್ಪನೆಗಳನ್ನು ಆರಂಭಿಸುವುದನ್ನು ಬಲವಾಗ ವಿರೋಧಿಸಬೇಕು.

3. ಇತರ ಅಭಿವೃದ್ಧಿಶೀಲ ದೇಶಗಳೂ ಇದನ್ ವಿರೋಧಿಸುತ್ತಿರುವುದರಿಂದ GATS ನ ಬುಡಮೇಲು ಮಾಡುವ ಈ ಪ್ರಯತ್ನಗಳನ್ ಮೊದಲೇ ನಿಲ್ಲಿಸುವುದು ನಮಗೆ ಕಷ್ಟವಾಗಲಿಕ್ಕಿಲ್ಲ.

2. ನೀರು, ಆರೋಗ್ಯ, ಶಿಕ್ಷಣ ಮುಂತಾದ ಮೂಲ ಸೇವೆಗಳಲ್ಲಿ ಮಾರುಕಟ್ಟೆ ಅವಕಾಶ ಕುರಿತಂತ ನೀಡಿಕೆಗಳನ್ನು ಹಿಂತೆಗೆದುಕೊಳ್ಳಬೇಕು.

3. ಈ ನೀಡಿಕೆಗಳ ಪಟ್ಟಿಯನ್ನು ಅಮೆರಿಕಾ ಮತ್ತ ಯುರೋಪಿಯನ್ ಒಕ್ಕೂಟದ ಪ್ರತಿಕ್ರಿಯೆಯಿಂದಾಗ ಪರಿಷ್ಕರಿಸಬೇಕು. ಈ ರೀತಿ ಅವಕಾಶ ನೀಡುವ ಮೊದಲು ಸಂಬಂಧಪಟ್ಟ ಪ್ರತಿಯೊಂದು ವಲಯ ದಲ್ಲಿಯೂ ಸಂಬಂಧಪಟ್ಟ ಎಲ್ಲರೊಡನೆಯೂ ಸಮಾಲೋಚನೆ ನಡೆಸಬೇಕು.

4. ಈ ನೀಡಿಕೆ ಪಟ್ಟಿಯಲ್ಲಿನ ಶೇ 51 ಎಫ್‌ಡಿಐ ಮಿತಿಯನ್ನು ಮರುಪರಿಶೀಲಿಸಬೇಕು. ಈಗ ಭಾರತದಲ್ಲಿ ಎಫ್‌ಡಿಐ ಮಿತಿ ಶೇ 51 ಕ್ಕಿಂತ ಕಡಿಮೆಯಿರುವ ಸೂಕ್ಷ್ಮ ವಲಯಗಳನ್ನು ಈ ಪಟ್ಟಿಯಿಂದ ತೆಗೆಯಬೇಕು.

5. ರಿಯಾಯ್ತಿಗಳನ್ನು ಗಿಟ್ಟಿಸಲು ಕೃಷಿ ಮತ್ತ ಕೃಷಿಯೇತರ ಮಾರುಕಟ್ಟೆ ಅವಕಾಶದ ವಿಷಯಗಳಲ್ ನಮ್ಮ ರಕ್ಷಣಾತ್ಮಕ ನಿಲುವನ್ನು ಸಡಿಲಗೊಳಿಸಬಾರದು.

ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳ (TRIPS)

1. ವಿಶ್ವ ವ್ಯಾಪಾರ ಒಪ್ಪಂದದಲ್ಲಿನ 'ಭೌಗೋಳಿ ಸೂಚಕಗಳ ರಕ್ಷಣೆ' ಯನ್ನು ಕೃಷಿ, ಪ್ರಾಕೃತಿ ಸರಕುಗಳು, ಯಾವುದೇ ಕರಕುಶಲ ಉತ್ಪಾದಿ ಅಥವಾ ಇತರ ಸರಕು, ಈ ಮೊದಲು ವಿವರಿಸಿ ರೀತಿಯ ಆಹಾರ ಪದಾರ್ಥಗಳು ಇವುಗಳಿಗ

→

ಅಂಗನವಾಡಿ ನೌಕರರ 5ನೇ ಅಖಿಲ ಭಾರತ ಸಮ್ಮೇಳನದತ್ತ..

ದೇಶದ ಕೋಟಿಕೋಟಿ ಗರ್ಭಿಣಿಯರು - ಹಾಗೂ ತಾಯಿ ಮಕ್ಕಳ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಅಪೌಷ್ಟಿಕತೆ ನಿವಾರಣೆಯ ದೃಷ್ಟಿಯಿಂದ ರೂಪುಗೊಂಡಿರುವ ಅಂಗನವಾಡಿ ಕೇಂದ್ರಗಳಲ್ಲಿ ರಾಷ್ಟ್ರಾದ್ಯಂತ 12 ಲಕ್ಷಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ದುಡಿಯುತ್ತಿದ್ದಾರೆ.

ಅಂಗನವಾಡಿಗಳ ಜವಾಬ್ದಾರಿ ಮಾತ್ರವಲ್ಲ ಕಂದಾಯ-ಪಂಚಾಯತ್ ರಾಜ್, ಇತ್ಯಾದಿ ಹಲವು ಇಲಾಖೆಗಳ ಹತ್ತಾರು ಸಮೀಕ್ಷೆ - ವಿಚಾರ-ಪ್ರಚಾರಗಳಿಗೂ ಕಾರ್ಯಕರ್ತೆಯರೂ, ಸಹಾಯಕಿಯರೂ ಆಗಿರುವ ಇವರನ್ನು ಬಳಸಿಕೊಳ್ಳುತ್ತಿರುವ ನಮ್ಮ ಸರ್ಕಾರಗಳು ಇವರನ್ನು ನೌಕರರು ಎಂದು ಪರಿಗಣಿಸಲು ಸಿದ್ದವಿಲ್ಲ. ಗೌರವಧನ ಎಂಬ ನಿಕೃಷ್ಟ ವೇತನ ನೀಡುವ ಮೂಲಕ ಈ ಲಕ್ಷಾಂತರ ಕಾರ್ಮಿಕರ ಕನಿಷ್ಟ ಗೌರವಪೂರ್ಣ ಜೀವನದ ಹಕ್ಕನ್ನು ಕಸಿದುಕೊಂಡಿರುವ ಸರ್ಕಾರಗಳು ತಾಯಿ ಮಕ್ಕಳ ಪೌಷ್ಟಿಕತೆಗಾಗಿ ದುಡಿಯುವ ಈ ನೌಕರರೇ ಅಪೌಷ್ಟಿಕತೆಯಿಂದ ನರಳಬೇಕಾದಂತಹ ಸನ್ನಿವೇಶಗಳನ್ನು ಸೃಷ್ಟಿಸಿವೆ.

ದಿನೇ ದಿನೇ ತೀವ್ರಗೊಳ್ಳುತ್ತಿರುವ ಅಂಗನವಾಡಿಗಳ ಖಾಸಗೀಕರಣದ ನೀತಿಗಳು ಸೇರಿದಂತೆ ಅಂಗನವಾಡಿ ನೌಕರರ ಸಮಸ್ಯೆಗಳ ಬಗೆಗೆ ಸಮಗ್ರವಾಗಿ ಚರ್ಚಿಸಿ ಚಳುವಳಿ ರೂಪುರೇಷೆಗಳನ್ನು ನಿರ್ಧರಿಸುವ ಹಾಗೂ ಅಂಗನವಾಡಿ ನೌಕರರ ಸಂಘಟನೆಯನ್ನು ಬಲಿಷ್ಟಗೊಳಿಸುವ ನಿಟ್ಟಿನಲ್ಲಿ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ 5ನೇ ಅಖಿಲ ಭಾರತ ಸಮ್ಮೇಳನವು ಇದೇ ನವೆಂಬರ್ 8 ರಿಂದ 11, 2005 ರವರೆಗೆ ಬೆಂಗಳೂರು ನಗರದಲ್ಲಿ ನಡೆಯುತ್ತಿದೆ.

ಏನಿದು ಈ ಅಂಗನವಾಡಿ?

ಮಾನವ ಅಭಿವೃದ್ಧಿಯಲ್ಲಿ ಭಾರತದ ಸ್ಥಾನ 127ನೆಯದು. ದೇಶದಲ್ಲಿ ಒಂದು ಸಾವಿರ ಜನನಕ್ಕೆ 64 ಮಕ್ಕಳ ಮರಣ. ಒಂದು ಲಕ್ಷಕ್ಕೆ 440 ತಾಯಂದಿರ ಮರಣ, 1/3ರಷ್ಟು ಮಕ್ಕಳು ಹುಟ್ಟುತ್ತಲೇ ಕಡಿಮೆ ತೂಕದಲ್ಲಿರುವುದು, ಶಾಲೆಯಿಂದ ನಿರಂತರ 'ಡ್ರಾಪ್ ಔಟ್'ಗಳು ಇತ್ಯಾದಿ ಗಮನಿಸಿದರೆ ಆಘಾತವಾಗುತ್ತದೆ. ಮಕ್ಕಳ ಸಮಗ್ರ ಬೆಳವಣಿಗೆಗೆ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಪೋಷಕಾಂಶಗಳ ಲಭ್ಯತೆಯತ್ತ ಮಹತ್ವದ ಆದ್ಯತೆ ನೀಡಬೇಕು. ಮಹಿಳೆಯರ ಸಾಕ್ಷರತಾ ಮಟ್ಟ ಹೆಚ್ಚಬೇಕು. ತುಳಿತಕ್ಕೊಳಗಾದವರನ್ನು ಮೇಲಕ್ಕೆತ್ತಬೇಕು. ಅನೌಪಚಾರಿಕ ಶಾಲಾಪೂರ್ವ ಶಿಕ್ಷಣ ನೀಡಲು, ರೋಗ ನಿರೋಧಕ ಶಕ್ತಿ ಹೆಚ್ಚಿಸುವುದು, ಆಹಾರ, ಆರೋಗ್ಯ ಸಂಬಂಧಿ ಶಿಕ್ಷಣ ನೀಡುವುದು ಮುಂತಾದ ಜನಪರ ಕಾಳಜಿಯನ್ನು ಹೊತ್ತು 1975ರ ಅಕ್ಟೋಬರ್ 2ರಂದು ಭಾರತದಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಪ್ರಾರಂಭವಾಯಿತು. ದೇಶದಾದ್ಯಂತ ಸಮುದಾಯ ಅಬಿವೃದ್ಧಿಗಾಗಿ, ಮಕ್ಕಳ-ತಾಯಂದಿರ ಸಮಗ್ರ ಅಭಿವೃದ್ಧಿಗಾಗಿ 12 ಲಕ್ಷಕ್ಕೂ ಅಧಿಕ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಕೆಲಸ ನಿರ್ವಹಿಸುತ್ತಿದ್ದಾರೆ. ಮುಖ್ಯವಾಗಿ 0-6 ವರ್ಷದೊಳಗಿನ ಮಕ್ಕಳ ಹಾಗೂ 15-45 ವಯೋಮಿತಿಯೊಳಗಿನ ತಾಯಂದಿರ ಸಲುವಾಗಿ ದುಡಿಯುವುದು ಇವರ ಕೆಲಸ.

ದೇಶದಾದ್ಯಂತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಜಾರಿಯಾದ 30ನೇ ವರ್ಷಾಚರಣೆಯ ಸಂದರ್ಭವಿದು. ಆದರೆ ಐಸಿಡಿಎಸ್‌ನ ಮೂಲ ಉದ್ದೇಶ ಮಾತ್ರ ಇದುವರೆಗೂ ಈಡೇರಲಿಲ್ಲ. ಶಿಶು ಮರಣ ಪ್ರಮಾಣ - ಗರ್ಭಿಣಿ- ಬಾಣಂತಿಯರ ಮರಣ ಪ್ರಮಾಣ ಹಾಗೂ ಪೌಷ್ಟಿಕಾಂಶಗಳ ಕೊರತೆ ಏರುತ್ತಲೇ ಇದೆ. ಜೊತೆಗೆ ಹೆಣ್ಣು ಭ್ರೂಣ ಹತ್ಯೆಯಂತಹ ಅನಾಗರಿಕ ಪಿಡುಗು ಬೆಳೆಯುತ್ತಿದೆ. ಸರ್ಕಾರಗಳು ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಮೀಸಲಿಡದೇ ಇರುವುದರಿಂದ ಹಸಿವು, ಬಡತನ ಏರುತ್ತಿದೆ. ಎನ್‌ಸಿಎಇಆರ್ (National Council for Applied Economic Research) ನಡೆಸಿದ ಸಮೀಕ್ಷೆ ಪ್ರಕಾರ ಶಿಶು ಮರಣ; ಅತೀ ಪೌಷ್ಟೀಕಾಂಶ ಕೊರತೆ, ಸಾಮಾನ್ಯ ಪೌಷ್ಟಿಕಾಂಶ ಕೊರತೆಯಿಂದ ನರಳುವ ಮಕ್ಕಳ ಸಂಖ್ಯೆಯಲ್ಲಾದ ಇಳಿತವು ಐಸಿಡಿಎಸ್‌ನ ಯಶಸ್ಸನ್ನು ಪ್ರತಿಫಲಿಸುತ್ತದೆ. ಎಡಪಕ್ಷಗಳ ಬೆಂಬಲವಿರುವ ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ 'ಐಸಿಡಿಎಸ್‌ನ ಸಾರ್ವತ್ರೀಕರಣ' ಮಾಡಬೇಕೆಂಬ ಆಶ್ವಾಸನೆಯ ಹಿನ್ನಲೆಯಲ್ಲಿ ಈ ಬಾರಿ ತನ್ನ ಬಜೆಟ್‌ನಲ್ಲಿ 1 ಲಕ್ಷ 88 ಸಾವಿರಕ್ಕೂ ಅಧಿಕ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿ ವಿಸ್ತರಿಸುವ ಉದ್ದೇಶ ಪ್ರಕಟಿಸಿದೆ. ಆದರೆ ಸೇವಾ ನಿಯಮಾವಳಿ, ಕೆಲಸದ ಭದ್ರತೆ, ಸಾಮಾಜಿಕ ಸುರಕ್ಷೆ ಇಲ್ಲದೆ ಈಗ ಸಾವಿರಾರು ಅಂಗನವಾಡಿ ನೌಕರರು ಬರಿಗೈಲಿ ತಮ್ಮ ನಿವೃತ್ತಿ ಜೀವನಕ್ಕೆ ತೆರಳಬೇಕೆಂದು ಸರ್ಕಾರ ಹೇಳುತ್ತಿದೆ.


ತೋರಣ ಕಟ್ಟುತ್ತಿರುವ ನೌಕರರು

ಸಂಕಷ್ಟಗಳೇನು? ಕೆಲಸಗಳೆಷ್ಟು?

ಐಸಿಡಿಎಸ್ ಹೊರತಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇನ್ನಿತರೆ ಕೆಲಸಗಳಾದ ಒಆರ್‌ಎಸ್ ಜಾಗೃತಿ, ನೇರ ಉಪಚಾರ ಪದ್ಧತಿ, ಏಡ್ಸ್ ಜಾಗೃತಿ, ಸಂತಾನ ನಿಯಂತ್ರಣಕ್ಕೆ ಪ್ರೇರಣೆ, ಡಿಪಿಇಪಿ, ಎಸ್‌ಎಸ್‌ಹೆಚ್, ಸಣ್ಣ ಉಳಿತಾಯ, ಸ್ತ್ರೀಶಕ್ತಿ ಎಸ್.ಹೆಚ್.ಜಿ ಗುಂಪು ರಚನೆ, ಗಣತಿ (ಬಿ.ಪಿ.ಎಲ್, ಜನ ಗಣತಿ) ಮುಂತಾದ ಆರೋಗ್ಯ, ಕಂದಾಯ, ಪಂಚಾಯತ್‌ರಾಜ್ ಇತ್ಯಾದಿ ಹತ್ತಾರು ಇಲಾಖೆಗಳ ಕೆಲಸ ಮಾಡಿ, ರಿಜಿಸ್ಟರ್ ನಿರ್ವಹಿಸಿ ಇಡಲು ಕೇವಲ 4½ ತಾಸು ಸಾಕಾಗದು. ತಾವು ಪಡೆಯುವ ಪ್ರತಿಫಲಕ್ಕಿಂತ ಅತಿ ಹೆಚ್ಚಿನ ದುಡಿಮೆ ಇವರದು.


ಬೆಂಗಳೂರಿನಲ್ಲಿ ಗೋಡೆ ಬರಹ

ಇನ್ನು ಸಮಾಜಮುಖಿ ಕೆಲಸಗಳಲ್ಲಿ ತೊಡಗಿದಾಗ ಪಾಳೇಗಾರಿ ಮನೋಭಾವದ ಜನಪ್ರತಿನಿಧಿಗಳಿಂದ ಹಿಡಿದು ಸಾರ್ವಜನಿಕರವರೆಗೆ ಎಲ್ಲರಿಂದಲೂ ದೈಹಿಕವಾಗಿ - ಮಾನಸಿಕವಾಗಿ ಕಿರುಕುಳ ಅನುಭವಿಸುತ್ತಾ, ಸುಳ್ಳು ಆಪಾದನೆಗಳನ್ನೆದುರಿಸುತ್ತಾ, ಸ್ಥಳೀಯ ಪಟ್ಟಭದ್ರ ರಾಜಕೀಯ ಹಿತಾಸಕ್ತಿಗೆ ಬಲಿಯಾಗಬೇಕಾದ ಸಂಕಟ ಇವರದ್ದು.

ಹೋರಾಟ ಏಕೆ?

ಸಮುದಾಯದ ಅಭಿವೃದ್ಧಿಗಾಗಿ ಇರುವ ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಿಸುವ ಅಥವಾ ಸಂಘ ಸಂಸ್ಥೆಗಳಿಗೆ ನೀಡುವ ಅಥವಾ ಗ್ರಾಮ ಪಂಚಾಯತಿಗಳಿಗೆ ವಹಿಸುವ ಪ್ರಯತ್ನ ಸರ್ಕಾರದಿಂದ ನಡೆಯುತ್ತಲೇ ಇದೆ. ಅವ್ಯಾಹತವಾಗಿ ನಡೆಯುತ್ತಿರುವ ಬೆಲೆ ಏರಿಕೆಯಿಂದಾಗಿ ಅಂಗನವಾಡಿ ನೌಕರರು ಈಗಿರುವ ಗೌರವಧನದಲ್ಲಿ ಜೀವನ ನಡೆಸುವುದು ದುಸ್ತರವಾಗಿದೆ.

ದೇಶಾದ್ಯಂತ ನಡೆಸಿದ ಸಮೀಕ್ಷೆಯಂತೆ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ಸರ್ಕಾರಕ್ಕೆ ದೀರ್ಘ ವರದಿಯನ್ನು ಸಲ್ಲಿಸಿದೆ.

ಚಳುವಳಿಯ ಒತ್ತಾಯ

ಕೇಂದ್ರದಲ್ಲಿ ಐಸಿಡಿಎಸ್ ಯೋಜನೆಗೆ ಪ್ರತ್ಯೇಕ ಇಲಾಖೆ, ಅಂಗನವಾಡಿ ಕಾರ್ಯಕರ್ತೆಯರನ್ನು ದರ್ಜೆ 3, ಸಹಾಯಕಿಯರನ್ನು ದರ್ಜೆ 4 ನೌಕರರೆಂದು ಪರಿಗಣಿಸಿ ಖಾಯಂಗೊಳಿಸಿ, ಸರ್ಕಾರಿ ನೌಕರರ ಸಮಾನ ವೇತನ ನೀಡುವುದು, *1ನೇ ತರಗತಿಗೆ ಮಕ್ಕಳನ್ನು ದಾಖಲು ಮಾಡುವಾಗ ಅಂಗನವಾಡಿ ಕೇಂದ್ರದ ಮೂಲಕ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ)* ನೀಡುವುದನ್ನು ಕಡ್ಡಾಯಗೊಳಿಸುವ ಮುಖಾಂತರ ಅಂಗನವಾಡಿ ಕೇಂದ್ರದ ಮಹತ್ವ ಹೆಚ್ಚಿಸುವುದು, ಈ ತಕ್ಷಣ ನಿವೃತ್ತರಾಗುವ ನೌಕರಂಗೆ ಒಂದು ಲಕ್ಷ ರೂ., ಸಹಾಯಕಿಗೆ 50 ಸಾವಿರ ರೂ. ನೀಡುವುದು, ಭವಿಷ್ಯದಲ್ಲಿ 65ನೇ ವರ್ಷಕ್ಕೆ ನಿವೃತ್ತಿ ಮತ್ತು ಪ್ರತಿ ತಿಂಗಳು ಪಿಂಚಣಿ ಹಣ ಕನಿಷ್ಟ 750 ರಿಂದ 1200 ರೂ. ನೀಡಬೇಕು.

ಹೋರಾಟಕ್ಕೆ ಸಿಕ್ಕ ಪ್ರತಿಫಲ

ಕೇಂದ್ರ ಸರ್ಕಾರವು 2002ಏಪ್ರಿಲ್‌ನಿಂದ ಕಾರ್ಯಕರ್ತೆಗೆ 500 ರೂ. ಸಹಾಯಕಿಗೆ 240 ರೂ.ನಂತೆ, ರಾಜ್ಯ ಸರ್ಕಾರವು 2003 ರಲ್ಲಿ ಕಾರ್ಯಕರ್ತೆಗೆ 250 ರೂ, ಸಹಾಯಕಿಗೆ 125 ರೂನಂತೆ ಹೆಚ್ಚಳ ಮಾಡಿದೆ. ಮರಣ ಪರಿಹಾರ ನಿಧಿ ಹಾಗೂ ಕಾಯಿಲೆ ನಿಧಿ, ಮೇಲ್ವಿಚಾರಕಿ ಹುದ್ದೆಗೆ ಶೇ.40 ಮೀಸಲಾತಿ, ಹೆರಿಗೆ ರಜೆ, ಬೇಸಿಗೆ ರಜೆ, ಸಾಮೂಹಿಕ ವಿಮೆ, ನಿರಂತರ ಮತ್ತು ಸಮರಶೀಲ ಹೋರಾಟಗಳಿಂದ ಅಂಗನವಾಡಿ ನೌಕರರ ಕೆಲಸದ ಭದ್ರತೆಗೆ ಅಪಾಯವಾಗಿದ್ದ ಗ್ರಾಮ ಪಂಚಾಯ್ತಿಗಳಿಂದ ನೌಕರರನ್ನು ಮುಕ್ತಗೊಳಿಸಿದ್ದು, ಹೀಗೆ ಹೋರಾಟದಿಂದ ಪಡೆದು ಕೊಂಡಿರುವುದನ್ನು ಸ್ಮರಿಸಬಹುದು.

ಸಮ್ಮೇಳನದ ಮಹತ್ವ

ಉದಾರೀಕರಣ, ಜಾಗತೀಕರಣ, ಖಾಸಗೀಕರಣ ನೀತಿಗಳು ಅಂಗನವಾಡಿ ನೌಕರರ ಕೊರಳಿಗೆ ಉರುಳಾಗಿದೆ. ಈ ತಪ್ಪು ನೀತಿಗಳ ಘೋರ ಪರಿಣಾಮದ ವಿರುದ್ಧ ಅರಿವು ಮೂಡಿಸುವುದು. ಅಂಗನವಾಡಿ ನೌಕರರ ಖಾಯಮಾತಿ, ನಿವೃತ್ತಿ ವೇತನ, ಸೇವಾ ನಿಯಮಾವಳಿ ಮುಂತಾದ ಮುಖ್ಯ ಬೇಡಿಕೆಗಳ ಜೊತೆಗೆ ನೌಕರರ ಪರಿಸ್ಥಿತಿ ಸುಧಾರಿಸಲು, ಉದ್ಯೋಗ ರಕ್ಷಿಸಲು ಮತ್ತು ಮುಂದಿನ ತಲೆಮಾರಿಗೆ ದೇಶದ ಮಾನವ ಸಂಪನ್ಮೂಲದ ಸಮಗ್ರ ತಳಪಾಯದೊಂದಿಗೆ ದೇಶ ರಕ್ಷಿಸಲು ಹೋರಾಟವೊಂದೇ ದಾರಿ. ಐಸಿಡಿಎಸ್ ಉಳಿಯಬೇಕು, ತಾಯಂದಿರ ಬದುಕು, ಮಕ್ಕಳ ಭವಿಷ್ಯ ಉಜ್ವಲವಾಗಬೇಕು, ಅಂಗನವಾಡಿ ನೌಕರರ ಬದುಕು ಹಸನಾಗಬೇಕೆಂಬ ವಿಶಾಲ ದೃಷ್ಟಿಯನ್ನು ಹೊಂದಿರುವ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಶನ್ ಈ ನಿಟ್ಟಿನಲ್ಲಿ ಸಮಗ್ರವಾಗಿ ಚರ್ಚಿಸಿ ಹೋರಾಟ ರೂಪಿಸಲು ಹಾಗೂ ಸಂಘಟನೆಯನ್ನು ಬಲಪಡಿಸಲು ಬೆಂಗಳೂರಿನಲ್ಲಿ ನವೆಂಬರ್ *8ರಿಂದ 11, 2005ರವರೆಗೆ 5ನೇ ಅಖಿಲ ಭಾರತ ಸಮ್ಮೇಳನ* ನಡೆಸಲು ಮುಂದಾಗಿದೆ.

○

→

ವಿಸ್ತರಿಸಲು ಶೀಘ್ರವೇ ಮಾತುಕತೆಗಳು ನಡೆಯಬೇಕು.

2. ಸೂಕ್ಷ್ಮಜೀವಾಣುಗಳು ಮತ್ತು ಜೈವಿಕೇತರ ಹಾಗೂ ಸೂಕ್ಷ್ಮ ಜೈವಿಕ ಪ್ರಕ್ರಿಯೆಗಳನ್ನು ಪೇಟೆಂಟ್ ಮಾಡಬಹುದೇ ಎಂಬ ಬಗ್ಗೆ ನಡೆಯುತ್ತಿರುವ ಪರಾಮರ್ಶೆಯಲ್ಲಿ ಭಾರತ ಇವನ್ನು ಪೇಟೆಂಟ್‌ನಿಂದ ಹೊರಗಿಡಬೇಕು ಎಂದು ವಾದಿಸಬೇಕು.

3. ಟ್ರಿಪ್ಸ್‌ನ ಪರಿಣಾಮಗಳ ಪರಾಮರ್ಶೆ ನಡೆಸುವ ಸಂದರ್ಭದಲ್ಲಿ ಟ್ರಿಪ್ಸ್‌ನ ಪರಾಮರ್ಶೆಯಾಗಬೇಕು, ಅನುಬಂಧದಲ್ಲಿ ವಿವರಿಸಿದ ರೀತಿಯಲ್ಲಿ ಒಪ್ಪಂದದಲ್ಲೇ ಬದಲಾವಣೆಯಾಗಬೇಕು ಎಂದು ಭಾರತ ಒತ್ತಿ ಹೇಳಬೇಕು.

4. 'ಜೈವಿಕ ವೈವಿಧ್ಯತೆ ಮೇಲಿನ ಅಧಿನಿರ್ಣಯ' (CBD) ಕ್ಕೆ ಅನುಸಾರವಾಗಿ ಜೈವಿಕ ಸಂಪನ್ಮೂಲಗಳಿಗೆ ಅವಕಾಶ, ಮಾಹಿತಿಪೂರ್ಣ ಪೂರ್ವ ಸಮ್ಮತಿ ಮತ್ತು ಪ್ರಯೋಜನಗಳಲ್ಲಿ ಪಾಲುದಾರಿಕೆಯ ಪ್ರಶ್ನೆಗಳನ್ನು ಚರ್ಚಿಸಬೇಕು.

5. ಸಾರ್ವಜನಿಕ ವ್ಯಾಪ್ತಿಯ ವಿಜ್ಞಾನವನ್ನು ಪ್ರೋತ್ಸಾಹಿಸಲು ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಬೇಕು ಎಂದು ಭಾರತ ಪ್ರಸ್ತಾಪಿಸಬೇಕು. ನಿರ್ದಿಷ್ಟವಾಗಿ ತಂತ್ರಾಂಶ (ಸಾಫ್ಟ್‌ವೇರ್) ಹಾಗೂ ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಜಿ) ಸಾರ್ವತ್ರಿಕ ಸಾರ್ವಜನಿಕ ಪರವಾನಗಿ (ಜನರಲ್ ಪಬ್ಲಿಕ್ ಲೈಸೆನ್ಸ್) ಮಿತಿ ಅಗತ್ಯವಿದೆ ಯೆಂದು ವಾದಿಸಬೇಕು. ಸಾರ್ವಜನಿಕ ವ್ಯಾಪ್ತಿಯಲ್ಲಿ ತೆರೆದ ಪರವಾನಗಿಗಳ ಅಡಿಯಲ್ಲಿ ಜ್ಞಾನವನ್ನು ಬಳಸುವ ಎಲ್ಲಾ ಅವಿಷ್ಕಾರ ಹಾಗೂ ತಂತ್ರಾಂಶಗಳನ್ನು ಕಾಪಿರೈಟ್ ಮಾಡುವ ಹಕ್ಕಿಲ್ಲ, ಅಂದರೆ ಪೇಟೆಂಟ್ ಮಾಡುವ ಹಾಗಿಲ್ಲ ಹಾಗೂ ಎಲ್ಲಾ ದೇಶಗಳ ಕಾನೂನುಗಳಲ್ಲಿ ಈ ರಕ್ಷಣೆ ಬಿಂಬಿತವಾಗಿರಬೇಕು ವಂಬ ನೀತಿಯ ಮೇಲೆ ಈ ವಾದ ಹೂಡಬೇಕು.

6. ಪ್ರತಿಯೊಂದು ದೇಶದ ಪೇಟೆಂಟ್ ಕಾನೂನು ತಂತ್ರಜ್ಞಾನ ವರ್ಗಾವಣೆಯನ್ನು ಮತ್ತಷ್ಟು ಮಾತುಕತೆಗಳಿಲ್ಲದೆ ಕೂಡಲೇ ಮಾಡುವ ಅಂಶವನ್ನು ಹೊಂದಿರಬೇಕು.

ಕಹಿ ಅನುಭವದಿಂದ ಪಾಠ ಕಲಿಯಬೇಕು.

ಡಿಸೆಂಬರ್ 2005 ರಲ್ಲಿ ಹಾಂಗ್‌ಕಾಂಗ್ ಮಂತ್ರಿಮಟ್ಟದ ಸಭೆಯಲ್ಲಿ ಭಾರತ ಸರ್ಕಾರ ತಳೆಯುವ ಮಾತುಕತೆಗಳ ಕುರಿತಾದ ನಿಲುವು ಮತ್ತು ಈ ಮಾತುಕತೆಗಳ ಫಲಿತಾಂಶ ದೇಶದ ಆರ್ಥಿಕ ಮತ್ತು ರಾಜಕೀಯದ ಮೇಲೆ, ವಿಶೇಷವಾಗಿ ರೈತಾಪಿ ಮತ್ತು ಕಾರ್ಮಿಕವರ್ಗದ ಮೇಲೆ ದೂರಗಾಮೀ, ಮುಂದೆ ಬದಲಿಸಲೂ ಆಗದ, ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಬಹುದು. ಈ ಹಿಂದೆ ಉರುಗ್ವೇ ಸುತ್ತಿನಲ್ಲಿ ವಚನಬದ್ಧರಾದಾಗ ಅದರಲ್ಲಿ ಪಾರದರ್ಶಕತೆ ಇರಲಿಲ್ಲ. ವಚನಗಳನ್ನು ನೀಡಿಯಾದ ಮೇಲೆ ಆರಂಭದ ವರ್ಷದಲ್ಲಿ ಅದನ್ನು ಸಮರ್ಥಿಸಿಕೊಳ್ಳಲು ಪಕ್ಷಪಾತಿ 'ಪರಿಣತರು' ಲೆಕ್ಕ ಹಾಕಿದ 'ಪ್ರಯೋಜನ'ಗಳ ಅತಿರಂಜಿತ ಅಂದಾಜುಗಳನ್ನು ಮುಂದೊಡ್ಡಲಾಯಿತು. ಆಗ ನಡೆದ ಚೌಕಾಸಿ ಅಭಿವೃದ್ಧಿಹೊಂದುತ್ತಿರುವ ದೇಶಗಳಿಗೆ ತೀವ್ರವಾಗಿ ಪ್ರತಿಕೂಲವಾಗಿತ್ತು, ಈ ದೇಶಗಳನ್ನು ವಂಚಿಸಲಾಯಿತು ಎಂಬುದನ್ನೀಗ ಎಲ್ಲರೂ ಒಪ್ಪುತ್ತಾರೆ. ಈ ಕಹಿ ಅನುಭವದಿಂದ ಪಾಠ ಕಲಿಯ ಬೇಕು. ಆದ್ದರಿಂದ ಹಾಂಕ್‌ಕಾಂಗ್ ಮಂತ್ರಿಮಟ್ಟದ ಸಭೆಯಲ್ಲಿ ಸರ್ಕಾರ ಅನುಸರಿಸಬೇಕೆಂದಿರುವ ನಿಲುಮೆಗಳ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ ಅದನ್ನು ಸಂಸತ್ತಿನ ಚಳಿಗಾಲದ ಅದಿವೇಶನದಲ್ಲಿ ಚರ್ಚಿಸಬೇಕು ಎಂದು ಎಡಪಕ್ಷಗಳ ಟಿಪ್ಪಣಿಯು ಸಮಾಪನ ಪರಿಚ್ಛೇದದಲ್ಲಿ ಆಗ್ರಹಿಸಲಾಗಿದೆ. ಸಂಸತ್ತಿನಲ್ಲಿ ಈ ಬಗ್ಗೆ ಮಾಹಿತಿಪೂರ್ಣ ಚರ್ಚೆ ನಡೆಯಬೇಕು ಹಾಗೂ ರಾಷ್ಟ್ರೀಯ ಒಮ್ಮತದ ಬೆಂಬಲವಿಲ್ಲದೆ ಯಾವುದೇ ವಚನ ನೀಡಬಾರದು ಎಂದು ಎಡಪಕ್ಷಗಳು ಆಗ್ರಹಿಸಿವೆ.

○

ಭ್ರಷ್ಟಾಚಾರ - ನೌಕರಶಾಹಿ ಪ್ರವೃತ್ತಿಗೊಂದು ಪರಿಣಾಮಕಾರಿ ಮದ್ದು


ಶಿಕ್ಷಣ-ಆಡಳಿತ ವ್ಯವಸ್ಥೆಯ ಪ್ರಜಾಪ್ರಭುತ್ವೀಕರಣ

ಪಶ್ಚಿಮ ಬಂಗಾಳದ ಮಾದರಿ

ಏಪ್ರಿಲ್-ಮೇ ತಿಂಗಳು ಬಂತೆಂದರೆ ನಮ್ಮ ರಾಜ್ಯದಲ್ಲಿ ಮಂತ್ರಿ ಮಹೋದಯರ ಮನೆಯ ಮುಂದೆ ಜನ ಜಂಗುಳಿಯ ಜಾತ್ರೆ. ಶಿಕ್ಷಣ ಇಲಾಖೆಯ ಉನ್ನತಾಧಿಕಾರಿಗಳ ಕಛೇರಿಯ ಮುಂದೆ ವರ್ಗಾವಣೆಗಾಗಿ ಅರ್ಜಿ ಹಿಡಿದ ಶಿಕ್ಷಕರು ಉದ್ಯೋಗಿಗಳ ನಿತ್ಯ ಯಾತ್ರೆ. ಟೇಬಲ್ ಕೆಳಗೆ 'ಎನ್‌ವಲಪ್' ಒಳಗೆ ಸಾವಿರಾರು ರೂಪಾಯಿಗಳ 'ವರ್ಗಾವಣೆ' ಯಾಗದಿದ್ದರೆ, ಈ 'ಬಡಪಾಯಿ'ಗಳಿಗೆ ವರ್ಗಾವಣೆಯಾದರೂ ಹೇಗೆ ಸಿಕ್ಕೀತು. ಇನ್ನು ನೇಮಕಾತಿ ಪ್ರಕ್ರಿಯೆಯ ಬಗ್ಗೆಯಂತೂ ಕೇಳುವುದೇ ಬೇಡ. ಇತ್ತೀಚೆಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಸಾಕಷ್ಟು ಮಟ್ಟಿಗೆ ಭ್ರಷ್ಟಾಚಾರವನ್ನು ತಡೆಗಟ್ಟುವ ವ್ಯವಸ್ಥೆಯಾಗಿದೆಯಾದರೂ ಇನ್ನೂ ಮೇಲ್ಮಟ್ಟದ ಉಪನ್ಯಾಸಕರು ಮತ್ತು ಸಿಬ್ಬಂದಿ ನೇಮಕದಲ್ಲಿ ಸಾಕಷ್ಟು 'ಮೇಲ್ಮಟ್ಟದ ಭ್ರಷ್ಟಾಚಾರ'ವೇ ಅವ್ಯಾಹತವಾಗಿ ನಡೆಯುತ್ತಿದೆ.

ಆದರೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಶಿಕ್ಷಕರು ಅಥವಾ ಯಾವುದೇ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯೇ ಇರಲಿ ಸರ್ಕಾರಿ - ಅರೆ ಸರ್ಕಾರಿ ಸಂಸ್ಥೆಗಳ ನೇಮಕಾತಿ - ವರ್ಗಾವಣೆ ಇತ್ಯಾದಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದು ಸಾಧ್ಯವಾಗಿದೆ. ಹೇಗೆ ಎಂಬುದೇ ಮುಖ್ಯ ಪ್ರಶ್ನೆ.

ಶಿಕ್ಷಣ ವ್ಯವಸ್ಥೆ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಪ್ರಜಾಪ್ರಭುತ್ವೀಕರಣವೇ ಈ ಸಾಧನೆಯ ಮೂಲ ಆಧಾರ. ಕಳೆದ 15-20 ವರ್ಷಗಳಿಂದ ಶಿಕ್ಷಕರ-ನೌಕರರ ನೇಮಕಾತಿ-ವರ್ಗಾವಣೆ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪವನ್ನು ಎತ್ತಲು ಸಹ ವಿರೋಧಪಕ್ಷಗಳಿಗೆ ಸಾಧ್ಯವಾಗಿಲ್ಲ. ಈ ಬಗ್ಗೆ ವಿವರವಾಗಿ ಮಾತನಾಡಿದ್ದಾರೆ ಇತ್ತೀಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಪಶ್ಚಿಮ ಬಂಗಾಳದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಕಾಂ. ಕಾಂತಿ ಬಿಸ್ವಾಸ್. ಅವರೊಂದಿಗಿನ ಚರ್ಚೆಯ ಮಾಹಿತಿಯನ್ನು ಲೇಖನದ ರೂಪಕ್ಕೆ ತರಲಾಗಿದೆ.



ಕಾಂ. ಕಾಂತಿಬಿಸ್ವಾಸ್

ರಾಮಕೃಷ್ಣ.ಆರ್

ಪಶ್ಚಿಮ ಬಂಗಾಳ ರಾಜ್ಯದ ಶಿಕ್ಷಣ ವ್ಯವಸ್ಥೆಗೆ ಹೂಣಾಸು - ಒದಗಿಸುವ ಜವಾಬ್ದಾರಿ ಹೊಂದಿರುವ ಸರ್ಕಾರವಾಗಲಿ, ಸರ್ಕಾರದ ಪರವಾಗಿ ಶಿಕ್ಷಣ ಸಚಿವರಾಗಲೀ ಅಥವಾ ಶಿಕ್ಷಣ ಇಲಾಖೆಯ ಉನ್ನತಾಧಿಕಾರಿಗಳಾಗಲಿ ಶಿಕ್ಷಣ ರಂಗದ ವಿಚಾರದಲ್ಲಿ ಅದು ನೇಮಕಾತಿಯೇ ಇರಲಿ ಅಥವಾ ವರ್ಗಾವಣೆಯೇ ಇರಲಿ, ಹಸ್ತಕ್ಷೇಪ ನಡೆಸಲು ಅವಕಾಶಗಳಿಲ್ಲ. ಈ ಸಂಬಂಧ ನಿರ್ಧಾರಗಳನ್ನು ಕೈಗೊಂಡು ನಿರ್ವಹಿಸಲು ಪ್ರಜಾಸತ್ತಾತ್ಮಕ ವಿಧಾನದಲ್ಲಿ ಚುನಾಯಿತಗೊಂಡ ಚುನಾಯಿತ ಸಮಿತಿಗಳ ವ್ಯವಸ್ಥೆಯನ್ನು ರೂಪಿಸಲಾಗಿದೆ. 'ಪಶ್ಚಿಮ ಬಂಗಾಳ ಪ್ರಾಥಮಿಕ ಶಿಕ್ಷಣ ಮಂಡಳಿ ಕಾಯ್ದೆ'ಯ ಮೂಲಕ ಜಿಲ್ಲಾ ಮಟ್ಟದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಮಂಡಳಿ'(ಕೌನ್ಸಿಲ್)ಗಳನ್ನು ರೂಪಿಸಲಾಗಿದೆ. ಈ ಜಿಲ್ಲಾ ಕೌನ್ಸಿಲ್ ಎಂದರೆ ಬಹುತೇಕ ಚುನಾಯಿತ ಸದಸ್ಯರಿರುವ 32 ಜನರ ಸಮಿತಿಯಿದು. ಪ್ರಾಥಮಿಕ ಶಿಕ್ಷಕರೇ ತಮ್ಮ ಪ್ರತಿನಿಧಿಗಳನ್ನು ಈ ಸಮಿತಿಗೆ ಚುನಾಯಿಸುತ್ತಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಭಾಷಾ ಅಲ್ಪಸಂಖ್ಯಾತ ವಿಭಾಗಗಳಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಈ ಸಮಿತಿಗೆ ನೇಮಕ ಮಾಡಲಾಗುತ್ತದೆ. ಈ ಸಮಿತಿಯಲ್ಲಿ ಸರ್ಕಾರದಿಂದ ಒಬ್ಬ ಪ್ರತಿನಿಧಿ ಮಾತ್ರ ಇರುತ್ತಾರೆ. ಜಿಲ್ಲಾ ಪಂಚಾಯಿತ್ತಿಯಿಂದ ಒಬ್ಬ ಚುನಾಯಿತ ಪ್ರತಿನಿಧಿ ಅಲ್ಲದೆ ಜಿಲ್ಲೆಯ ಶಾಸಕರು ಸೇರಿ ಚುನಾಯಿಸುವ ಒಬ್ಬ ಚುನಾಯಿತ ಶಾಸಕರು ಈ ಸಮಿತಿಯಲ್ಲಿರುತ್ತಾರೆ. ಪ್ರತಿ ಜಿಲ್ಲೆಯಲ್ಲಿಯೂ ಇರುವ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕೌನ್ಸಿಲ್‌ಗಳು ಆಡಳಿತ ನಿರ್ವಹಣೆ - ವರ್ಗಾವಣೆಯಂತಹ ಹೆಚ್ಚಿನ ಕಾರ್ಯಭಾರಗಳನ್ನು ಪಾರದರ್ಶಕ ವಿಧಾನದ ಮೂಲಕ ನಿರ್ವಹಿಸುತ್ತವೆ. ವರ್ಗಾವಣೆಯು ಅಂತರ್ ಜಿಲ್ಲೆಯ ಸ್ವರೂಪದ್ದಾದರೆ ಮಾತ್ರ ಆಗ ಆ ವಿಚಾರವು ಪಶ್ಚಿಮ ಬಂಗಾಳ ಪ್ರಾಥಮಿಕ ಶಿಕ್ಷಣ ಬೋರ್ಡ್‌ನ ಮುಂದೆ ಬರುತ್ತದೆ.

ಒಟ್ಟು ಈ ವಿಚಾರಗಳಲ್ಲಿ ಶಿಕ್ಷಣ ಇಲಾಖೆಯ ರಾಜ್ಯ ನಿರ್ದೇಶಕರು ಆಯುಕ್ತರೂ ಸಹ ಮಧ್ಯ ಪ್ರವೇಶಿಸುವಂತಿಲ್ಲ. ಇವರುಗಳ ಪಾತ್ರವೇನೇ ಇದ್ದರೂ ಈ ಮೇಲ್ಕಂಡ ಚುನಾಯಿತ ಸಮಿತಿಗಳಿಗೆ ಪಠ್ಯಕ್ರಮ, ಪಠ್ಯನೀತಿ, ಪರೀಕ್ಷಾ ನೀತಿ ಇತ್ಯಾದಿ ನೀತಿಗಳನ್ನು ಕುರಿತಂತೆ ಸರ್ಕಾರದ 'ಅಭಿಪ್ರಾಯ'ವನ್ನು ನೀಡುವುದು ಮುಂತಾದ ಸೀಮಿತವಾದ ಕೆಲಸಗಳು.

ಪಶ್ಚಿಮ ಬಂಗಾಳ ರಾಜ್ಯದಲ್ಲಿ 730 ಶೈಕ್ಷಣಿಕ ಮಂಡಲಗಳಿವೆ (ಸರ್ಕಲ್). ಈ ಪ್ರತಿ ಮಂಡಲಗಳಲ್ಲೂ ಇರುವ ಶಾಲಾ ಶಿಕ್ಷಣ ಉಪ ತಪಾಸಣಾಧಿಕಾರಿಗಳಿಗೆ (ಸಬ್ ಇನ್ಸ್‌ಪೆಕ್ಟರ್‌ಗಳು) ವೇತನ ನೀಡುವುದು ಸರ್ಕಾರವಾದರೂ ಸಹ ಅವರು ತಮ್ಮ ತಪಾಸಣಾ ವರದಿ ಸಲ್ಲಿಸುವುದು ಚುನಾಯಿತ ಸಮಿತಿಗಳಿಗೆ ಮತ್ತು ಅವರನ್ನು ನಿರ್ದೇಶಿಸುವುದು ಮೇಲೆ ಹೇಳಲಾದ ಚುನಾಯಿತ ಸಮಿತಿಗಳೇ.



ಶಿಕ್ಷಕ ಸಂಘಗಳು ವಿಶ್ವಾಸಕ್ಕೆ

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಒಟ್ಟಾರೆ 7 ಶಿಕ್ಷಕ ಸಂಘಗಳಿವೆ. ಶಿಕ್ಷಣ ನೀತಿ ನಿರೂಪಣೆ, ಶೈಕ್ಷಣಿಕ ಆಡಳಿತ ನಿರ್ವಹಣೆ ಪ್ರತಿಯೊಂದೂ ಪ್ರಶ್ನೆಯಲ್ಲಿ ಈ ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುತ್ತದೆ. ಈ ಸಂಘಟನೆಯ ಪ್ರತಿನಿಧಿಗಳೊಂದಿಗೆ ಜಿಲ್ಲಾ ಕೌನ್ಸಿಲ್‌ಗಳು - ರಾಜ್ಯ ಮಂಡಳಿ ಚರ್ಚಿಸುತ್ತವೆ. ಶಿಕ್ಷಕರ ಬಗೆಗಿನ ದೂರು ದೋಷಗಳು ಅದಕ್ಷತೆ ಬಗೆಗೆ ಸಹ ನೌಕರಶಾಹಿ ವಿಧಾನ ಅನುಸರಿಸದೇ, ಶಿಕ್ಷಕ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸಲು ಪ್ರಯತ್ನಿಸಲಾಗುತ್ತದೆ.

ಹೊಸ ಶಾಲೆ ಸ್ಥಾಪನೆ - ಶಾಲೆಗಳ ವಿಸ್ತರಣೆ ಇಂತಹ ಪ್ರಶ್ನೆಗಳಲ್ಲಿ ಜಿಲ್ಲಾ ಪರಿಷತ್‌ಗಳ ಶಿಕ್ಷಣ ಸಮಿತಿಯು ಶಿಫಾರಸ್ಸು ತಯಾರಿಸಿ ಜಿಲ್ಲಾ ಕೌನ್ಸಿಲ್‌ಗೆ ನೀಡುತ್ತದೆ. ಅವುಗಳನ್ನು ಜಿಲ್ಲಾ ಕೌನ್ಸಿಲ್ ಜಾರಿ ಮಾಡುತ್ತದೆ.

ಶಾಲಾ-ಕಾಲೇಜು ನಿರ್ವಹಣೆ

ರಾಜ್ಯದಲ್ಲಿ ಪ್ರತಿಯೊಂದು ಶಾಲೆಯನ್ನೂ ನಿರ್ವಹಿಸುವುದು ಆಯಾ ಶಿಕ್ಷಣ ಸಂಸ್ಥೆಗಳ ನಿರ್ವಹಣಾ ಸಮಿತಿ. ಈ ಸಮಿತಿಯಲ್ಲಿಯೂ ಬಹುಸಂಖ್ಯಾತರು ಚುನಾಯಿತ ಸದಸ್ಯರು. 13 ಸದಸ್ಯರ ಈ ಸಮಿತಿಯಲ್ಲಿ ಪೋಷಕರು, ಶಿಕ್ಷಕರು, ಪಂಚಾಯತ್‌ಗಳಿಂದ ಚುನಾಯಿತ ಪ್ರತಿನಿಧಿಗಳಿರುತ್ತಾರೆ.

ಕಾಲೇಜು ನಿರ್ವಹಣಾ ಸಮಿತಿಯಲ್ಲಿ ವಿದ್ಯಾರ್ಥಿಗಳಿಂದಲೂ ಚುನಾಯಿತ ಪ್ರಾತಿನಿಧ್ಯ ಇರುತ್ತದೆ. ಪ್ರಾಂಶುಪಾಲರು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಈ ಸಮಿತಿಯು ಶಿಕ್ಷಕರು - ಸಿಬ್ಬಂದಿಗಳ ರಜೆ ಮಂಜೂರಾತಿ ಸೇರಿದಂತೆ ವಿವಿಧ ಬಗೆಯ ಜವಾಬ್ದಾರಿಯನ್ನು ಸಮಿತಿ ನಿರ್ವಹಿಸುತ್ತದೆ. 12 ಜನರ ಈ ಕಾಲೇಜು ನಿರ್ವಹಣಾ ಸಮಿತಿಯಲ್ಲಿ ಉಪನ್ಯಾಸಕರಿಗೆ ನಾಲ್ಕು ಪೋಷಕರಿಗೆ ಮೂರು, ಪಂಚಾಯತ್‌ಗೆ ಒಂದು, ವಿದ್ಯಾರ್ಥಿ ಸಮುದಾಯಕ್ಕೆ ಒಂದು ಪ್ರಾತಿನಿಧ್ಯವಿರುತ್ತದೆ.

ನೇಮಕಾತಿ ಪ್ರಕ್ರಿಯೆ ಪಾರದರ್ಶಕ - ಭ್ರಷ್ಟಾಚಾರ ಮುಕ್ತ

ಶಿಕ್ಷಕರ ನೇಮಕಾತಿಯನ್ನು ಸಹ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕೌನ್ಸಿಲ್‌ಗಳೇ ನಡೆಸುತ್ತವೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಶಿಕ್ಷಕರಾಗಿ ಉದ್ಯೋಗ ಪಡೆದುಕೊಳ್ಳಬೇಕಾದರೆ ಉದ್ಯೋಗಾಕಾಂಕ್ಷಿಗಳು ಉದ್ಯೋಗ ವಿನಿಮಯ ಕಛೇರಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳುವುದು ಕಡ್ಡಾಯ. ಹೀಗೆ ಹೆಸರು ನೋಂದಾಯಿಸಿಕೊಳ್ಳದಿದ್ದರೆ ಉದ್ಯೋಗ ಪಡೆದುಕೊಳ್ಳುವುದು ಸಾಧ್ಯವೇ ಇಲ್ಲ.

ಖಾಲಿ ಹುದ್ದೆಗಳಿಗೆ ಭರ್ತಿ ಮಾಡುವಾಗ ಪ್ರತಿ ಒಂದು ಹುದ್ದೆಗೆ 20 ಉದ್ಯೋಗಾಕಾಂಕ್ಷಿಗಳ ಪಟ್ಟಿಯನ್ನು ಉದ್ಯೋಗ ವಿನಿಮಯ ಕಛೇರಿಯಿಂದ ಅರ್ಹತೆ - ಹಿರಿತನದ ಆಧಾರದಲ್ಲಿ ಪಡೆಯಲಾಗುತ್ತದೆ. ಇವರಿಗೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಲಂಚ - ಪ್ರಭಾವ - ಸ್ವಜನ ಪಕ್ಷಪಾತ ಮುಂತಾದ ಅಕ್ರಮಗಳಿಗೆ ಅವಕಾಶವಾಗದಂತೆ ಈ ಪರೀಕ್ಷೆಗಳಲ್ಲಿ ಮೌಖಿಕ ಪರೀಕ್ಷೆಯನ್ನು ರದ್ದು ಪಡಿಸಲಾಗಿದೆ. ಉಳಿದಂತೆ ಈ ವ್ಯವಸ್ಥೆಗಳೆಲ್ಲವೂ ಪಾರದರ್ಶಕವಾಗಿರು ತ್ತವೆ.

ಉದ್ಯೋಗ ವಿನಿಮಯ ಕಛೇರಿಯಿಂದ ತಲಾ ಒಂದು ಹುದ್ದೆಗೆ 20 ಅಭ್ಯರ್ಥಿಗಳ ಹೆಸರನ್ನು ಪಟ್ಟಿ ಮಾಡುವಾಗ ಸಹ ಭ್ರಷ್ಟಾಚಾರದ ಸಾಧ್ಯತೆಗಳಿಲ್ಲ. ಏಕೆಂದರೆ ಉದ್ಯೋಗ ವಿನಿಮಯ ಕಛೇರಿಯ ಈ ಆಯ್ಕೆ ಸಮಿತಿಯಲ್ಲಿಯೂ ಸಹ ಜಿಲ್ಲೆಯ ಶಾಸಕರ ನಡುವಿನಿಂದ ಚುನಾಯಿತರಾದ ಶಾಸಕ ಪ್ರತಿನಿಧಿಗಳಿರುತ್ತಾರೆ. ಜಿಲ್ಲಾ ಪಂಚಾಯಿತ್ತಿಯಿಂದಲೂ ಇದೇ ರೀತಿ ಚುನಾಯಿತ ಪ್ರತಿನಿಧಿಗಳಿರುತ್ತಾರೆ. ಜನರ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಉತ್ತರದಾಯಿತ್ವದ ಬದ್ಧತೆ ಇರುವ ಈ ಚುನಾಯಿತ ಪ್ರತಿನಿಧಿಗಳ ಪರಿಶೀಲನೆ ಹಾಗೂ ಪಾರದರ್ಶಕ ನೇಮಕಾತಿ ವ್ಯವಸ್ಥೆ ಕಟ್ಟುನಿಟ್ಟಿನ ನಿಯಮಗಳಿಂದಾಗಿ ಈ ಒಟ್ಟು ನೇಮಕಾತಿ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರಗಳು ನಡೆಯುತ್ತಿರುವ ಬಗೆಗೆ ಆರೋಪ - ಪ್ರತ್ಯಾರೋಪಗಳಾಗಲಿ ನಡೆಯುವಂತಹ ಪರಿಸ್ಥಿತಿಯನ್ನು ಸಹ ನಿವಾರಿಸುವುದು ಸಾಧ್ಯವಾಗಿದೆ. ■

ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರೇ ಆಳುವ ವರ್ಗ!

ಪಶ್ಚಿಮ ಬಂಗಾಳದಲ್ಲಿ ಆಳುವ ವರ್ಗ ಯಾರು ಎಂದರೆ, ಸಹಜವಾಗಿಯೇ 'ಬಂಡವಾಳಶಾಹಿ-ಭೂಮಾಲಕರೇ ಅಲ್ಲಿಯೂ ಆಳುವ ವರ್ಗ' ಎಂಬ ಉತ್ತರ ಬರಬಹುದು. ಆದರೆ ಪಶ್ಚಿಮ ಬಂಗಾಳದ ಆಳುವ ವರ್ಗ ಶಿಕ್ಷಕರು ಎಂಬ ಹಾಸ್ಯ ಚಟಾಕಿ ಹಾರಿಸಿದ ಕಾಂತಿ ಬಿಸ್ವಾಸ್ ಪಶ್ಚಿಮ ಬಂಗಾಳ ರಾಜ್ಯದ 'ಶಿಕ್ಷಕ ವರ್ಗ' ರಾಜಕೀಯ ವ್ಯವಸ್ಥೆಯಲ್ಲಿ ವಹಿಸುತ್ತಿರುವ ಪಾತ್ರದ ಕುರಿತು ನೀಡಿದ ಈ ಮಾಹಿತಿಯನ್ನು ನೋಡಿ. ಪಶ್ಚಿಮ ಬಂಗಾಳ ವಿಧಾನಸಭೆಯ 294 ಸದಸ್ಯರಲ್ಲಿ 74 ಜನರು ಶಿಕ್ಷಕ ಹಿನ್ನೆಲೆಯಿಂದ ಬಂದವರು. ಪ.ಬ.ದ. 42 ಜನ ಸಂಸದರಲ್ಲಿ 20 ಜನರು ಶಿಕ್ಷಕ ಹಿನ್ನೆಲೆಯಿಂದ ಬಂದವರು. ರಾಜ್ಯ ಮಂತ್ರಿ ಮಂಡಲದ 43 ಮಂತ್ರಿಗಳ ಪೈಕಿ 23 ಜನರು ಶಿಕ್ಷಕ ಹಿನ್ನೆಲೆಯಿಂದ ಬಂದವರು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ರಾಜ್ಯದಲ್ಲಿ ಚುನಾಯಿತರಾದ ಪ್ರತಿನಿಧಿಗಳಲ್ಲಿ ಮೂರನೇ ಒಂದರಷ್ಟು ಚುನಾಯಿತ ಪ್ರತಿನಿಧಿಗಳು ಹಾಲಿ ಶಿಕ್ಷಕರು ಅಥವಾ ಶಿಕ್ಷಕ ಹಿನ್ನೆಲೆಯಿಂದ ಬಂದವರು.

ಹಾಲಿ ಶಿಕ್ಷಕರು ಚುನಾಯಿತರಾಗುವುದು ಹೇಗೆ?

ಹೌದು, ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರು ತಮ್ಮ ಹುದ್ದೆಗೆ ರಾಜೀನಾಮೆ ನೀಡದೆಯೂ ಚುನಾವಣೆಗಳಲ್ಲಿ ಸ್ಪರ್ಧಿಸಿ ಸ್ಥಳೀಯ ಸಂಸ್ಥೆಗಳಿಗೆ - ವಿಧಾನಸಭೆ - ಲೋಕಸಭೆ ಚುನಾಯಿತರಾಗಬಹುದು. ಗೆದ್ದ ನಂತರವೂ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕೆಂದೇನಿಲ್ಲ. ತಮ್ಮ ನೌಕರಿಯಲ್ಲಿ ಮುಂದುವರಿಯಬಹುದು. ಶಾಸನ ಸಭೆ ಅಥವಾ ಸಂಬಂಧಿಸಿದ ಸಭೆಗಳಿಗೆ ಹಾಜರಾಗಲು ಇಂತಹ ಪ್ರತಿನಿಧಿಗಳಿಗೆ ಇಲಾಖೆಯಿಂದ ಅನುಮತಿ ದೊರೆಯುತ್ತದೆ. ಅಗತ್ಯವಿದ್ದಲ್ಲಿ ಸಂಬಂಧಿಸಿದ ಶಿಕ್ಷಣ ಸಂಸ್ಥೆಯಲ್ಲಿ ತಾತ್ಕಾಲಿಕ ಬದಲಿ ಶಿಕ್ಷಕರ ವ್ಯವಸ್ಥೆ ಮಾಡಲಾಗುತ್ತದೆ.

ಶಿಕ್ಷಕರು ಮಾತ್ರವೇ ಅಲ್ಲ.....

ಶಿಕ್ಷಕರು ಮಾತ್ರವೇ ಅಲ್ಲ ಸರಕಾರಿ ನೌಕರರಿಗೂ ಪಶ್ಚಿಮ ಬಂಗಾಳ ಸರ್ಕಾರ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವ ಕಾನೂನು ಬದ್ಧ ಹಕ್ಕುಗಳನ್ನು ನೀಡಿದೆ. ಅಲ್ಲಿ ಸರಕಾರಿ ನೌಕರರು ರಾಜಕೀಯ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ನಿರ್ಬಂಧ ಇಲ್ಲ. (ಚುನಾವಣೆಗೆ ನಿಲ್ಲಬೇಕಾದರೆ ರಾಜೀನಾಮೆ ಅಗತ್ಯ).

ದೇಶದ ಇತರ ರಾಜ್ಯಗಳಲ್ಲಿ ಪೊಲೀಸರು ತಮ್ಮದೇ ಆದ ಸಂಘಗಳನ್ನು ರಚಿಸಿಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಆದರೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಪೊಲೀಸರು ಸಹ ಕಾನೂನು ಬದ್ಧವಾಗಿ ತಮ್ಮದೇ ಆದ ಸಂಘಟನೆ ರಚಿಸಿಕೊಳ್ಳಲು ಅವಕಾಶ ಇದೆ. ರಚಿಸಿಕೊಂಡಿದ್ದಾರೆ.

ಇರಾನ್ ವಿರುದ್ಧ ಮತ - ಸ್ವತಂತ್ರ ವಿದೇಶ ನೀತಿಗೆ ತಿಲಾಂಜಲಿ

ಶರತ್‌ಚಂದ್ರ

ಇರಾಕ್‌ನ ವಿರುದ್ಧ ನರಮೇಧದ ಮಾರಕಾಸ್ತ್ರಗಳ ಆರೋಪ ಬಳಸಿ, ಮಿಲಿಟರಿ ಅತಿಕ್ರಮಣ ನಡೆಸಿದ ಹಾದಿಯಲ್ಲಿ ಅಮೆರಿಕ ಇರಾನ್ ಮೇಲೆ ಅಪಪ್ರಚಾರ ಆರಂಭಿಸಿದೆ. ಇದರ ಭಾಗವಾಗಿ ಇರಾನ್‌ನ ಅಣುಶಕ್ತಿ ಕಾರ್ಯಕ್ರಮ ಮಿಲಿಟರಿ ಉದ್ದೇಶ ಹೊಂದಿದೆ, ಅದನ್ನು ಭದ್ರತಾ ಸಮಿತಿಯ ಪರಿಶೀಲನೆಗೆ ಒಳಪಡಿಸಬೇಕು - ಎಂಬ ನಿರ್ಣಯವನ್ನು IAEA ಬೋರ್ಡ್ ಮುಂದೆ ತಂದಿತು. ಬೋರ್ಡ್‌ನಲ್ಲಿರುವ ಎಲ್ಲಾ ಪ್ರಮುಖ ಮೂರನೇ ಜಗತ್ತಿನ ದೇಶಗಳು - ಬ್ರೆಜಿಲ್, ದಕ್ಷಿಣ ಆಫ್ರಿಕಾ, ಮೆಕ್ಸಿಕೋ, ನೈಜೀರಿಯಾ, ಅಲ್ಜೀರಿಯಾ ಈ ನಿರ್ಣಯದ ಮತದಾನದಲ್ಲಿ ಭಾಗವಹಿಸಲಿಲ್ಲ, ಭಾರತ ಮಾತ್ರ ಅಮೆರಿಕ ಮತ್ತು ಅದರ ಯುರೋಪಿಯನ್ ಮತ್ತಿತರ ಬಾಲಬಡುಕರೊಂದಿಗೆ ನಿರ್ಣಯದ ಪರವಾಗಿ ಮತದಾನ ಮಾಡಲು ನಿರ್ಧರಿಸಿತು. ಪಾಕಿಸ್ತಾನ ಮತ್ತು ಶ್ರೀಲಂಕಾ ಸಹ ನಿರ್ಣಯಕ್ಕೆ ಬೆಂಬಲ ನೀಡಲಿಲ್ಲ.

IAEA ಬೋರ್ಡ್‌ನ ಮತದಾನದ ಮೊದಲು ಭಾರತ ಈ ಬಗ್ಗೆ ತಳೆದ ಸ್ವತಂತ್ರ ನೀತಿಯನ್ನು ಕೊನೆಗಳಿಗೆಯು ಅಮೆರಿಕದ ಕೈ-ತಿರುಚುವ ಒತ್ತಡದಿಂದ ಕೈಬಿಡಲಾಗಿದೆ. ಘೋಷಿತ ನಿಲುವನ್ನು ಕೊನೆಗಳಿಗೆಯಲ್ಲಿ ಬದಲಾಯಿಸಿದ್ದು, ಭಾರತದ ಪ್ರತಿಷ್ಠೆಗೆ ಭಂಗ ತಂದಿದೆ. ಮೂರನೇ ಜಗತ್ತಿನ ದೇಶಗಳ ಐಕ್ಯತೆಯ ಪ್ರತೀಕವಾಗಿದ್ದ ಭಾರತ ತಾನೇ ಅದನ್ನು ಮುರಿದಂತಾಗಿದೆ.

ಭಾರತದ 'ತಿಪ್ಪರಲಾಗ'

ಇದು ಅಮೆರಿಕದ ಒತ್ತಡದ ಫಲ ಎಂಬುದು ಸ್ಪಷ್ಟ. ಭಾರತ ಸರ್ಕಾರದ ವಿದೇಶಾಂಗ ನೀತಿಗೆ ತಿಲಾಂಜಲಿ ನೀಡುವ ಈ ನೀತಿಯ ಬೀಜ ಜುಲೈನಲ್ಲಿ ಪ್ರಧಾನಿ ಭೇಟಿಯ ಸಮಯದಲ್ಲಿ ಆದ ಅಣುಶಕ್ತಿ - ಒಪ್ಪಂದದಲ್ಲಿದೆ. ಇರಾನ್ ವಿಷಯದ ಬಗ್ಗೆ ಸ್ವತಂತ್ರ ನೀತಿ ಅನುಸರಿಸುವ ನಾಟಕ ಆಡಿದ ಭಾರತ ಸರ್ಕಾರ ತನ್ನ ದಾರಿಗೆ ಬರುವಂತೆ, ಪ್ರಧಾನಿ ಇತ್ತೀಚಿನ ವಿಶ್ವಸಂಸ್ಥೆ ಭೇಟಿ ಸಮಯದಲ್ಲಿ ಒತ್ತಡ ಹಾಕಲಾಯಿತು. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಸಾರ್ವಜನಿಕವಾಗಿಯೇ ಭಾರತಕ್ಕೆ ಬೆದರಿಕೆ ಹಾಕಿದರು. ಇರಾನ್ ನಿರ್ಣಯ ವಿರುದ್ಧ ಭಾರತ ಮತದಾನ ಮಾಡಿದರೆ, ಅಣುಶಕ್ತಿ-ಒಪ್ಪಂದವನ್ನು ಅಮೆರಿಕದ ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸುವುದು ಅಸಾಧ್ಯವಾಗುತ್ತದೆ, ಆ ಒಪ್ಪಂದವನ್ನು ಜಾರಿ ಮಾಡಲು ಸಾಧ್ಯವಿಲ್ಲ ಎಂಬ ಬೆದರಿಕೆ ಹಾಕಲಾಯಿತು.

IAEA ಅಮೆರಿಕ ಮತ್ತು ಅದರ ಬಾಲಬಡುಕ ದೇಶಗಳು ಮುಂದಿಟ್ಟ ನಿರ್ಣಯ ಎಲ್ಲಾ ಅಂಶಗಳಲ್ಲಿ ಭಾರತದ ಸ್ವತಂತ್ರ ಅಣುಶಕ್ತಿ ನೀತಿಗೆ ವಿರುದ್ಧವಾದದ್ದು. ಎಲ್ಲಾ ದೇಶಗಳಿಗೂ ಅಣುಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಬಳಸಲು ಹಕ್ಕು ಇದೆ. ಇರಾನ್ ಯುರೇನಿಯಂ ಸಂಸ್ಕರಣ ನಿಲ್ಲಿಸಿ, ಅದನ್ನು ಭಾರ ಜಲ ಬಳಸುವ ಸಂಶೋಧನಾ ರಿಯಾಕ್ಟರ್‌ನಲ್ಲಿ ಬಳಸುವುದಕ್ಕೆ ತಡೆ ಹಾಕಲು ನಿರ್ಣಯ ಉದ್ದೇಶಿಸಿದೆ. ಇರಾನ್ NPT (ಅಣ್ವಸ್ತ್ರ - ಪ್ರಸರಣಾ ಒಪ್ಪಂದದ) ಗೆ ಸಹಿ ಹಾಕಿದ್ದು, ಅದಕ್ಕೆ ಈ ಬಗ್ಗೆ ಎಲ್ಲಾ ಹಕ್ಕು ಇದೆ. ಭಾರತ NPT ಗೆ ಸಹಿ ಹಾಕದಿದ್ದರೂ, ಇಂತಹ ಹಕ್ಕು ಸಾಧಿಸುತ್ತಿದೆ ಎಂದು ಇಲ್ಲಿ ಗಮನಿಸಬಹುದು. ಭಾರತಕ್ಕೊಂದು ನೀತಿ, ಇರಾನ್‌ಗೊಂದು ನೀತಿ ಯಾವ ರೀತಿ ಸಮರ್ಥನೀಯ?.

ಅಣುಶಕ್ತಿ ಯೋಜನೆಗಳ ಬಗೆಗಿನ ನಿರ್ಧಾರ IAEA ಒಳಗೆ ತೆಗೆದುಕೊಳ್ಳಬೇಕು. ಅದನ್ನು ಭದ್ರತಾ ಸಮಿತಿಗೆ ಒಯ್ಯುವ ಅಗತ್ಯ ಇಲ್ಲ - ಎಂಬುದೂ ಭಾರತದ ನೀತಿಯಾಗಿತ್ತು. ಈ ಬಗ್ಗೆ ಯಾವುದೇ ನಿರ್ಧಾರವನ್ನು IAEA ಒಳಗೆ ಪೂರ್ಣ ಸಮ್ಮತದೊಂದಿಗೆ ತೆಗೆದುಕೊಳ್ಳಬೇಕು ಎಂಬುದು ಭಾರತದ ನೀತಿಯಾಗಿತ್ತು, ಇವೆಲ್ಲವನ್ನು IAEA ಬೋರ್ಡ್‌ನ ಸಭೆಯ ಮೂರು ವಾರಗಳ ಮೊದಲು, ಭಾರತದ ವಿದೇಶ ಸಚಿವ ಇರಾನ್ ಭೇಟಿಯ ಸಮಯದಲ್ಲಿ ಹೇಳಿದ್ದರು. ಬೋರ್ಡ್ ಸಭೆಯ ಮೂರು ದಿನಗಳ ಮೊದಲು ವಿದೇಶ ಸಚಿವ ಇದನ್ನು ಪುನರುಚ್ಛರಿಸಿದರು.

ಇತ್ತೀಚೆಗೆ IAEA (ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ)ದಲ್ಲಿ ಇರಾನ್‌ನ ವಿರುದ್ಧ ಮತದಾನದೊಂದಿಗೆ, ಯುಪಿಎ ಸರ್ಕಾರ ಬಿಜೆಪಿಯ ಅಮೆರಿಕದ 'ಜೂನಿಯರ್ ಪಾರ್ಟನರ್' ಆಗುವ ವಿದೇಶಿ ನೀತಿ ಮುಂದುವರೆಸಲಿದೆ ಎಂಬುದು ಸ್ಪಷ್ಟವಾಗಿದೆ. ಯುಪಿಎ ತನ್ನ ಕಾರ್ಯಕ್ರಮದಲ್ಲಿ ಸ್ವತಂತ್ರ ವಿದೇಶ ನೀತಿ ಅನುಸರಿಸುವ ಭರವಸೆಗೆ ತಿಲಾಂಜಲಿ ನೀಡಿದೆ.

ಯುಪಿಎ 'ಸಮಜಾಯಿಷಿ' ಹಾಸ್ಯಾಸ್ಪದ


IAEA ಬೋರ್ಡ್‌ನ ಸಭೆಯಲ್ಲಿ ಭಾರತದ ತಿಪ್ಪರಲಾಗವನ್ನು ಎಡಪಕ್ಷಗಳು ಮಾತ್ರವಲ್ಲ, ಹಲವಾರು ಸ್ವತಂತ್ರ ರಾಜಕೀಯ ವೀಕ್ಷಕರು, ಗಣ್ಯರು, ತೀವ್ರವಾಗಿ ವಿರೋಧಿಸಿದ್ದಾರೆ. ಮೂರನೇ ಜಗತ್ತಿನ ದೇಶಗಳ ಬಣದಲ್ಲೂ ತೀವ್ರ ನಿರಾಶೆ, ಆಶ್ಚರ್ಯ, ಆತಂಕ ವ್ಯಕ್ತವಾಗಿದೆ. ಭಾರತ ಸರ್ಕಾರ ತನ್ನ ನಿರ್ಣಯವನ್ನು ಸಮರ್ಥಿಸಿಕೊಳ್ಳುವ ಎಲ್ಲಾ ಪ್ರಯತ್ನಗಳು ಶೋಚನೀಯ ಮತ್ತು ಹಾಸ್ಯಾಸ್ಪದವಾಗಿದೆ. ನಿರ್ಣಯದಲ್ಲಿ ಇರಾನ್‌ಗೆ ಸಮಸ್ಯೆ ಬಗೆಹರಿಸಲು ಒತ್ತಾಯಿಸಿ ಇನ್ನಷ್ಟು ಸಮಯ ಕೊಡಲಾಗಿದೆ ಎಂಬುದು ಸರ್ಕಾರದ ಅಂಬೋಣ. ಆದರೆ ಈ ಸಮಯ ಕೆಲವೇ ವಾರಗಳ ಸಮಯ. ಆ ಸಮಯದಲ್ಲಿ ಇರಾನ್‌ಗೆ ಆಯ್ಕೆ ಇರುವುದು ಅಮೆರಿಕ ಮತ್ತು ಬಾಲಬಡುಕ ದೇಶಗಳ ಒತ್ತಾಯಕ್ಕೆ ಮಣಿಯುವುದು. ನವೆಂಬರ್ ತಿಂಗಳಲ್ಲಿ ನಡೆಯುವ IAEA ಬೋರ್ಡ್‌ನ ಸಭೆಯವರೆಗೆ ಮಾತ್ರ ಈ ಗಡುವು. ಎರಡನೆಯ ನಿರ್ಣಯ ಇನ್ನೂ ಭದ್ರತಾ ಸಮಿತಿಗೆ ಇರಾನ್ ವಿಷಯವನ್ನು ಇನ್ನೂ ಒಪ್ಪಿಸಿಲ್ಲ. ಇದೂ ನವೆಂಬರ್ IAEA ಬೋರ್ಡ್ ಸಭೆಯವರೆಗೆ ಮಾತ್ರ. ನವೆಂಬರ್ ಬೋರ್ಡ್ ಸಭೆಯಲ್ಲಿ ಭಾರತ ಬೆಂಬಲಿಸಿದರೆ ಅಮೆರಿಕ ಅದರ ಉದ್ದೇಶ ಪೂರ್ಣ ಈಡೇರಿಸುವ ನಿರ್ಣಯ ಮಂಡಿಸುತ್ತದೆ ಎಂಬದು ಸ್ಪಷ್ಟ.

ಇರಾನ್ ಈಗಾಗಲೇ IAEA ಒಪ್ಪಂದದ ಕಲಮು XIIC ನ್ನು 'ಉಲ್ಲಂಘಿಸಿದೆ' ಎಂಬುದನ್ನು ಭಾರತ ಒಪ್ಪಿಲ್ಲ. ಇರಾನ್ ಈಗಿನ ಅಣುಶಕ್ತಿ ಕಾರ್ಯಕ್ರಮ 'ಅಂತರ್ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಬೆದರಿಕೆ' ಎಂಬುದನ್ನು ಭಾರತ ಒಪ್ಪಿಲ್ಲ. ಇದು ಭಾರತ ಸರ್ಕಾರದ ಸಮಜಾಯಿಷಿ. ಅಮೆರಿಕ ಮತ್ತು ಇತರ ನಿರ್ಣಯದ ಬೆಂಬಲಿಗರ ನಿಲುವು ಇವೆರೆಡೂ ನಿಜ (ಇರಾನ್ IAEA ಒಪ್ಪಂದ ಉಲ್ಲಂಘಿಸಿದೆ ಮತ್ತು ಅದರ ಅಣುಶಕ್ತಿ ಕಾರ್ಯಕ್ರಮ 'ಬೆದರಿಕೆ' ಅಂತ) ಎಂಬುದೇ. ಭಾರತ ಇವೆರಡನ್ನು ಒಪ್ಪದಿದ್ದರೆ ನಿರ್ಣಯದ ಪರ ಮತ ನೀಡುವ ಪ್ರಶ್ನೆಯೇ ಬರುವುದಿಲ್ಲ. ನಿರ್ಣಯ ಪರ ಮತ ನೀಡಿದ ಮೇಲೆ, ಅವರ ಮುಖ್ಯ ಎರಡು ಅಂಶಗಳನ್ನು ಭಾರತ ಒಪ್ಪುವುದಿಲ್ಲ ಎಂಬುದು ಹಾಸ್ಯಾಸ್ಪದ.

ಭಾರತದ ಹಿತಾಸಕ್ತಿಗೆ ವಿರೋಧ

ಭಾರತದ ಈ ನೀತಿ - ಸ್ವತಂತ್ರ ವಿದೇಶ ನೀತಿಗೆ ತಿಲಾಂಜಲಿ, ಮೂರನೇ ಜಗತ್ತಿನ ದೇಶಗಳ ಐಕ್ಯತೆ ಮುರಿಯುವ ದೃಷ್ಟಿಯೂ ಮಾತ್ರ ತಮ್ಮ ನೀತಿ ಅಲ್ಲ. ಭಾರತದ ಅಣು ನೀತಿಯ ಮೇಲೆ ಇದೇ ರೀತಿಯ ನೀತಿಯನ್ನು ಅನ್ವಯಿಸಬಹುದು - ಎಂದು ಯುಪಿಎ ಸರ್ಕಾರ ಮರೆತಂತಿದೆ. ಜುಲೈನಲ್ಲಿ ಭಾರತ-ಅಮೆರಿಕ ಅಣುಶಕ್ತಿ ಕಾರ್ಯಕ್ರಮ ಒಪ್ಪಂದ - ಭಾರತಕ್ಕೆ ಇಂತಹ ಕ್ರಮದ ವಿರುದ್ಧ ರಕ್ಷಣೆ ನೀಡುತ್ತದೆ ಎಂಬುದು ಯುಪಿಎ ಸರ್ಕಾರದ ಧೋರಣೆ. ಅಮೆರಿಕದ ಎರಡೆಳೆ - ನಾಲಿಗೆ ನೀತಿ ಪರಿಚಯವಿದ್ದವರಿಗೆ ಇದು ಎಷ್ಟು ಹುಸಿ ಧೋರಣೆ ಎಂದು ಗೊತ್ತಿದೆ. ಸಾಲದ್ದಕ್ಕೆ ಈ ಒಪ್ಪಂದದ ಬಗ್ಗೆ ಅಮೆರಿಕ ಇನ್ನಷ್ಟು ಹೆಚ್ಚಿನ ಒತ್ತಾಯಗಳನ್ನು ತರುತ್ತಿದೆ. ಭಾರತ ಮಿಲಿಟರಿ ಮತ್ತು ಶಾಂತಿಯುತ ಯೋಜನೆಗಳನ್ನು ಪ್ರತ್ಯೇಕಿಸಿ IAEA ನಿರ್ಬಂಧಕ್ಕೆ ಒಳಪಡಿಸಬೇಕೆಂದು ಒತ್ತಾಯಿಸ ಲಾರಂಭಿಸಿದೆ. ಈ ಒಪ್ಪಂದವನ್ನು ಅಮೆರಿಕದ ಪಾರ್ಲಿಮೆಂಟು ಇನ್ನೂ ಅನುಮೋದಿಸಿಲ್ಲ.

ಭಾರತದ ನೀತಿ 'ಅಣುಶಕ್ತಿ ಕ್ಲಬ್' ಸದಸ್ಯರಾಗುವ ಮಹತ್ವಾಕಾಂಕ್ಷೆಯ ಭಾಗ. ಅಣುಶಕ್ತಿ ಕ್ಲಬ್ ಸದಸ್ಯರಿಗೆ ಬೇರೆ ನಿಯಮಗಳು, ಇತರರಿಗೆ ಬೇರೆ ನಿಯಮಗಳು - ಎಂಬ ಅಣುಶಕ್ತಿ ದೇಶಗಳ ನೀತಿಯನ್ನು ಅನುಸರಿಸುತ್ತಿದೆ. ಈ ನೀತಿಯನ್ನು ದಶಕಗಳ ಕಾಲ ಭಾರತ ವಿರೋಧಿಸುತ್ತಾ ಬಂದಿತ್ತು. ಈಗ ಅದನ್ನೇ ಅಂಗೀಕರಿಸಬೇಕು. ಇದು ಬಿಜೆಪಿ ಸರ್ಕಾರದ ಅಣುಅಸ್ತ್ರ ತಯಾರಿಸಲು ತೆಗೆದುಕೊಂಡ ನಿರ್ಣಯದ ವಿಷಫಲ ಎಂಬುದು ಹೇಳಬೇಕಾಗಿಲ್ಲ.



ಇರಾನ್‌ಗೆ 'ವಿಶ್ವಾಸಘಾತ'

ಇದಲ್ಲದೆ 'ಇರಾನ್ ಪ್ರಮಾದ'ಕ್ಕೆ ಇನ್ನೊಂದು ಆಯಾಮ ಇದೆ. ಭಾರತದ ಈ ಕ್ರಮ ದಶಕಗಳ ಕಾಲ ಇರಾನ್ ಜತೆ ಇದ್ದ ಉತ್ತಮ ಸಂಬಂಧಗಳನ್ನು ಬಿಗಡಾಯಿಸುತ್ತದೆ. ಇರಾನ್‌ಗೆ ಮಾಡಿದ ಸ್ಪಷ್ಟ 'ವಿಶ್ವಾಸಘಾತ'. ಸುಮಾರು ಹತ್ತು ವರ್ಷಗಳ ಹಿಂದೆ ಭಾರತ ಇಂತಹುದೇ ರೀತಿ ಅಂತರ್ರಾಷ್ಟ್ರೀಯವಾಗಿ ಬಿಕ್ಕಟ್ಟಿಗೆ ಸಿಕ್ಕಿದಾಗ ಇರಾನ್ ಭಾರತವನ್ನು ರಕ್ಷಿಸಿತ್ತು. ಇದನ್ನು ಯುಪಿಎ ಸರ್ಕಾರ ಪೂರ್ಣವಾಗಿ ಮರೆತು ಬಿಟ್ಟಂತಿತ್ತು. ಇದನ್ನು ಭಾರತದ ಹಲವು ವಿದೇಶಾಂಗ ಇಲಾಖೆಯ ಅಧಿಕಾರಿಗಳು ತೋರಿಸಿದ್ದಾರೆ. ಏಪ್ರಿಲ್ 1994 ರಲ್ಲಿ OIC (ಇಸ್ಲಾಮಿಕ್ ದೇಶಗಳ ಸಂಘಟನೆ) ಸಭೆಯಲ್ಲಿ ಪಾಕಿಸ್ತಾನ ನಿರ್ಣಯವನ್ನು ಮಂಡಿಸಿತ್ತು. ಭಾರತ ಕಾಶ್ಮೀರದಲ್ಲಿ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆ ನಡೆಸಿದೆ. ಇದನ್ನು OIC ಖಂಡಿಸಬೇಕು. ಮಾತ್ರವಲ್ಲ ಭಾರತವನ್ನು ಈ ಬಗ್ಗೆ ಖಂಡಿಸುವ ನಿರ್ಣಯವನ್ನು ವಿಶ್ವಸಂಸ್ಥೆ ಮಾನವ ಹಕ್ಕು ಆಯೋಗದ ಸಭೆಯಲ್ಲಿ ಮಂಡಿಸಬೇಕು. ಭಾರತದ ವಿರುದ್ಧ ಆಯೋಗ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು. ಇದು ಭಾರತಕ್ಕೆ ತೀವ್ರ ಅಪಾಯ ಒಡ್ಡುವ ಸಂಭವವಿತ್ತು. ಅಧ್ಯಕ್ಷರಿಗೆ ವಿದೇಶ ಸಚಿವ ದಿನೇಶ್ ಸಿಂಗ್ ಮೂಲಕ ಪತ್ರ ಕಳಿಸಿದ್ದರು. ಭಾರತದ ಸಹಾಯಕ್ಕೆ ಮೊರೆಗೆ ಓಗೊಟ್ಟು, ಇರಾನ್ OIC ನಲ್ಲೇ, ಈ ನಿರ್ಣಯವನ್ನು ಮಂಜೂರಾಗು ವಂತೆ ಮಾಡಿ, ಭಾರತವನ್ನು ತೀವ್ರ ಅಂತರ್ರಾಷ್ಟ್ರೀಯ ಬಿಕ್ಕಟ್ಟಿನಿಂದ ರಕ್ಷಿಸಿತ್ತು. IAEA ನಲ್ಲಿ ಇರಾನ್ ವಿರುದ್ಧ ಭಾರತದ ಮತದಾನದ ನಂತರ, ಇರಾನ್‌ನ ವಕ್ತಾರರು ಇದನ್ನು ನೆನಪಿಸಿದ್ದರು ಎಂಬುದು ಗಮನಾರ್ಹ.

ಇದಲ್ಲದೆ ಭಾರತದ ಈ 'ಪ್ರಮಾದ' ಇರಾಕ್-ಪಾಕಿಸ್ತಾನ-ಭಾರತ ಪೈಪ್‌ಲೈನ್‌ನ ಪ್ರಾಜೆಕ್ಟ್‌ಗೂ ತೀವ್ರಭಂಗ ತರುವ ಸಾಧ್ಯತೆ ಇದೆ. ಈ ಪ್ರಾಜೆಕ್ಟ್ ಭಾರತದ ಶಕ್ತಿ-ಭದ್ರತೆ, ಬೆಳವಣಿಗೆ, ಸ್ವತಂತ್ರ ನೀತಿಯ ದೃಷ್ಟಿಯ ಭಾರತದ ಹಿತಾಸಕ್ತಿಗೆ ಅಯಕಟ್ಟಿನ ಮಹತ್ವ ಉಳ್ಳದ್ದು. ಈ ಪ್ರಾಜೆಕ್ಟನ್ನು ಅಮೆರಿಕ ತೀವ್ರವಾಗಿ ವಿರೋಧಿಸುತ್ತಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಪ್ರಾಜೆಕ್ಟ್‌ನಿಂದ ಹಿಂತೆಗೆಯಲು ಭಾರತದ ಮೇಲೆ ಒತ್ತಡ ಹೇರುತ್ತಿದೆ. IAEA ಬೋರ್ಡ್‌ನ ನಿರ್ಣಯದ ಬಗ್ಗೆ ಮತದಾನ ವಿಷಯದಲ್ಲಿದ್ದಂತೆ, ಯುಪಿಎ ಸರ್ಕಾರ ಪುನಃ ಒತ್ತಡಕ್ಕೆ ಮಣಿಯುವುದಿಲ್ಲ ಎಂಬ ಯಾವ ಗ್ಯಾರಂಟಿಯೂ ಇಲ್ಲ.

ಭಾರತದ ಹಿತಾಸಕ್ತಿಗೆ ವಿರುದ್ಧವಾದ 'ಇರಾನ್ ನಿರ್ಣಯ' ಪರ ಮತದಾನದ ತಪ್ಪನ್ನು ಯುಪಿಎ ತಿದ್ದಿಕೊಳ್ಳಬೇಕು. ಮುಂಬರುವ ನವೆಂಬರ್ IAEA ಬೋರ್ಡ್ ಸಭೆಯಲ್ಲಿ ಭಾರತ ತನ್ನ ಮೂಲ ಸ್ವತಂತ್ರ ನೀತಿ ಎತ್ತಿ ಹಿಡಿದು, ಅಮೆರಿಕದ ಹುನ್ನಾರವನ್ನು ಎದುರಿಸಬೇಕು. NPT-IAEA ಸಂಬಂಧಗಳ ಅನುಸಾರವಾಗಿ ಯಾವುದೇ ದೇಶ ತನ್ನ ಅಣು ಕಾರ್ಯಕ್ರಮ ನಡೆಸುವ ಸಾರ್ವಭೌಮ ಹಕ್ಕನ್ನು ಬೆಂಬಲಿಸಬೇಕು. ಇತರ ಮೂರನೇ ಜಗತ್ತಿನ ದೇಶಗಳ ಜತೆ ಐಕ್ಯ ನೀತಿ ಅನುಸರಿಸಬೇಕು. ಈ ಬಗ್ಗೆ ತೀವ್ರ ಒತ್ತಾಯ ಹೇರಲು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಮುಂದಾಗಬೇಕು.

ಫ್ರಾನ್ಸ್‌ನಲ್ಲಿ ಮಹಾ ಮುಷ್ಕರ

ಅಕ್ಟೋಬರ್ 4ರಂದು ಫ್ರಾನ್ಸ್ ಕಳೆದ ಮೂವತ್ತು ವರ್ಷಗಳಲ್ಲೇ ಅತಿದೊಡ್ಡ ಪ್ರತಿಭಟನಾ ಮಹಾಮುಷ್ಕರ ಕಂಡಿತು. ಎಲ್ಲಾ ಏಳು ಟ್ರೇಡ್ ಯೂನಿಯನ್ ಕೇಂದ್ರಗಳು ಮತ್ತು ಎಲ್ಲಾ ಎಡಪಕ್ಷಗಳು ಭಾಗವಹಿಸಿದ್ದ ಈ ಮುಷ್ಕರದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು. ಸಂಘಟಿತ ಟ್ರೇಡ್ ಯೂನಿಯನ್ ಕಡಿಮೆ ಇರುವ ಖಾಸಗಿ ಕ್ಷೇತ್ರದಲ್ಲೂ ಕಾರ್ಮಿಕರು ಗಮನಾರ್ಹ ಪ್ರಮಾಣದಲ್ಲಿ ಮುಷ್ಕರದಲ್ಲಿ ಭಾಗವಹಿಸಿದ್ದರು. ಮಹಾಮುಷ್ಕರ ಚಿರಾಕ್ ಸರ್ಕಾರ -ಬಲಪಂಥೀಯ ಸಾಮಾಜಿಕ-ಆರ್ಥಿಕ ನೀತಿಗಳು, ಕಾರ್ಮಿಕ ವಿರೋಧಿ ಕ್ರಮಗಳನ್ನು ಪ್ರತಿಭಟಿಸಿ, ಅವನ್ನು ಮುಂದುವರೆಸದಂತೆ ತೀವ್ರ ಎಚ್ಚರಿಕೆ ನೀಡಿದೆ. ಸಂಬಳ ಮತ್ತು ಪೆನ್ಷನ್ ಕಡಿತ, ಕಾರ್ಮಿಕರನ್ನು ಮನೆಗೆ ಕಳುಸುವುದು ಸುಲಭ ಮಾಡುವ ಹೊಸ ಕಾನೂನು, ನಿರುದ್ಯೋಗ ಭತ್ಯೆಯಲ್ಲಿ ತೀವ್ರ ಕಡಿತ - ಬಗ್ಗೆ ಮಹಾಮುಷ್ಕರ ತೀವ್ರವಾಗಿ ಪ್ರತಿಭಟಿಸಿತು. ಇವಲ್ಲದೆ - ಮನೆಮಾರಿನ ಬಿಕ್ಕಟ್ಟು, ವಲಸೆಗಾರ ಅಲ್ಪಸಂಖ್ಯಾತರ ದಮನ, ಸಾಮಾಜಿಕ ಪ್ರತಿಭಟನೆಯ ದಮನ - ವಿಷಯಗಳನ್ನು ಮಹಾಮುಷ್ಕರ ಮುಂದೆ ಮಾಡಿತ್ತು.

ಮಹಾಮುಷ್ಕರ ಅಲ್ಲದೆ 150 ಪ್ರಮುಖ ಪಟ್ಟಣಗಳಲ್ಲಿ ಭಾರಿ ಪ್ರತಿಭಟನಾ ಪ್ರದರ್ಶನಗಳು ನಡೆದವು. ಮಹಾಮುಷ್ಕರ ಆಳುವ ವಲಯದಲ್ಲಿ ತೀವ್ರ ಆತಂಕ, ಭಯ ಉಂಟು ಮಾಡಿದವು. ಆಳುವ ಸರ್ಕಾರದ ಪಕ್ಷಗಳ ನಡುವೆ ತೀವ್ರ ಭಿನ್ನಾಭಿಪ್ರಾಯ, ತಿಕ್ಕಾಟ ಇದನ್ನು ಬಯಲು ಮಾಡಿದವು.

ಕೋಮುವಾದ-ಜಾತಿವಾದ-ಅಸಮಾನ ಮೌಲ್ಯಗಳ ವಿರುದ್ಧ ಸೆಣಸಲು - ಪ್ರಗತಿಪರ, ಮಾನವೀಯ ಮೌಲ್ಯಗಳ ಪರ ಶ್ರಮಿಸಲು ಗುಲ್ಬರ್ಗಾದಲ್ಲಿ 'ಸೌಹಾರ್ದ ಚಿಂತನ ವೇದಿಕೆ' ರಚನೆಯಾಗಿದೆ. ಇತ್ತೀಚೆಗೆ 'ಸಾಮರಸ್ಯ ಬದುಕಿಗಾಗಿ' ಈ ವೇದಿಕೆ ಸಂಘಟಿಸಿದ್ದ ಯಶಸ್ವಿ ವಿಚಾರಸಂಕಿರಣ ಜನರ ಗಮನ ಸೆಳೆದಿದೆ. ಆ ಕುರಿತು ಒಂದು ವರದಿ.

“ಸಮತೆ ಎಂಬುದೇ ಯೋಗ ನೋಡಾ”

“ಸಮತೆ ಎಂಬುದೇ ಯೋಗ ನೋಡಾ” 12ನೇ ಶತಮಾನದ ವಚನಕಾರರೊಬ್ಬರ ಈ ಅನುಭಾವ ವಾಣಿಯನ್ನು ಸಾಕಾರಗೊಳಿಸಲೆಂದು ಗುಲ್ಬರ್ಗಾದಲ್ಲಿ 'ಸೌಹಾರ್ದ ಚಿಂತನ ವೇದಿಕೆ' ಎಂಬ ಹೊಸ ಸಂಘಟನೆ ಕಟ್ಟಿಕೊಳ್ಳಲಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶವೂ ಯಾವತ್ತೂ ಧರ್ಮಸಮನ್ವಯದ ನೆಲೆವನೆಯಾಗಿದೆ. ಇಲ್ಲಿ ಶರಣ, ಸಂತ, ಅವಧೂತ, ದಾಸ, ಸೂಫಿ, ಶಾಕ್ತ, ಸಿದ್ಧ, ನಾಥ, ಆರೂಢ, ಹೀಗಾ ಹತ್ತಾರು ಪರಂಪರೆಗಳು ಒಗ್ಗೂಡಿಕೊಂಡು ಬೆಳೆದಿವೆ. ಇವುಗಳೊಳಗೆ ಅನೇಕ ಸೈದ್ಧಾಂತಿಕ ವೈರುಧ್ಯಗಳಿದ್ದರೂ 'ಬದುಕು' ಕುರಿತು ಪ್ರಶ್ನೆ ಬಂದಾಗ ಅವರೆಲ್ಲ ಪರಸ್ಪರ ಸಹ್ಯವಾಗಿ ಬಾಳುವುದನ್ನು ರೂಢಿಸಿಕೊಂಡು ಬಂದಿದ್ದಾರೆ. ಅಂತೆಯೇ ಅವರು ಭಾರತಕ್ಕೆ ಮಾದರಿಯಾಗಿದ್ದಾರೆ. ಹೀಗಿರುವಾಗಲೂ ಕೋಮುವಾದಿ ಶಕ್ತಿಗಳು ಇತ್ತೀಚೆಗೆ ಈ ಭಾಗದಲ್ಲಿ ಧರ್ಮದ್ವೇಷದ ಬೀಜ ಬಿತ್ತಲೂ ಹವಣಿಸುತ್ತಿದ್ದಾರೆ. ಸಂಘ ಪರಿವಾರಿಗಳು ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಈ ಭಾಗದಲ್ಲಿ ಅಡ್ಡೆ ಹಾಕಲು ಪ್ರಯತ್ನ ಪಡುತ್ತಿದ್ದಾರೆ.

ಈ ವೇದಿಕೆಯು ವತಿಯಿಂದ ಸಂಘ ಪರಿವಾರಿಗಳ ಹುಸಿ ದೇಶಭಕ್ತಿಯ ಬಣ್ಣ ಬಯಲು ಮಾಡಲೆಂದೇ ದಿನಾಂಕ 21.10.2005 ರಂದು 'ಸಾಮರಸ್ಯ ಬದುಕಿಗಾಗಿ ವಿಚಾರಸಂಕಿರಣ'ವೊಂದನ್ನು ನಡೆಸಲಾಯಿತು. ಕಾರ್ಯಕ್ರಮಕ್ಕಿಂತ ತಾಸು ಮುಂಚೆ ಸಂಗೀತಗೋಷ್ಠಿ ಏರ್ಪಡಿಸಿ ಅಲ್ಲಿ ಭಾವೈಕ್ಯತೆ ಬಿಂಬಿಸುವ ತತ್ವಪದ, ವಚನ, ಕ್ರಾಂತಿಗೀತೆಗಳನ್ನು ಹಾಡಿಸಲಾಯಿತು. ಸಾಮಾನ್ಯವಾಗಿ ಜ್ಯೋತಿ ಬೆಳಗಿಸಿ ಉದ್ಘಾಟಿಸುವುದು ವಾಡಿಕೆ. ಆದರೆ ಇಲ್ಲಿ ಸೌಹಾರ್ದ ಚಿಂತನೆ ವೇದಿಕೆಯು ಈ ಸಂಪ್ರದಾಯವನ್ನು ಮುರಿದು ಸಸಿಯೊಂದನ್ನು ನೆಡುವ ಮೂಲಕ ಸಂಕಿರಣವನ್ನು ಉದ್ಘಾಟಿಸಿತು. ತನ್ಮೂಲಕ ಅರ್ಥಪೂರ್ಣ ಪರಂಪರೆಗೆ ನಾಂದಿ ಹಾಡಿತು. ಪ್ರಾಸ್ತಾವಿಕ ಮಾತುಗಳನ್ನಾಡಿದ, ಸೌಹಾರ್ದ ಚಿಂತನವೇದಿಕೆಯ ಕಾರ್ಯದರ್ಶಿಯಾದ ಡಾ. ಮೀನಾಕ್ಷಿ ಬಾಳಿಯವರು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಭಾವೈಕ್ಯತೆ ಪರಂಪರೆಯನ್ನು ವಿವರಿಸಿದರು. ಉದ್ಘಾಟನಾ ಭಾಷಣವನ್ನು ಖ್ಯಾತ ಸಾಹಿತಿಗಳು, ಜನಪರ ಚಿಂತಕರೂ ಆಗಿರುವ ಮೂಡ್ನಾಕೂಡು ಚಿನ್ನಸ್ವಾಮಿ ಮಾಡಿದರು. ಮೂಡ್ನಾಕೂಡರು ಮಾತನ್ನಾಡುತ್ತಾ ವಿಚಾರವಾದಕ್ಕೆ ಹೆಸರಾದ ಕರ್ನಾಟಕ ಇಂದು ಭ್ರಷ್ಟಾಚಾರದಲ್ಲಿ ಮುಂಚೂಣಿಯಲ್ಲಿದೆ ಎಂದರೆ ಇದಕ್ಕಿಂತ ನಾಚಿಕೆ ಪಡುವ ಸಂಗತಿ ಇರಲಾರದು. ಸಂಘ ಪರಿವಾರಿಗಳು ಧರ್ಮದ್ವೇಷದ ಕಿಚ್ಚು ಹಚ್ಚುವ ಬದಲು ಭ್ರಷ್ಟಾಚಾರ ನಿರ್ಮೂಲನಾ ಕಾರ್ಯಕ್ರಮಗಳನ್ನು ಮಾಡಲಿ ಎಂದರು. ಸಂಕಿರಣದ ನೇತೃತ್ವ ವಹಿಸಿದ್ದ ಚಿತ್ರದುರ್ಗ ಶಿವಮೂರ್ತಿ ಮುರುಘರಾಜೇಂದ್ರ ಶರಣರು “ಬಸವಾದಿಗಳ ಚಳುವಳಿ ವೈದಿಕ ವಿರೋಧಿ ಚಳುವಳಿ. ಸಂಘ ಪರಿವಾರಿಗಳು ವೈದಿಕತೆಯ ವಕ್ತಾರರು. ಆದ್ದರಿಂದ ಅವರಲ್ಲಿ ಅಸ್ಪೃಶ್ಯತೆ, ಮಹಿಳಾ ವಿರೋಧಿ ಭಾವನೆಗಳು ಇನ್ನೂ ಜೀವಂತವಾಗಿವೆ ಎಂದು ಹೇಳಿದರು. ವಿಹೆಚ್‌ಪಿಯ ಮುಖಂಡ ವಿಶ್ವೇಶ್ವರ ಸ್ವಾಮೀಜಿಯ ಧೂರ್ತತನ ಹೊರಹಾಕುವ ಘಟನೆಯೊಂದನ್ನು ಈ ಸಂದರ್ಭದಲ್ಲಿ ಶರಣರು ಬಹಿರಂಗಗೊಳಿಸಿದರು.

ಚಿತ್ರದುರ್ಗ ಕಾರ್ಯಕ್ರಮವೊಂದಕ್ಕೆ ಆಗಮಿಸಿದ್ದ ಪೇಜಾವರ ಸ್ವಾಮೀಜಿ ಸಮಾನತೆ ಬಗ್ಗೆಭರ್ತಿ ಭಾಷಣ ಬಿಗಿದರಂತೆ. ಕಾರ್ಯಕ್ರಮ ಮುಗಿದ ನಂತರ ಚಿತ್ರದುರ್ಗದ ಶರಣರು ಪೇಜಾವರ ಸ್ವಾಮೀಜಿಯನ್ನು ಸಹಭೋಜನಕ್ಕೆ ಕರೆದರಂತೆ. ಆಷಾಢಭೂತಿ ಪೇಜಾವರ ಸ್ವಾಮಿ ನಾಟಕ ಮಾಡುತ್ತಾ ಲಗುಬಗೆಯಿಂದ ಸ್ನಾನ ಮಾಡಿ ಬಂದು




...ನೆಡುವ ಮೂಲಕ ವಿಶಿಷ್ಟ ರೀತಿಯ ಉದ್ಘಾಟನೆ

ಶರಣರು ಊಟಕ್ಕೆ ಬರುವಷ್ಟರಲ್ಲಿ ಒಣ ಪದಾರ್ಥಗಳಾದ ಉತ್ತತ್ತಿ, ಬದಮಾ, ಕಲ್ಲುಸಕ್ಕರೆ ತಿಂದು ಪಾರಾಗಿದ್ದಾನೆ. ಶೂದ್ರರು ಬೇಯಿಸಿದ ಅನ್ನ ತಿಂದಿಲ್ಲ. ಇಂಥ ಢಂಬಕರ ಬಣ್ಣದ ಮಾತುಗಳಿಗೆ ಮನಸೋಲಬಾರದೆಂದು ಶರಣರು ಎಚ್ಚರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರಾದ ಕೆ.ಆರ್.ದುರ್ಗಾದಾಸ್ ಅವರು ಶ್ರಮವಿರೋಧಿ ವೈದಿಕಶಾಹಿಯನ್ನು ಪಸರಿಸಲು ಕನ್ನಡಿಗರು ಬಿಡಬಾರದು. ಬಹುಮುಖೀ ಸಂಸ್ಕೃತಿಯನ್ನು ಧ್ವಂಸಗೊಳಿಸಲೆಂದೇ ವೈದಿಕರು ಯಾವತ್ತೂ ಸೋಗು ಹಾಕುತ್ತಾರೆ. ಆದರೆ ಅವರ ತಂತ್ರಗಳು ಇಲ್ಲಿ ಫಲಿಸುವುದಿಲ್ಲ ಎಂದು ಹೇಳಿದರು.

ಸೌಹಾರ್ದ ಚಿಂತನ ವೇದಿಕೆಯ ಅಧ್ಯಕ್ಷರು ಮತ್ತು ಸಮಾರಂಭದ ಅಧ್ಯಕ್ಷರೂ ಆಗಿದ್ದ ಕಾಶೀನಾಥ ಅಂಬಲಗಿಯವರು ಮಾತನಾಡುತ್ತಾ ಕೋಮುವಾದಿಗಳಿಗೆ ಭವಿಷ್ಯದ ಕಾಳಜಿ ಇರುವುದಿಲ್ಲ. ವರ್ತಮಾನದ ಗಳಿಗೆಗಳನ್ನು ದುರ್ಬಳಕೆ ಮಾಡಿಕೊಳ್ಳುವ ಕುತಂತ್ರ ಮಾತ್ರ ಇರುತ್ತದೆ. ಆದರೆ ಕಲ್ಯಾಣ ಕರ್ನಾಟಕವೆಂಬ ಈ ಭಾಗದ ಜನತೆಗೆ ಮತಾಂಧತೆಯ ಮಾತುಗಳು ರುಚಿಸಲಾರವು ಎಂದರು. ವೇದಿಕೆಯ ಉಪಾಧ್ಯಕ್ಷರಾದ ಬಿ.ವಿ.ಚಕ್ರವರ್ತಿಯವರು ವೇದಿಕೆಯ ಧ್ಯೇಯ, ಧೋರಣೆಗಳನ್ನು ವಿವರಿಸಿದರು. ಮುಂದುವರೆದು ದಲಿತ ಸಂವೇದನೆಯನ್ನೇ ಮೂಲಧಾತುವಾಗಿಸಿ ಕೊಂಡಿರುವ ವಚನಸಾಹಿತ್ಯ ಪರಂಪರೆಯ ವೀರಶೈವ ಮಠಗಳಲ್ಲಿ ವಿಹೆಚ್‌ಪಿ ಬರಬಾರದು. ಈ ಭಾಗದ ದಲಿತರು ಅದಕ್ಕೆ ಅವಕಾಶ ಕೊಡಲಾರರು ಎಂದರು. ಚಿಂತನ ವೇದಿಕೆಯ ಇನ್ನೋರ್ವ ಸಹಕಾರ್ಯದರ್ಶಿ ಅಮೃತಾ ಕಟಕೆ ಸ್ವಾಗತ ಕೋರಿದರು. ಸದಸ್ಯರಾದ ಭಾಗ್ಯಲತಾ ಶಾಸ್ತ್ರಿಯವರು ವಂದನಾರ್ಪಣೆ ಮಾಡಿದರು. ವೇದಿಕೆಯ ಸಂಘಟನಾ ಕಾರ್ಯದರ್ಶಿ ಕೆ.ನೀಲಾ ಅವರು ಸಮಾರಂಭವು ಎಲ್ಲಿಯೂ ದಿಕ್ಕುತಪ್ಪದಂತೆ ನಿಯಂತ್ರಿಸುತ್ತಾ ಸಂಚಾಲನೆಗೈದರು.

■ **ಡಾ.ಮೀನಾಕ್ಷಿ ಬಾಳಿ**
ಕಾರ್ಯದರ್ಶಿ,
ಸೌಹಾರ್ದ ಚಿಂತನ ವೇದಿಕೆ, ಗುಲಬರ್ಗಾ.



ಯಾವುದು ಜಾಹೀರಾತು? ಯಾವುದು ಸುದ್ದಿ!

ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿ ಇಲ್ಲವೇ ಬ್ರಿಗೇಡ್ ರಸ್ತೆಯಲ್ಲಿ - ಕೋರಮಂಗಲದ 'ಫೋರಂ'ನಲ್ಲಿ ಯಾವುದೇ ಚಿನ್ನಾಭರಣಗಳ ಮಳಿಗೆಯೋ-ವಜ್ರದಂಗಡಿಯೋ - ಶ್ರೀಮಂತರ ಸೂಟುಬೂಟು, ವಾಚು ಟೈ ಗಳಂಗಡಿಯೋ ಆರಂಭವಾದರೆ ಅದನ್ನು ಪ್ರಮುಖ ರಾಜಕೀಯ ಸುದ್ದಿಗಿಂತ ಜೋರಾಗಿ ಬಿಂಬಿಸುವಂತಹ ಪ್ರವೃತ್ತಿಗಳು ಮಾಧ್ಯಮಗಳಲ್ಲಿ ಇಂದು ತೀವ್ರವಾಗಿದೆ. ಜಾಹೀರಾತಾಗಬೇಕಾದದ್ದು ಸುದ್ದಿಯಾಗತೊಡಗಿರುವಾಗ ಸುದ್ದಿಯಾಗಬೇಕಾದದ್ದು ಜಾಹೀರಾತಗಬೇಕಾಗಿ ಬಂದಿದೆ.

ಇತ್ತೀಚಿನ ದಿನಗಳಲ್ಲಿ ಜಾಹೀರಾತುರೂಪದಲ್ಲಿ ಇರಬೇಕಾದ ಕೆಲವು ಮಾಹಿತಿಗಳು ಸುದ್ದಿಯ ರೂಪ ಪಡೆದುಕೊಳ್ಳುತ್ತಿವೆ. ಹಾಗೆಯೇ ಜನಸಾಮಾನ್ಯರಿಗೆ ಸುದ್ದಿಯ ರೂಪದಲ್ಲಿ ದೊರೆಯಬೇಕಾದ ಮಾಹಿತಿಗಳು, ಹಾಗೆ ಲಭ್ಯವಾಗದೆ ಹೋದಾಗ ಅನಿವಾರ್ಯವಾಗಿ ಜಾಹಿರಾತು ರೂಪ ಪಡೆದುಕೊಳ್ಳುತ್ತಿವೆ. ಆದರೆ ಹಾಗೆ ದುಬಾರಿಯಾದ ಜಾಹಿರಾತನ್ನು ಯಾರಿಗೆ ನೀಡಲು ಸಾಧ್ಯ?

ಶ್ರೀಮಂತರು ಶೋಕಿಗಾಗಿ ಬಳಸುವ ಸೌಂದಾರ್ಯಾಲಯಗಳಿಗೆ ಸಿಗುವ ಪ್ರಚಾರ ಸಾಮಾಜಿಕ ಕಳಕಳಿ ಉಳ್ಳವರಿಗೆ ಸಿಗುವುದಿಲ್ಲ. ಬೆಂಗಳೂರಿನ ಮಾಧ್ಯಮ ಹಣ ಉಳ್ಳವರಿಗೆ, ಅಧಿಕಾರದಲ್ಲಿರುವವರಗೆ ಮಾತ್ರ ಎಂಬಂತಾಗಿದೆ. ಇದು ಜಾಗತೀಕರಣ- ಉದಾರೀಕರಣದ ಪ್ರಭಾವವೋ, ಹಣವುಳ್ಳವರೊಂದಿಗೆ ಗುರುತಿಸಿಕೊಳ್ಳಬೇಕೆಂಬ ಕಾತರವೋ ಚರ್ಚಿಸಬೇಕಾದ ವಿಷಯವಾಗಿದೆ.

31.10.05 ರ ಪ್ರಜಾವಾಣಿಯ ಕ್ರೀಡಾಪುರವಣಿ ವಿಭಾಗದ 4ನೇಪುಟದಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟದ್ದು ಎಂದು ಹೇಳಲಾದ ಮಾಹಿತಿಗಳಿವೆ. ಅದರಲ್ಲಿ 'ಬಾನಾಡಿ ಹಕ್ಕಿಗಳಾಗಿ' ಎಂಬ ತಲೆಬರಹದಲ್ಲಿ ಕೇಶವ ಜಿ.ಝಿಂಗಾಡೆಯವರು ಗಗನ ಸಖಿ ಅಥವಾ ಗಗನ ಸಖರಾಗಬೇಕಾದರೆ, ಏರ್ ಹೊಸ್ಟೆಸ್ ಅಕಾಡೆಮಿಯಲ್ಲಿ ಡಿಪ್ಲೊಮಾ ಪದವಿಧರರಾದರೆ ಕೈತುಂಬಾ ಸಂಬಳ ದೊರೆಯುತ್ತದೆ ಎಂದು ಬಣ್ಣಿಸಿದ್ದಾರೆ.

ಕೆಲಸ ಸಿಕ್ಕಿದರೆ, ಕೈತುಂಬಾ ಸಂಬಳ ಸಿಗುವುದೇನೋ ನಿಜ. ಆದರೆ ಇಂತಹ ಅಕಾಡೆಮಿಗಳಲ್ಲಿ ಪಾಸಾದ ಎಷ್ಟು ಜನರಿಗೆ ಕೆಲಸ ಸಿಕ್ಕಿದೆ. ವರ್ಷಕ್ಕೆ 75 ಸಾವಿರದಿಂದ 1 ಲಕ್ಷ ರೂಪಾಯಿವರೆಗೆ ಫೀಸು ನೀಡಬೇಕಾದ ಈ ಡಿಪ್ಲೊಮಾ ಪರೀಕ್ಷೆಯಲ್ಲಿ ಪಾಸಾದವರು ಇನ್ನೂ ಸಹ ಕೆಲಸ ಇಲ್ಲದೆ ಅಲೆದಾಡುತ್ತಿರುವುದನ್ನು ಲೇಖಕರು ತಿಳಿಸದೆ, ಖಾಸಗಿ ಕಂಪನಿಯ ಲಾಭ ಹೆಚ್ಚಿಸಿಕೊಳ್ಳಲು ತನ್ನ ಕಾಣಿಕೆಯನ್ನು ನೀಡಿದ್ದಾರೇನೋ ಎಂದೆನಿಸುತ್ತದೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಏರ್ ಹೊಸ್ಟೇಸ್ ಅಕಾಡೆಮಿಯವರು ಜಾಹಿರಾತಿನ ಮೂಲಕ ಈ ಅಂಶಗಳನ್ನು ಶಿಕ್ಷಣಾರ್ಥಿಗಳ ಗಮನಕ್ಕೆ ತಂದಿದ್ದರೆ, ಅದನ್ನು ಆಯ್ದುಕೊಳ್ಳುವದು ಶಿಕ್ಷಣಾರ್ಥಿಗಳಿಗೆ ಬಿಟ್ಟ ವಿಚಾರ ಎಂದು ಸುಮ್ಮನಿರಬಹುದು. ಆದರೆ ಇದು ಪ್ರಜಾವಾಣಿಯಂತಹ ಪತ್ರಿಕೆಯಲ್ಲಿ ಲೇಖನದ ರೂಪದಲ್ಲಿ ಬಂದಿರುವುದರಿಂದ ಮೋಸ ಹೋಗುವವರೇ ಹೆಚ್ಚು.

ಅಡುಗೆ ಅನಿಲ ಅಭಾವ ಯಾಕೆ?

ಇತ್ತೀಚಿನ ದಿನಗಳಲ್ಲಿ ಅಡುಗೆ ಅನಿಲದ ಅಭಾವ ಹೆಚ್ಚುತ್ತಿದೆ. ಕಾಕತಾಳೀಯವಾಗಿ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಈ ಅಭಾವ ಹೆಚ್ಚಾಗುತ್ತಿದೆ. ಖಂಡಿತವಾಗಿಯೂ ಅಧಿಕಾರಸ್ಥ ರಾಜಕಾರಣಿಗಳ ಬೆಂಬಲಿಗರಾದ ಕೆಲವು ಏಜೆನ್ಸಿದಾರರ ಅವ್ಯವಹಾರ ಈ ಅಭಾವಕ್ಕೆ ಒಂದು ಕಾರಣ. ಆದರೆ ಪ್ರಮುಖ ಅಡುಗೆ ಅನಿಲ (ಎಲ್‌ಪಿಜಿ)ವನ್ನು ಉತ್ಪಾದಿಸುವ ಖಾಸಗಿ ಕಂಪನಿಯೊಂದು, ರಿಪೇರಿ ಮಾಡುವ ನೆಪದಲ್ಲಿ ಉತ್ಪಾದನೆಯನ್ನು ಸ್ಥಗಿತಗೊಳಿಸಿದ್ದು, ಇನ್ನೊಂದು ಕಾರಣ. ಅದು ಕೂಡಾ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಉತ್ಪಾದನೆ ಕುಂಠಿತಗೊಂಡಿದೆ. ವಿಶೇಷವಾಗಿ, ಇತ್ತೀಚೆಗೆ ಬೀಸಿದ ಕತ್ರಿನಾ, ರೀಟಾ ಮತ್ತು ವಿಲ್ಮಾ ಹೆಸರಿನಿಂದ ಕರೆಯಲ್ಪಟ್ಟಿರುವ ಚಂಡಮಾರುತಗಳಿಂದಾಗಿ ಅಮೆರಿಕಾಗಳಲ್ಲಿ ಸಂಸ್ಕರಣ ಕೇಂದ್ರಗಳಿಗೆ ಧಕ್ಕೆ ಉಂಟಾಗಿದೆ. ಆದ್ದರಿಂದ ಅಡುಗೆ ಅನಿಲವನ್ನು ಆಮದು ಮಾಡಿಕೊಳ್ಳಲಾರದಂತಹ ಪರಿಸ್ಥಿತಿ.

ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿರುವ ಸಾರ್ವಜನಿಕ ಉದ್ದಿಮೆಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಗಳು ಅಡುಗೆ ಅನಿಲವನ್ನು ಇತರೆ ದೇಶಗಳಿಂದ ಆಮದು ಮಾಡಿಕೊಂಡು ಅಭಾವವನ್ನು ನಿವಾರಿಸಲು ಪ್ರಯತ್ನಿಸುತ್ತಿವೆ. ಆದರೆ ಈ ಹಂತದಲ್ಲಿ ಖಾಸಗಿ ಕಂಪನಿಗಳು ತೈಲ ಸಂಸ್ಕರಣೆಯನ್ನು ನಿಲ್ಲಿಸಿದ್ದು ಸರಿಯಲ್ಲ.

ಇದು ಮಾಧ್ಯಮಗಳಲ್ಲಿ ಸುದ್ದಿಯಾಗಲಿಲ್ಲ. ಬದಲಾಗಿ ಇದರಲ್ಲಿ ಕೆಲವು ಅಂಶಗಳನ್ನು ಮೂರು ಸಾರ್ವಜನಿಕ ಉದ್ದಿಮೆಗಳು, ಪೆಟ್ರೋಲಿಯಂ ಖಾತೆಯ ಸಚಿವರ ಸಹಿಯೊಂದಿಗೆ ಜಾಹಿರಾತಿನ ಮೂಲಕ ನೀಡಿದ್ದವು (ಹಿಂದೂ, ನವೆಂಬರ್ 1, ಪುಟ 15)

ಶೇಕಡಾ 40 ರಷ್ಟು ಕುಟುಂಬಗಳು ಇಂದು ಅಡುಗೆ ಅನಿಲವನ್ನು ಬಳಸುತ್ತಿರುವ ಇಂದಿನ ಸಂದರ್ಭದಲ್ಲಿ ಮಾಧ್ಯಮಗಳಿಗೆ ಇದು ದೊಡ್ಡ ಸುದ್ದಿಯಾಗಬೇಕಾಗಿತ್ತು. ಅಡುಗೆ ಅನಿಲ ವಿತರಕರು ದೊಡ್ಡದೊಡ್ಡ ಹೋಟೆಲುಗಳೊಂದಿಗೆ, ವಾಹನ ಮಾಲಿಕರೊಂದಿಗೆ ಶಾಮೀಲಾಗಿ, ಸಬ್ಸಿಡಿ ರೂಪದಲ್ಲಿ ದೊರೆಯುತ್ತಿರುವ ಅಡುಗೆ ಅನಿಲವನ್ನು ವಾಣಿಜ್ಯ ಕಾರಣಗಳಿಗೆ ಮಾರಾಟ ಮಾಡುವುದರ ಮೂಲಕವೂ ಕೃತಕ ಅಭಾವ ಉಂಟಾಗುತ್ತಿದೆ. ಪ್ರಜಾಪ್ರಭುತ್ವದ 4ನೇ ಅಂಗ ಎಂದು ಗುರುತಿಸಲಾದ ಮಾಧ್ಯಮ ಜನಪರ ಕಾಳಜಿ ತೋರದೆ, ಲಾಭಕೋರ ನೀತಿಗೆ ಮುಗಿಬೀಳುತ್ತಿರುವುದು ವಿಪರ್ಯಾಸ. ಇದು ಜನಹಿತ ಹಿತದೃಷ್ಟಿಯಿಂದ ಒಳಿತಲ್ಲ.

■ **ಬಾಲಕೃಷ್ಣ ಶೆಟ್ಟಿ**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH